3. ಶಾಸನ ರಚನೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

(ಅ) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2006 ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, 2006ನೇ ಸಾಲಿನ ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೇ, ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ, ರಾಜ್ಯಾಂಗಕ್ಕೆ 93ನೇ ತಿದ್ದುಪಡಿ ತಂದಂಥ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ವೃತ್ತಿಶಿಕ್ಷಣ ಸಂಸ್ಥೆಗಳ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷನ ಸಂಸ್ಥೆಗಳ ನಿಯಂತ್ರಣ ಮತ್ತು ಶುಲ್ಕ ನಿಗದಿ ಮಾಡುವುದಕ್ಕಾಗಿ ಹಿಂದೆ ಒಂದು ವಿಧೇಯಕವನ್ನು ನಾವು ಮಾಡಲೇಬೇಕಾಗಿತ್ತು. ಆ ವಿಧೇಯಕವನ್ನು ನಾವು ಹಿಂದೆ ಪಾಸ್ ಮಾಡಿದ್ದೇವೆ. ಆ ವಿಧೇಯಕ ನಾವು ಮಾಡದೇ ಹೋಗಿದ್ದಿದ್ದರೆ, ನಮ್ಮ ರಾಜ್ಯದ ಪ್ರತಿಭಾನ್ವಿತ ಮಕ್ಕಳು, ವಿದ್ಯಾರ್ಥಿಗಳು ಯಾರಿದ್ದಾರೆ, ಅವರುಗಳಿಗೆ ಸೀಟುಗಳು ಸಿಗತಕ್ಕ ವ್ಯವಸ್ಥೆ ಆಗುತ್ತಾ ಇರಲಿಲ್ಲ. ಹಾಗಾಗಿ, ಅವತ್ತು ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲೇ, ವಿಧೇಯಕವನ್ನು ಮಂಡಿಸಿ, ಅದನ್ನು ಈ ಸದನ ಮತ್ತು ಮೇಲ್ಮನೆಯಲ್ಲಿ ಪಾಸ್ ಮಾಡಿಕೊಂಡು, ವಿಧೇಯಕವನ್ನು ಮಾಡಿದೆವು. ನಾವು ಏನೇ ವಿಧೇಯಕ ಮಾಡಿದರೂ ಕೂಡ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟಿನೊಳಗೆ ಒಂದು ಮಾತು ಇತ್ತು. ನೀವು ಇದನ್ನು ಮ್ಯೂಚುಯಲ್ ಕನ್‌ಸೆಂಟ್ ಮಾಡಿಕೊಂಡು, ಮಾಡಿಕೊಳ್ಳುವುದಾದರೆ, ಒಂದು ವ್ಯವಸ್ಥೆ ಮಾಡಬಹುದು ಎಂದು. ಆದರೆ, ಅಲ್ಲಿಯತನಕ, ಅದರೊಳಗೆ ಇದ್ದಂಥ ಮುಂಚಿನ ಜಡ್ಜ್‌ಮೆಂಟ್ ಪ್ರಕಾರ ಮಾತುಕತೆಗೆ ಯಾರೂ ತಯಾರು ಇರಲಿಲ್ಲ. ಹಾಗಾಗಿ, ಅದನ್ನು ನಿಯಂತ್ರಣ ಮಾಡಲೇಬೇಕಾದ ಪರಿಸ್ಥಿತಿ ಇತ್ತು. ಈ ಬಿಲ್ ಪಾಸ್ ಮಾಡಿದ ಮೇಲೆ, ಅದರ ನೀತಿ ನಿಬಂಧನೆಗಳನ್ನು ನೋಡಿದ ಮೇಲೆ, ಯಾರು ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಇದ್ದಾರೆ ಅವರೂ ಸಹ ಈ ಬಿಲ್ ಪಾಸಾದ ಮೇಲೆ ನಮ್ಮ ಜೊತೆಗೆ ಮಾತನಾಡುವುದಕ್ಕೆ ತಯಾರಾಗಿ ಬಂದರು. ಆ ಮಾತುಕತೆ ಹಿನ್ನೆಲೆಯಲ್ಲಿ ಇವತ್ತು ಒಂದು ಹೊಸ ವಿಧೇಯಕವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ದಯವಿಟ್ಟು ಇದಕ್ಕೆ ಬೆಂಬಲ ಕೊಡಬೇಕೆಂದು ಕೇಳುತ್ತೇನೆ. ಈ ವಿಧೇಯಕದ ಪ್ರಕಾರ ನಮ್ಮ ರಾಜ್ಯದ ಮಕ್ಕಳಿಗೆ ಬಹಳ ದೊಡ್ಡ ಲಾಭ ಆಗುತ್ತದೆ. ಹಿಂದಿನ ವ್ಯವಸ್ಥೆ ಪ್ರಕಾರ ನಮ್ಮ ರಾಜ್ಯದ ಮಕ್ಕಳಿಗೆ, ಯಾರಿಗೂ ಒಂದು

ಸೀಟೂ ಸಿಗುತ್ತಾ ಇರಲಿಲ್ಲ. ಕಳೆದ ವರ್ಷ ನಮ್ಮ ರಾಜ್ಯದ ಮಕ್ಕಳಿಗೆ ಏನು ಈ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳು ಸಿಗುತ್ತಾ ಇತ್ತು. ಅದಕ್ಕೆ ಹೋಲಿಕೆ ಮಾಡಿ ನೋಡಿದರೆ ಈಗ ನಾವು ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ನಮ್ಮ ರಾಜ್ಯದ ಮಕ್ಕಳಿಗೆ ತುಂಬಾ ದೊಡ್ಡ ಪ್ರಮಾಣದ ಲಾಭ ಆಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಫ್ರೀ ಸೀಟ್ಸ್ ಎಂದು ನಾವು ಒಂದು ಕೆಟಗರಿಯನ್ನು ಕರೆಯುತ್ತೇವೆ. ಅದರಲ್ಲಿ ಕಳೆದ ವರ್ಷ ನಮ್ಮ ರಾಜ್ಯದ ಮಕ್ಕಳಿಗೆ ಮೆಡಿಕಲ್ ಕಾಲೇಜಿನೊಳಗೆ 849 ಸೀಟುಗಳು ಸಿಗುತ್ತಾ ಇತ್ತು. ಈ ವರ್ಷ 990 ಸೀಟುಗಳು ನಮಗೆ ಸಿಗುತ್ತವೆ. ಡೆಂಟಲ್ ಕಾಲೇಜುಗಳಲ್ಲಿ ಕಳೆದ ವರ್ಷ 769 ಸೀಟು ಸಿಗುತ್ತಾ ಇತ್ತು. ಈ ವರ್ಷ 897 ಸೀಟುಗಳು ಸಿಗುತ್ತವೆ. ಇಂಜಿನಿಯರಿಂಗ್‌ನೊಳಗೆ ಕಳೆದ ವರ್ಷ 11,986 ಸೀಟುಗಳು ಸಿಗುತ್ತಾ ಇತ್ತು ಈ ವರ್ಷ 20,026 ಸೀಟುಗಳು ಸಿಗುತ್ತವೆ. ಹಾಗೆಯೇ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮತ್ತು ಓ.ಬಿ.ಸಿ. ಮಕ್ಕಳಿಗೆ ಕಳೆದ ವರ್ಷಕ್ಕಿಂತ ಸುಮಾರು ನಾಲ್ಕು ಸಾವಿರ ಜಾಸ್ತಿ ಫ್ರೀ ಸೀಟುಗಳು ಸಿಗುವ ಹಾಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಮತ್ತು ಅದರಂತೆ ಈ ಹೊಸ ವಿಧೇಯಕವನ್ನು ತಂದಿದ್ದೇವೆ. ಇದು ಈ ವರ್ಷಕ್ಕೆ ಮಾತ್ರ. ಮುಂದಿನ ವರ್ಷ, ನಮ್ಮ ಈ ಎಲ್ಲಾ ಅನುಭವದ ಹಿನ್ನೆಲೆಯಲ್ಲಿ, ಆ ಅಡ್ಮಿಷನ್ ಪೀರಿಯಡ್ ಮುಗಿದ ತಕ್ಷಣ ಆದಷ್ಟು ಬೇಗ ಆಗಸ್ಟ್, ಸೆಪ್ಟಂಬರ್ ತಿಂಗಳಲ್ಲಿಯೇ ಕುಳಿತು, ಅಂತಿಮವಾಗಿ ಈ ರಾಜ್ಯದೊಳಗೆ ವೃತ್ತಿಶಿಕ್ಷಣ ಪ್ರವೇಶದಲ್ಲಿ ಯಾವುದೇ ಗೊಂದಲ ಇರಬಾರದು. ಒಂದು ಪರ್ಮನೆಂಟ್ ಸೆಲ್ಯೂಷನ್ ಕಂಡುಹಿಡಿಯಬೇಕೆಂಬ ಹಿನ್ನೆಲೆಯಲ್ಲಿ ಮಾತುಕತೆ ನಡೆಸಿ, ಸೌಹಾರ್ದಯುತ ವಾತಾವರಣ ನಿರ್ಮಾಣ ಮಾಡಿದ್ದೇವೆ. ಇದರಿಂದ ನಮ್ಮ ರಾಜ್ಯದ ಮಕ್ಕಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಲಾಭ ಆಗುತ್ತದೆ. ಏನೂ ಇಲ್ಲದೇ ಇರತಕ್ಕಂಥದ್ದರಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಲಾಭ ಆಗುತ್ತದೆ. ಅಂದರೆ, ಲಾಭ ಎನ್ನುವ ಪದಕ್ಕಿಂತ ಅವರಿಗೆ ಅನುಕೂಲ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಹಾಗಾಗಿ, ಇವತ್ತು ನಾನು ತಂದಿರತಕ್ಕ ಈ ವಿಧೇಯಕವನ್ನು ಈ ಸಭೆ ಅನುಮೋದಿಸಿ ನನಗೆ ಇನ್ನಷ್ಟು ಬಲ ಕೊಡಬೇಕು ಮತ್ತು ನಮ್ಮ ರಾಜ್ಯದ ವಿದ್ಯಾರ್ಥಿವೃಂದಕ್ಕೆ ಅನುಕೂಲ ಮಾಡಿಕೊಡಬೇಕು. ಈ ವಿಧೇಯಕದ ಮೂಲಕ ರಾಜ್ಯದೊಳಗೆ ಒಂದು ಒಳ್ಳೆಯ ವಾತಾವರಣ ನಿರ್ಮಾಣವಾಗುತ್ತದೆ. ಈಗಾಗಲೇ ಸಿ.ಇ.ಟಿ. ಬಗ್ಗೆ ಎಲ್ಲಾ ವ್ಯವಸ್ಥೆ ನಡೆದು, ಮೊನ್ನೆ 26ನೇ ತಾರೀಖಿನಿಂದ ಸ್ಪೆಷಲ್ ಕೆಟಗರಿಗಳಿಗೆ ಕೌನ್ಸಿಲಿಂಗ್ ಸೋಮವಾರದಿಂದ ನಡೆದು, ಇವತ್ತಿನವರೆಗೆ ನಡೆದುಕೊಂಡು ಬರುತ್ತಿದೆ. 3ನೇ ತಾರೀಖಿನಿಂದ ಅಂದರೆ ಜನರಲ್‌ನವರಿಗೆ ನಡೆಯುತ್ತದೆ. ಹಾಗಾಗಿ, ರಾಜ್ಯದ 20–30 ಸಾವಿರ ವಿದ್ಯಾರ್ಥಿಗಳಿಗೆ ಅನುಕೂಲವಾಗತಕ್ಕ ಈ ವಿಧೇಯಕಕ್ಕೆ ಸದನ ಮನ್ನಣೆ ಕೊಟ್ಟರೆ ಖಂಡಿತವಾಗಿಯೂ ಆ 20–30 ಸಾವಿರ ವಿದ್ಯಾರ್ಥಿಗಳು ನಿಟ್ಟುಸಿರು ಬಿಡುತ್ತಾರೆ. ಇಲ್ಲವಾದರೆ, ಅವರ ಭವಿಷ್ಯವೇ ಗೊಂದಲದಲ್ಲಿ ಬೀಳುತ್ತದೆ. 3ನೇ ತಾರೀಖು ಇರತಕ್ಕ ಕೌನ್ಸಿಲಿಂಗ್ ಚೆನ್ನಾಗಿ ನಡೆದುಕೊಂಡು ಹೋಗುವ ಹಾಗೆ ವ್ಯವಸ್ಥೆಯಾಗಬೇಕು. ಅದಕ್ಕೆ ಬೆಂಬಲ ಸಿಗುತ್ತದೆ. ಹಾಗಾಗಿ ಈ ವಿಧೇಯಕವನ್ನು

ನಾನು ಹೇಗೆ ಮಂಡಿಸಿದ್ದೇನೆ. ಹಾಗೆಯೇ ಈ ವಿಧೇಯಕವನ್ನು ದಯಮಾಡಿ ಪಾಸ್ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಫೀ ಸ್ಟ್ರಕ್ಚರ್ ಬಗ್ಗೆಯೂ ವಿವರ ಕೊಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ವೃತ್ತಿಶಿಕ್ಷಣ ಮಸೂದೆ ಹೋದ ಸಲ ಸದನದಲ್ಲಿ ಚರ್ಚೆಯಾದಾಗ ನಾವು ನೇರವಾಗಿ ಮಂತ್ರಿಯವರಿಗೆ ಹೇಳಿದ್ದೆವು. ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ ಅಥವಾ ಪ್ರಸ್ತಾವನೆಯನ್ನು 8 ದಿವಸ ಮುಂದಕ್ಕೆ ಹಾಕಿ, ಇದರ ಬಗ್ಗೆ ಸಮಾಲೋಚನೆ ಆಗಬೇಕೆಂದು ಹೇಳಿದ್ದೆವು. ಅದಕ್ಕೆ ಅವರು ಇಲ್ಲ ಎಂದು ಹೇಳಿದರು. ಮೊದಲು ಹೇಳಿದರು. ಯಾರು ಉಲ್ಲಂಘನೆ ಮಾಡುತ್ತಾರೆ. ಅವರಿಗೆ 7 ವರ್ಷ ಶಿಕ್ಷೆ ಕೊಡುತ್ತೇನೆಂದು ಹೇಳಿದರು. ನಾವು ಮೊದಲಿಂದಲೂ ಏನು ಹೇಳಿದ್ದೇವೆಂದರೆ, ರಾಜ್ಯದ ಹಿತದೃಷ್ಟಿಯಿಂದ, ಹಳ್ಳಿ ಪ್ರದೇಶದಲ್ಲಿರತಕ್ಕ ಜನರಿಗೆ ಇವತ್ತು ಹೆಚ್ಚು ಉತ್ತೇಜನ ಕೊಡಬೇಕು ಮತ್ತು ಈ ಶಿಕ್ಷಣ ಸಂಸ್ಥೆಗಳೇನು ರಾಜ್ಯದಲ್ಲಿ ನಡೆಯುತ್ತಾ ಇವೆ. ಅವುಗಳಲ್ಲಿ ರೂರಲ್ ಏರಿಯಾದವರಿಗೆ ವೈಟೇಜ್ ಕೊಡಬೇಕು. ಹೇಗೆ ಕೊಡುವುದು? ಪಿ.ಯು.ಸಿ. ಮತ್ತು ಸಿ.ಇ.ಟಿ. ಮಾರ್ಕ್ಸ್‌ನ್ನು ತೆಗೆದುಕೊಳ್ಳಬೇಕು. ಪಿ.ಯು.ಸಿ. ಮತ್ತು ಸಿ.ಇ.ಟಿ. ಮಾರ್ಕ್ಸ್‌ಗೆ, ನೀವು ಆಗುವುದಿಲ್ಲವೆಂದು ಅಲ್ಲಗಳೆದಿರಿ. ಮೊನ್ನೆ ಕೂಡ ತಾವು ಸಭೆ ಕರೆದಿದ್ದೀರಿ. ನಾನು ಮಾಧುಸ್ವಾಮಿಯವರು, ಶ್ರೀರಾಮ ರೆಡ್ಡಿಯವರು, ವಾಟಾಳ್ ನಾಗರಾಜ್‌ರವರು ಮತ್ತು ಜಯಪ್ರಕಾಶ್ ಹೆಗಡೆಯವರು ಹೇಳಿದ್ದೇವೆ. ನೀವು ತರಾತುರಿಯಾಗಿ ಬಿಲ್ ತರುತ್ತಾ ಇದ್ದೀರಿ. ಈ ಬಿಲ್ಲಿನಿಂದ ಯಾರಿಗೂ ಕೂಡ ಲಾಭ ಆಗುತ್ತಾ ಇಲ್ಲ. ತಮಿಳುನಾಡಿನಲ್ಲಿ ಏನು ಮಾಡಿದ್ದಾರೆ. ಪಿ.ಯು.ಸಿ. ಮತ್ತು ಸಿ.ಇ.ಟಿ. ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಯಾವ ಯಾವ ಅಂಶಗಳನ್ನು ಪ್ರಸ್ತಾಪ ಮಾಡಿದ್ದೇವೆ. ಆ ಬಗ್ಗೆ ಲಾ ಸೆಕ್ರೆಟರಿ ಕರೆಸಿ, ಅಡ್ವೋಕೇಟ್ ಜನರಲ್‌ನವರನ್ನು ಕರೆಸಿ, ಇನ್ನೊಂದು ಸಭೆ ಮಾಡಿ ಎಂದು ಹೇಳಿದೆವು. ಮಾನ್ಯ ವಿ.ಎಸ್. ಆಚಾರ್ಯರವರೂ ಇದ್ದರು. ಆಯಿತು ಮಾಡೋಣ ಎಂಬ ಮಾತನ್ನು ಹೇಳಿದರು. ಹೋದ ಸಲ ನಾನು ಮುಖ್ಯಮಂತ್ರಿಯಾದಾಗ, ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಇದ್ದರು. ಪ್ರತಿಯೊಂದು ವಿಷಯದಲ್ಲೂ ಹತ್ತಾರು ಸಲ ಸಮಾಲೋಚನೆ ಮಾಡಿದ್ದೇವೆ. ಲಾ ಸೆಕ್ರಟರಿ ಜೊತೆಗೆ ಅಡ್ವೋಕೇಟ್ ಜನರಲ್‌ರವರದ ಜೊತೆಗೆ ಮತ್ತು ಎಲ್ಲಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರ ಜೊತೆಯಲ್ಲೂ ಕೂಡ ಸಮಾಲೋಚನೆ ಮಾಡಿದ್ದೇವೆ. ಎಲ್ಲರಿಗೂ ಅವಕಾಶ ಮಾಡಿಕೊಟ್ಟಿದ್ದೇವೆ. ಇದು ಏನಾಗುತ್ತದೆ ಎಂದರೆ ರಾಜ್ಯದ ಬಡ ಮಕ್ಕಳಿಗೆ ಮತ್ತು ವೃತ್ತಿಶಿಕ್ಷಣ ತರತಕ್ಕಂಥ ತಮ್ಮದು ಏನು ಉದ್ದೇಶವಿದೆ ಇದು ಎಲ್ಲಾ ಕಡೆಗೂ ಕೂಡ ಸರ್ವವ್ಯಾಪ್ತಿಯಾಗಿ ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯ ಮೂಡಿಸತಕ್ಕಂಥ ಬಿಲ್ ಆಗಬೇಕು. ನೀವು ಯಾರ ಜೊತೆಯೂ ಸಹ ಮಾತನಾಡುವುದಕ್ಕೆ ರೆಡಿಯಾಗಿಲ್ಲ. ಇವತ್ತು ಏಕಾಏಕಿಯಾಗಿ ಶಿಕ್ಷಣ ಸಂಸ್ಥೆಗಳ ಜೊತೆಗೆ ತಾವು ಒಪ್ಪಂದ ಮಾಡಿಕೊಂಡು ಇವತ್ತು ಬಿಲ್ ತರುತ್ತಿದ್ದೀರಿ. ಇವತ್ತು ಫೀ ಸ್ಟ್ರಕ್ಚರ್ ಬಗ್ಗೆ ತಾವು ಏನೂ ಹೇಳಿಲ್ಲ. ಇನ್ನೂ ರೆಗ್ಯುಲೇಟೆಡ್ ಕಮಿಟಿ ಮಾಡಬೇಕೆಂದು ಹೇಳಿದ್ದೀರಿ. ರೂಲ್ಸ್ ಫ್ರೇಮ್

ಮಾಡಿಲ್ಲ. ಈಗಾಗಲೇ ಎಲ್ಲಾ ಕಡೆಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಅಡ್ಮಿಷನ್ ಪ್ರಾರಂಭವಾಗಿದೆ. ಸೀಟು ಭರ್ತಿಯಾಗಿದೆ. ಹಣ ತೆಗೆದುಕೊಳ್ಳುತ್ತಿದ್ದಾರೆ. ಎಲ್ಲಾ ನಡೆಯುತ್ತಿದೆ. ಇವತ್ತು ತಾವು ಬಿಲ್ ತರುತ್ತಿದ್ದೀರಿ. ನಾನು ನಿಮ್ಮಿಂದ ಮತ್ತು ನಮ್ಮ ಮಾನ್ಯ ಆಚಾರ್ಯರವರ ಕಡೆಯಿಂದ ಈ ರೀತಿಯ ಬಿಲ್ಲನ್ನು ನಿರೀಕ್ಷಿಸಿರಲಿಲ್ಲ. ಬಹಳ ದಿವಸದ ನಂತರ ಅಧಿಕಾರ ತಮ್ಮ ಕೈಯಲ್ಲಿ ಬಂದಿದೆ. ತಾವು ಶಿಕ್ಷಣ ಸಚಿವರಾಗಿದ್ದೀರಿ. ಈ ಒಂದು ಬಿಲ್ ತರತಕ್ಕಂಥ ರೀತಿಯಲ್ಲಿ ಸಮಗ್ರವಾದ ಚರ್ಚೆ ಮಾಡಿ ತರುತ್ತೀರಿ ಎಂದು ನಮ್ಮ ಅಭಿಪ್ರಾಯ ಇತ್ತು. ಇವತ್ತು ಏಕಾಏಕೀಯಾಗಿ ತಾವು ಈ ಬಿಲ್‌ನ್ನು ತಂದಿದ್ದೀರಿ. ಇದು ಇವತ್ತೇ ಪಾಸ್ ಮಾಡಬೇಕಾಗಿದೆ. ನಿನ್ನೆ ಕೂಡ ತಮ್ಮ ಕೊಠಡಿಯಲ್ಲಿ ಚರ್ಚೆಯಾಯಿತು. ಚರ್ಚೆಯಾದ ಮೇಲೆ ಬೇರೆ ವಿಷಯಗಳನ್ನು ಬದಿಗೊತ್ತಿ ಈ ವಿಷಯವನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನವಾಯಿತು. ಫೀ ಸ್ಟ್ರಕ್ಚರ್ ಬಗ್ಗೆ ತಾವು ಹೇಳಿ. ಈಗ ಮೊದಲ 40 ಸೀಟ್‌ಗೆ 15 ಸಾವಿರ ರೂಪಾಯಿ, ನಂತರದ 20 ಸೀಟ್‌ಗೆ 85 ಸಾವಿರ ರೂಪಾಯಿ ಇವತ್ತು ತೆಗೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ನೀವು ಹೇಳಬೇಕು. ಶ್ರೀ ರಂಗವಿಠಲಾಚಾರ್ಯ ಫೀಜ್ ಕಮಿಟಿ ಇತ್ತು. ಅದನ್ನು ತೆಗೆದಿರಿ. ಅದರ ಬಗ್ಗೆ ಏನಿದೆ ಹೇಳಲಿಲ್ಲ. ಮತ್ತೆ ಇದೇ ರೀತಿಯಾಗಿ ಮೊದಲ 25 ಸೀಟ್‌ಗೆ 45 ಸಾವಿರ ರೂಪಾಯಿ, ನಂತರದ 25 ಸೀಟ್‌ಗೆ 29 ಸಾವಿರ ರೂಪಾಯಿ, ಮತ್ತೆ ಮೆಡಿಕಲ್‌ನಲ್ಲಿ 2005–06ರಲ್ಲಿ 1 ಲಕ್ಷ 65 ಸಾವಿರ ಇಟ್ಟಿದ್ದೆವು. ಇವತ್ತು ಏನಾಗಿದೆ. 2 ಲಕ್ಷ 90 ಸಾವಿರ ಇದೆ. ಇವತ್ತು ಇಂಜಿನಿಯರಿಂಗ್‌ನಲ್ಲಿ 11 ಸಾವಿರದಿಂದ 35 ಸಾವಿರ ರೂಪಾಯಿಗಳಿಗೆ ಫೀ ಇದೆ. ಈಗ 23 ಸಾವಿರ ರೂಪಾಯಿಗಳಿಂದ 85 ಸಾವಿರ ರೂಪಾಯಿಗಳವರೆಗೂ ಇದೆ. ಈ ರೀತಿಯಾಗಿ ಫೀ ಸ್ಟ್ರಕ್ಚರ್‌ನಲ್ಲಿ ತಾರತಮ್ಯದಿಂದ ಸಿ.ಇ.ಟಿ.ಗೆ 20 ವಿದ್ಯಾರ್ಥಿಗಳಿಗೆ 85 ಸಾವಿರ ರೂಪಾಯಿ ಫೀ ಆಗಿದೆ. ಮೆರೀಟ್ ನಿರ್ಧರಿಸುವಾಗ ಪಿ.ಯು.ಸಿ. ಅಂಕಗಳ ಬಗ್ಗೆ ಹೇಳಿದ್ದೇವೆ. ಇವೆಲ್ಲದರ ಬಗ್ಗೆ ಅವತ್ತು ತಾವು ಮತ್ತು ನಾವೆಲ್ಲರೂ ಕೂಡ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಉಲ್ಲೇಖ ಮಾಡಿದ್ದೇವೆ. ಇದರ ಬಗ್ಗೆ ಸಮರ್ಪಕವಾದ ಉತ್ತರ ತಮ್ಮಿಂದ ಬಂದಿಲ್ಲ. ಯಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಅವರಲ್ಲಿ ಒಪ್ಪಂದ ಮಾಡಿರುವಂತಾದ್ದು ನಡೆದಿದೆ. ಒಪ್ಪಂದ ಮಾಡಿಕೊಳ್ಳತಕ್ಕಂಥ ಕಾಲದಲ್ಲಿ ನಮ್ಮನ್ನೂ ಕೂಡ ಕರೆಸಬೇಕಾಗಿತ್ತು. ನಾವು ಒಪ್ಪಂದ ಮಾಡಿಕೊಳ್ಳುವುದಕ್ಕೆ ತಯಾರಿಲ್ಲವೆಂದು ಹೇಳಿದ್ದಿರಿ. ಸ್ವಾಮೀಜಿಗಳೇ ಇರಲಿ ಯಾರೇ ಇರಲಿ ಶಿಕ್ಷಣ ಸಂಸ್ಥೆಗಳನ್ನು ಶಿಕ್ಷೆ ಮಾಡುತ್ತೇವೆ. ಜೈಲಿಗೆ ಹಾಕುತ್ತೇವೆಂದು ತಾವು ಹೇಳಿದ್ದೀರಿ. ಪಿ.ಯು.ಸಿ. ಮಾರ್ಕ್ಸ್‌ನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎನ್ನುವ ಮಾತು ಹೇಳಿದ್ದಿರಿ. ನಾವು ಪಿ.ಯು.ಸಿ. ಮಾರ್ಕ್ಸ್ ಗಣನೆಗೆ ತೆಗೆದುಕೊಳ್ಳಬೇಕು. ಬೇರೆ ರಾಜ್ಯದಲ್ಲಿ ಹಾಗೆ ತೆಗೆದುಕೊಂಡಿದ್ದಾರೆ. ಅದಕ್ಕೆ ಮಾನ್ಯ ಅಧ್ಯಕ್ಷರೇ ಇದು ಜನಪರ ಮಸೂದೆಯಲ್ಲ. ರಾಜ್ಯದ ಬಡ ಮಕ್ಕಳಿಗೆ ಸಹಾಯ ಮಾಡತಕ್ಕಂಥ ಮಸೂದೆಯಲ್ಲ. ರೂರಲ್ ಏರಿಯಾದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಏನು ಇದ್ದಾರೆ. ಅವರಿಗೆ ಅನುಕೂಲ ಮಾಡತಕ್ಕಂಥಾದ್ದಲ್ಲ. ರೈತರ ಮಕ್ಕಳಿಗೆ ಇದರಿಂದ ಯಾವ ಲಾಭವಾಗುತ್ತಿಲ್ಲ. ಇಷ್ಟು ಫೀಜು

ಕಟ್ಟಲು ಆಗುವುದಿಲ್ಲ. ಇವತ್ತು ನೀವು ಒಮ್ಮಿಂದ ಒಮ್ಮೆ ಒಪ್ಪಂದ ಮಾಡಿದ್ದೀರಿ. ಒಂದು ಏನು ಹೇಳುತ್ತೀರಿ ಹೆಚ್ಚು ಇಂಜಿನಿಯರಿಂಗ್ ಸೀಟು ಸಿಗುತ್ತದೆ ಎನ್ನುವ ಮಾತು. ಮೆಡಿಕಲ್‌ನಲ್ಲಿ ಏನಿದೆ? ಇದು ಬರೀ ಅರ್ಬನ್ ಏರಿಯಾಗೆ ಮಾನ್ಯ ಶಂಕರಮೂರ್ತಿಯವರು ಮೊದಲೇ ಹೇಳಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗಲೂ ಸಹ ಮೊನ್ನೆ ಹೇಳಿದ್ದರು. ನೀವು ಇದನ್ನು ಪೋಸ್ಟ್‌ಪೋನ್ ಮಾಡಿ ನಾವು ಮತ್ತೆ ಮಾತನಾಡುತ್ತೇವೆಂದು ಹೇಳಿದರೂ ಕೂಡ ಅವರು ಒಪ್ಪಲಿಲ್ಲ. ಅದಕ್ಕೆ ನಾವು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈಗಾಗಲೇ ತಮ್ಮದೇ ಆದ ಎ.ಬಿ.ವಿ.ಪಿ. ಏನು ಒಂದು ರಾಷ್ಟ್ರೀಯ ವಿದ್ಯಾರ್ಥಿ ಸಂಘ ಇದೆ. ಅವರೂ ಕೂಡ ಈ ಬಿಲ್ಲಿಗೆ ಅಪೋಜ್ ಮಾಡಿದ್ದಾರೆ. ಎಲ್ಲರೂ ಕೂಡ ವಿರೋಧ ಮಾಡುತ್ತಿದ್ದಾರೆ. ಪಾಲಕರು ಕೂಡ ವಿರೋಧ ಮಾಡುತ್ತಿದ್ದಾರೆ. ಎಲ್ಲಾ ಹಂತಗಳಲ್ಲೂ ಕೂಡ ಅಂದರೆ ಇವತ್ತಿನ ದಿವಸ ಕನ್ನಡಪ್ರಭಾದಲ್ಲಿ ಬಂದಿದೆ. ಬೇರೆ ಕಡೆಯಲ್ಲಿ ಬಂದಿದೆ. ಅದಕ್ಕೆ ಸರಿಯಾದ ರೀತಿಯಲ್ಲಿ ಬಿಲ್ ಮಂಡಿಸತಕ್ಕಂಥ ರೀತಿಯಲ್ಲಿ, ಮಾನ್ಯ ಶಂಕರಮೂರ್ತಿ ಯವರಿಗೆ ಇವತ್ತು ಶಿಕ್ಷಣ ಮಂತ್ರಿಗಳಾಗಿ ಕೆಲಸ ಮಡತಕ್ಕಂಥ ಅವಕಾಶ ಸಿಕ್ಕಿದೆ. ನನಗೆ ನಿಮ್ಮಿಂದ ಈ ರೀತಿಯ ಅಪೇಕ್ಷೆ ಇರಲಿಲ್ಲ. ಇದು ಬ್ಯಾಡ್ ಬಿಲ್, ಮತ್ತೊಮ್ಮೆ ಎಲ್ಲರನ್ನೂ ಕರೆಸಿ ಸಮರ್ಪಕವಾಗಿ ಚರ್ಚೆಯಾಗಿ ನಂತರ ಸದನದಲ್ಲಿ ಮಂಡಿಸಬೇಕು. ಸ್ಪಷ್ಟವಾದ ಉತ್ತರ ಬರಬೇಕು ನಿಮ್ಮ ಉತ್ತರದಿಂದ ನಾವು ಸಹ ಸಮಾಧಾನವಾಗಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ಇವತ್ತು ಶ್ರೀಮಾನ್ ಶಂಕರಮೂರ್ತಿಯವರು ಮಂಡಿಸಿದಂತಹ ಈ ಬಿಲ್ ಕೇವಲ 9 ತಿಂಗಳಿಗೆ ಮಾತ್ರ ಇದೆ. ಏಕೆಂದರೆ ಇದರಲ್ಲಿ ಅಕ್ಯಾಡೆಮಿಕ್ ಇಯರ್ ಕೊಟ್ಟಿದ್ದಾರೆ. ಈ ಬಿಲ್ ಕೇವಲ ಈ ಒಂದು ಅಕಾಡೆಮಿಕ್ ಇಯರ್ ಅಂದರೆ ಹೆಚ್ಚು ಕಡಿಮೆ 9–10 ತಿಂಗಳಿಗೆ ಮಾತ್ರ ಅನ್ವಯವಾಗತಕ್ಕಂಥ ಬಿಲ್. ಇದಕ್ಕಿಂತ ಹಿಂದೆ ಇದ್ದದ್ದು ಏನು ಬಿಲ್‌ನ್ನು ಇಲ್ಲಿ ನಾವು ಅಪೋಜ್ ಮಾಡಿದೆವು. ಅದು ಶಾಶ್ವತವಾಗಿ ಇರತಕ್ಕಂಥ ಕಾನೂನು. ನಾನು ತಿಳಿದುಕೊಂಡ ಮಟ್ಟಿಗೆ, ಆದರೆ ಈ ವರ್ಷ ಒಂದು ಶಾಶ್ವತವಾಗಿ ಇರತಕ್ಕಂಥ ಕಾನೂನನ್ನು ಅಬೆಯನ್ಸ್‌ನಲ್ಲಿ ಇಡಬೇಕು ಎಂದು ಆಗುತ್ತದೆ. ಅಂದರೆ ನಾವು ಸಲಹೆ ಕೊಟ್ಟಾಗ ಈ ಬಿಲ್‌ನ್ನು ತಾವು ಬಹಳ ತರಾತುರಿಯಾಗಿ ತಂದಿದ್ದೀರಿ. ಇದು ಸರಿ ಇಲ್ಲ. ದಯವಿಟ್ಟು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಕೊಡಿ. ಅಲ್ಲಿ ಇದರ ಸಾಧಕಬಾಧಕಗಳನ್ನು ಚರ್ಚೆ ಮಾಡಿ ಸಮಗ್ರವಾಗಿ ಒಂದು ಬಿಲ್‌ನ್ನು ಒಪ್ಪಿಕೊಂಡು ನಾವೆಲ್ಲರೂ ಕೂಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಾಡೋಣವೆಂದು ಹೇಳಿದರೆ ಏನು ಇಷ್ಟು ಒತ್ತಡ ಮಾಡಿ ನೀವು ಷಡ್ಯೂಲ್ಡ್ ಕಾಸ್ಟ್ ವಿದ್ಯಾರ್ಥಿಗಳ ವಿರುದ್ಧ, ಬ್ಯಾಕ್‌ವರ್ಡ್ ಕ್ಯಾಸ್ಟ್ ವಿದ್ಯಾರ್ಥಿಗಳ ವಿರುದ್ಧ ಅಂತ ಹೇಳಿ ತರಾತುರಿಯಲ್ಲಿ ಪಾಸ್ ಮಾಡಿಕೊಂಡಿರಿ. ಪಾಸ್ ಮಾಡಿಕೊಂಡು ಇವತ್ತು ಅಬೆಯನ್ಸ್‌ನಲ್ಲಿ ಶಾಶ್ವತ ಕಾನೂನನ್ನು ಇಡಿ ಅಂತ ಹೇಳುತ್ತಿದ್ದೀರಿ. ನಿಮ್ಮ ಈ ಬುದ್ಧಿವಂತಿಕೆಗೆ ಏನಂತ ಹೇಳೋಣ. ಅದನ್ನು ಅಬೆಯನ್ಸ್‌ನಲ್ಲಿ ಇಟ್ಟುಬಿಡಿ. ಷೆಡ್ಯೂಲ್ಡ್ ಕ್ಯಾಸ್ಟ್ ವಿದ್ಯಾರ್ಥಿ ಬ್ಯಾಕ್‌ವರ್ಡ್ ವಿದ್ಯಾರ್ಥಿ ಇನ್ನುಳಿದ

ವಿದ್ಯಾರ್ಥಿಗಳ ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಲ್ಲಾ. ಮತ್ತೆ ಎಲ್ಲಿ ಹೋಯಿತು ನೀವು ರಕ್ಷಣೆ ಮಾಡತಕ್ಕಂಥ ಮಾತುಗಳು. ಒರಿಜನಲ್ ಬಿಲ್ ಅಬೆಯನ್ಸ್ ಇದು ಒಂದು ವರ್ಷಕ್ಕೆ ಮಾತ್ರ ತೆಗೆದುಕೊಳ್ಳಬೇಕು ಅಂತ ಹೇಳಿ ಈ ಬಿಲ್‌ನಲ್ಲಿ ಹೇಳಿದ್ದಾರೆ.

> "Invalidation of admission made in violation of this Act: Section 6: All admissions made in violation of the provisions of this Act or the consensual arrangement or agreement by any Private unaided Professinal Educational Institutions for the academic year 2006-07 whether made before or after commencement of this Act shall be invalid. In case of such violation the State Government may direct the concerned university to cancel such admissions or affiliations of such institution as the case may be."

ಇದು ಒಂದು ಕಡೆ. ಅಂದರೆ ವೈಲೇಶನ್ ಯಾರಾದರೂ ಮಾಡಿದರೆ ಈ ವರ್ಷದ ಅಡ್ಮಿಶನ್ 2006–07 ಕೂಡ ನಾವು ಕ್ಯಾನ್ಸಲ್ ಮಾಡುತ್ತೇವೆ ಎನ್ನತಕ್ಕಂಥ ಅಧಿಕಾರ ಕೂಡ ಸರ್ಕಾರದವರು ತೆಗೆದುಕೊಳ್ಳುತ್ತಿದ್ದಾರೆ. ಒಂದು ಕಡೆ. ಇದು ಒಂದು ವರ್ಷಕ್ಕಾಗಿಯೇ ಈ ಕಾನೂನು ಅಸ್ತಿತ್ವದಲ್ಲಿ ಬರತಕ್ಕಂಥಾದ್ದು ಇದ್ದರೆ, ತಾವು ಈ ಹಿಂದಿನ ಕಾನೂನು ತರತಕ್ಕಂಥ ಅವಶ್ಯಕತೆ ಏನಿತ್ತು? ಟೆಂಪರರಿಯಾಗಿ ಇದನ್ನೇ ತಂದು "ನಾವು ಎಲ್ಲಾ ಅರೇಂಜ್‌ಮೆಂಟ್ ಮಡಿಕೊಂಡಿದ್ದೇವೆ ಪ್ರೈವೇಟ್ ಪಾರ್ಟಿಗಳ ಜೊತೆಯಲ್ಲಿ, ಮ್ಯಾನೇಜ್‌ಮೆಂಟ್‌ಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿದ್ದೇವೆ. ಈ ವರ್ಷಕ್ಕಾಗಿ ಇದನ್ನು ತರೋಣ, ಮುಂದಿನ ವರ್ಷಕ್ಕೆ ಶಾಶ್ವತವಾದಂತಹ ಕಾನೂನನ್ನು ನಾವು ಎಲ್ಲರೂ ಸೇರಿ ಮಾಡೋಣ ಅದಕ್ಕೆ ಸಮಯ ಇರುತ್ತದೆ. ನಾವು ಇಲ್ಲಿ ಸುದೀರ್ಘವಾಗಿ ಚರ್ಚೆ ಮಾಡೋಣ ಅಥವಾ ಜಂಟಿ ಸದನದ ಸಮಿತಿಗಾದರೂ ಕಳುಹಿಸಿ ಮಾಡೋಣ" ಎಂದು ಮಾಡಬಹುದಾಗಿತ್ತು. ಅದೂ ಮಾಡಲಿಲ್ಲ. ಹೀಗೆ ಇವತ್ತು ನೀವು ದ್ವಂದ್ವ ನೀತಿ ಅನುಸರಿಸಿರು ವುದರಿಂದ ಸ್ಪಷ್ಟವಾದಂತಹ ಚಿತ್ರ ನಿಮ್ಮಲ್ಲಿ ಇಲ್ಲ. ಸ್ಪಷ್ಟವಾಗಿ ಯಾರಿಗೆ ನಾವು ಸಹಾಯ ಮಾಡಬೇಕು. ಯಾರಿಗೆ ತೊಂದರೆಯಾಗುತ್ತದೆ ಎಂಬುದೂ ಕೂಡ ಇದರಲ್ಲಿ ತಿಳಿವಳಿಕೆ ಇಲ್ಲ. ಅದು ಇದ್ದಿದ್ದರೆ ನೀವಿದನ್ನು ಮಾಡುತ್ತಿರಲಿಲ್ಲ. ಇಷ್ಟೊಂದು ತರಾತುರಿಯಲ್ಲಿ ನೀವು ಈವತ್ತು ಬಿಲ್ ತರುತ್ತಾ ಇರಲಿಲ್ಲ. ಹೀಗೆ ತರಾತುರಿಯಲ್ಲಿ ತಂದು ಒಂದು ಕಡೆ ಪಾಸ್ ಮಾಡಿಕೊಳ್ಳುವುದು, ಮೇಲ್ಮನೆಯಲ್ಲಿ ರಿಜೆಕ್ಟಾದರೂ ಕೂಡ ಕೆಳಮನೆಯಲ್ಲಿ ಪುನಃ ಅದನ್ನು ಪಾಸ್ ಮಾಡಿಕೊಳ್ಳುವುದು, ನೀವು ದಿಟ್ಟ ಹೆಜ್ಜೆ ಅಂತ ಹೇಳಿಕೊಳ್ಳಬಹುದು. ಆದರೆ ನೀವು ಮೈಂಡ್ ಅಪ್ಲೈ ಮಾಡಿಲ್ಲ ಅನ್ನುವುದಕ್ಕೆ ಈ ರೀತಿ ತಂದಿರುವ

ಬಿಲ್ಲೇ ಉದಾಹರಣೆ. ಆದ್ದರಿಂದ ಏನಿವತ್ತು ಈ ಬಿಲ್ ತಂದಿದ್ದಾರೆ. ಇದರಿಂದ ಯಾರಿಗೂ ಉಪಯೋಗವಾಗುವುದಿಲ್ಲ. ಏಕೆಂದರೆ ಫೀಸ್ ಸ್ಟ್ರಕ್ಚರ್ ತಾವೇ ಹೇಳುವವರಿದ್ದೀರಿ. ಆದರೆ ಇಲ್ಲಿ ಸ್ಪೆಲ್ ಔಟ್ ಮಾಡುವುದಕ್ಕಾಗಿ ನಾನೇ ಹೇಳಬೇಕಾಗುತ್ತದೆ. ಇದರಲ್ಲಿ ಮೊದಲನೇ ಹಂತದಲ್ಲಿ ಇಂಜಿನಿಯರಿಂಗ್ 40 ಪರ್ಸೆಂಟ್ ಸೀಟ್, ಅದಕ್ಕೆ 15 ಸಾವಿರ ರೂ. ಎರಡನೇ ಹಂತ 20 ಪರ್ಸೆಂಟ್ ಸೀಟಿಗೆ 85 ಸಾವಿರ ರೂ. ಎನ್‌ಆರ್‌ಐ 15 ಸೀಟಿಗೆ ಡಿಸ್ಕ್ರಿಷನ್ ಎಷ್ಟು ಬೇಕಾದರೂ ತೆಗೆದುಕೊಳ್ಳಬಹುದು. ಆಮೇಲೆ ಇನ್ನೊಂದು 25 ಪರ್ಸೆಂಟ್ ಸೀಟ್, ಮೊದಲನೇ ಹಂತ ಡಿಸ್ಕ್ರಿಷನ್‌ನಲ್ಲಿ ಅದಕ್ಕೂ 85 ಸಾವಿರ ರೂ. ಅದೇ ರೀತಿ ಮೆಡಿಕಲ್ ಕಾಲೇಜಿಗೆ ನೀವು ನಿಗದಿಪಡಿಸಿದ್ದು, ಮೊದಲನೇ ಹಂತ 25 ಪರ್ಸೆಂಟಿಗೆ 42 ಸಾವಿರ. ಎರಡನೇ ಹಂತದ್ದು 25 ಸೀಟಿಗೆ 2.90 ಲಕ್ಷ ರೂ. ಡಿಸ್ಕ್ರಿಷನರಿ ಕೋಟಾದಡಿ ಮೊದಲನೇ ಹಂತಕ್ಕೆ 25 ಸೀಟಿಗೆ 2.90 ಲಕ್ಷ ರೂ. ಎನ್‌ಆರ್‌ಐಗೆ 25 ಸೀಟಿಗೆ 50 ಲಕ್ಷ ಪ್ಲಸ್ ಫೀಜು. ಅಂದರೆ ತಾವು ನಿಗದಿಮಾಡಿದಂತಹ ಫೀಜನ್ನು ನೋಡಿದರೆ, ಸಿಇಟಿ ಮತ್ತು ಖಾಸಗಿ ಎರಡನ್ನೂ ನಾವು ನೋಡಿದಾಗ ಏನನ್ನಿಸುತ್ತದೆ ಅಂದರೆ ಯಾವ ಮಕ್ಕಳಿಗೆ ಕೂಡ ಇದರಿಂದ ಲಾಭವಿಲ್ಲ. ಏಕೆಂದರೆ ಉದಾಹರಣೆಗೆ ಮೆರಿಟ್ ಮೇಲೆ 25 ಪರ್ಸೆಂಟ್ ಮೊದಲನೇ ಹಂತದಲ್ಲಿ ಬರುತ್ತದೆ. ಅವರಿಗೆ 45 ಸಾವಿರ ರೂ. ನೀವು ಕೊಡುತ್ತಿದ್ದೀರಿ.

ಡಾ|| ವಿ.ಎಸ್. ಆಚಾರ್ಯ : ಚರ್ಚೆಗೆ ಅನುಕೂಲವಾಗಲಿ ಅಂತ ಫೀಸು ಸ್ಟ್ರಕ್ಚರ್ ಮತ್ತು ಸೀಟ್ ಮ್ಯಾಟ್ರಿಕ್ಸ್ ಕುರಿತು ಮಾತ್ರ ಹೇಳುತ್ತೇನೆ. ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದಂತಹ ಒಂದು ವಿಷಯದ ಬಗ್ಗೆ ನಾನು ಸಭೆಯ ಮುಖಾಂತರ ವಿಷದಮಾಡುತ್ತೇನೆ. ಎಲ್ಲ ಖಾಸಗಿ ಅನುದಾನರಹಿತ ಮೈನಾರಿಟಿ ಸಹಿತ ಇರುವಂತಹ ಕಾಲೇಜುಗಳಲ್ಲಿ ಮೆಡಿಕಲ್‌ಗೆ ಸಂಬಂಧಪಟ್ಟಂತೆ ಶೇಕಡ 35ರಷ್ಟು ಸೀಟು 35 ಸಾವಿರಕ್ಕೆ ಫ್ರೀ ಸೀಟ್ ಸಿಗುತ್ತದೆ. ಕಳೆದ ವರ್ಷವೂ ಅಷ್ಟೇ ಇತ್ತು. ಆದರೆ ಅದರ ಪೂಲ್ ಜಾಸ್ತಿಯಾಗಿದೆ. ಫ್ರೀ ಸೀಟುಗಳ ಸಂಖ್ಯೆ ಜಾಸ್ತಿಯಾಗಿದೆ. ಉಳಿದ 15 ಪರ್ಸೆಂಟ್ ಮೈನಾರಿಟಿಯೇತರ ಕಾಲೇಜುಗಳು 2.95 ಲಕ್ಷ ರೂ. ಆದರೆ ಮೈನಾರಿಟಿ ಸಂಸ್ಥೆಯಲ್ಲಿ ಉಳಿಯುವುದು ನಮಗೆ 5 ಪರ್ಸೆಂಟ್. ಅದಕ್ಕೆ 2.90 ಲಕ್ಷ ರೂ. ಹಾಗಾಗಿ 35 ಪರ್ಸೆಂಟಿನಡಿ ನಮಗೆ ಬಹಳ ಸೀಟುಗಳು ಬರುತ್ತವೆ. ಹೋದ ವರ್ಷ ಈ ರೀತಿ 849 ಬಂದಿದ್ದರೆ, ಈ ಸರ್ತಿ 990 ಬರುತ್ತಾ ಇವೆ. ಅಂದರೆ 999 ಸ್ಥಾನಗಳಿಗೆ ಇವತ್ತು ಖಾಸಗಿ ಅನುದಾನರಹಿತ ಕಾಲೇಜುಗಳಲ್ಲಿ 35 ಸಾವಿರಕ್ಕೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಸೀಟ್ ಸಿಗುತ್ತಾ ಇದೆ. ಇನ್ನು ಡೆಂಟಲ್‌ನಲ್ಲಿ ಇದೇ ರೀತಿ 35 ಪರ್ಸೆಂಟಿಗೆ ನಮಗೆ 25 ಸಾವಿರಕ್ಕೆ ಸಿಗುತ್ತಾ ಇದೆ. ಮೆಡಿಕಲ್‌ದ್ದು ಎಬಿಸಿಇಡಿ ಎಲ್ಲಾ ಕೆಟಗಿರಿ ಹೇಳಿಬಿಡುತ್ತೇನೆ. "ಎ" ಕೆಟಗಿರಿ 35 ಪರ್ಸೆಂಟ್ ಎಂಬಿಬಿಎಸ್ ಫ್ರೀ ಸೀಟ್, ಮೈನಾರಿಟಿ ಮತ್ತು ನಾನ್ ಮೈನಾರಿಟಿ ಎರಡರಲ್ಲೂ ಫ್ರೀ ಸೀಟ್ 35 ಸಾವಿರಕ್ಕೆ. ಮತ್ತೆ ನಾನ್ ಮೈನಾರಿಟಿಯಡಿ 15 ಪರ್ಸೆಂಟ್ 2.09 ಲಕ್ಷ ಮತ್ತೆ 5 ಪರ್ಸೆಂಟ್ ಮೈನಾರಿಟಿ ಸಂಸ್ಥೆಗಳಲ್ಲಿ 2.09 ಲಕ್ಷ. ಇದು ಸರ್ಕಾರದ ಪೂಲ್. ಅವರ 50 ಪರ್ಸೆಂಟಿನಲ್ಲಿ 30 ಪರ್ಸೆಂಟ್ ಸಿ ಕೆಟಗಿರಿ ಸೀಟ್ಸ್ 2.09 ಲಕ್ಷ ರೂ. ಅದು ಕಾಮೆಡ್-ಕೆಯಿಂದಲೇ ಮೆರಿಟ್

ಆಧಾರದ ಮೇಲೆ ಆಗಬೇಕು. ಆಮೇಲೆ "ಡಿ" ಕ್ಯಟಗಿರಿ ಅಂತ ಇನ್‌ಸ್ಟಿಟ್ಯೂಷನಲ್ ಪ್ರಿಫೆರೆನ್ಸ್ ಅಂತ. ಅದು 5 ಪರ್ಸೆಂಟ್ ಸೀಟ್ಸ್, 2.90 ಲಕ್ಷವೇ ಅದಕ್ಕೂ ಸೀಲಿಂಗಿದೆ; ಅವರು ಎಷ್ಟೆಷ್ಟಕ್ಕೋ ಕೊಡುವ ಹಾಗಿಲ್ಲ. ಅಲ್ಲಿಗೇ 35 ಪರ್ಸೆಂಟ್ ಆಯಿತು. ಉಳಿದ 15 ಪರ್ಸೆಂಟ್ ಮ್ಯಾನೇಜ್ಮೆಂಟಿನದ್ದು ಎನ್‌ಆರ್‌ಐದು. ಈ ರೀತಿ ಎ,ಬಿ,ಸಿ,ಡಿ ಮತ್ತು ಇ ಎಂದು 5 ಕ್ಯಾಟಗರಿ ಮಾಡಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ : ಎನ್‌ಆರ್‌ಐ ಮತ್ತು ಇತರರು ಅಂತ ಮಾಡಿದ್ದೀರಲ್ಲಾ ಅದು ಬಹಳ ಅಪಾಯ. ಅದರಲ್ಲೇ ನೀವು ಮ್ಯಾನೇಜ್‌ಮೆಂಟ್ ಜನರಿಗೆ ಸಹಾಯ ಮಾಡುತ್ತಿದ್ದೀರಿ. ಇದೇ ಒಪ್ಪಂದ.

ಡಾ|| ವಿ.ಎಸ್. ಆಚಾರ್ಯ : ನೀವು ಪ್ರತಿಪಕ್ಷದ ನಾಯಕರು, ಕಳೆದ ಬಾರಿ ಮುಖ್ಯಮಂತ್ರಿಗಳಾಗಿದ್ದೀರಿ.

ಶ್ರೀ ಎನ್. ಧರಂಸಿಂಗ್ : ನಾವು ಎನ್‌ಆರ್‌ಐ ಅಂತ ಸ್ಪೆಸಿಫಿಕಾಗಿ ಇಟ್ಟಿದ್ದೆವು. ನೀವೇನು ಮಾಡಿದಿರಿ ಎನ್‌ಆರ್‌ಐ ಮತ್ತಿತರರು ಅಂತ ಇಟ್ಟಿದ್ದೀರಿ.

ಡಾ|| ವಿ.ಎಸ್. ಆಚಾರ್ಯ : ಒಂದು ನಯಾಪೈಸೆ ಸರ್ಕಾರಕ್ಕೆ ಭಾರ ಬೀಳದೆ ಒಂದು ನಯಾಪೈಸೆ ಗ್ರಾಂಟ್ ಕೊಡದೆ ನಡೆಯುವಂತಹವು ಈ ಸಂಸ್ಥೆಗಳು. ನಮಗೇನು ಬೇಕು ಅಂದರೆ ನಮ್ಮ ವಿದ್ಯಾರ್ಥಿಗಳಿಗೆ ಕಡಿಮೆ ಬೆಲೆಯಲ್ಲಿ ಅತಿಹೆಚ್ಚು ಸೀಟುಗಳು ಬೇಕು. ಆ ಸೀಟುಗಳನ್ನು ನಾವಿವತ್ತು ಪಡೆದುಕೊಂಡಿದ್ದೇವೆ. ಹೋದ ವರ್ಷ ಇದ್ದ ಸೀಟುಗಳು ಕೇವಲ 849 ಇದ್ದರೆ ಈ ಸರ್ತಿ ನಾವು 990 ಸೀಟುಗಳನ್ನು ಅಗ್ಗದರದ್ದು ಪಡೆದುಕೊಂಡಿದ್ದೇವೆ. ನಮ್ಮ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಅಲ್ಲಿ ಕಾಪಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ : ಹೋದ ವರ್ಷವಿದ್ದ ಫೀಸ್ ಸ್ಟ್ರಕ್ಚರ್ ಮತ್ತು ಈ ವರ್ಷದ್ದನ್ನು ಕಂಪೇರಟೀವ್ ಸ್ಟೇಟ್‌ಮೆಂಟ್ ಕೊಟ್ಟಿದ್ದರೆ ಸುಲಭವಾಗುತ್ತಿತ್ತು.

ಡಾ|| ವಿ.ಎಸ್. ಆಚಾರ್ಯ : ಈ ಚರ್ಚೆ ಮುಗಿಯುವುದರೊಳಗೆ ಕೊಡುತ್ತೇನೆ. ಈಗ 35 ಪರ್ಸೆಂಟ್ both ಇನ್ ಮೈನಾರಿಟೀಸ್, ಹೋದ ಸಲ ಸಿಕ್ಕಿರಲಿಲ್ಲ. ಈ ವರ್ಷ ಸಿಕ್ಕಿದೆ. ಒಟ್ಟು 40 ಪರ್ಸೆಂಟ್ ಅವರು ಕೊಟ್ಟರೂ ಅದರ 35 ಪರ್ಸೆಂಟ್ 35 ಸಾವಿರಕ್ಕೆ ಬರುವ ಅಗ್ಗದ ಸೀಟುಗಳು. ಇನ್ನು ಕಟಾಫ್ ಲೈನ್‌ಗಿಂತ ಕೆಳಗಿರುವುದರಲ್ಲಿ ಶಕ್ತಿ ಇದ್ದವರಿಗೆ, ಮೆರಿಟ್ ಇದ್ದ ಒಬಿಸಿ ಮತ್ತು ಶೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಈ 2.09 ಲಕ್ಷದ ಸೀಟ್ ಸಿಗುವ ಅವಕಾಶವೂ ಇದೆ. ಇದು ಮ್ಯಾನೇಜ್‌ಮೆಂಟ್‌ನವರು ಕೊಡುವಂತಹ ಸೀಟುಗಳಲ್ಲಿಯೂ ಮೆರಿಟ್ ಮೇಲಿನ ಸೀಟುಗಳಿಗೂ ಇಷ್ಟೇ ದುಡ್ಡು. ಅದಕ್ಕೆ ಮಿತಿ ಇದೆ. ಆಮೇಲೆ ಇನ್‌ಸ್ಟಿಟ್ಯೂಶನಲ್ ಪ್ರಿಫೆರೆನ್ಸ್‌ಗೂ ಎಷ್ಟಾದರೂ ತೆಗೆದುಕೊಳ್ಳುವಂತಿಲ್ಲ. ಅದು 2.09 ಲಕ್ಷ ರೂ. ಅಂತ ಇದೆ. ಇನ್ನು ಡೆಂಟಲ್‌ನಲ್ಲಿ ಇದೇ ರೀತಿ 35 ಪರ್ಸೆಂಟ್ ಮೆರಿಟ್ ಸೀಟ್ಸ್ 25 ಸಾವಿರಕ್ಕೆ ಸಿಗುತ್ತವೆ. ಆಮೇಲೆ ಉಳಿದ 15 ಪರ್ಸೆಂಟ್ ಸೀಟ್ಸ್ ನಾನ್ ಮೈನಾರಿಟಿಯಲ್ಲಿ 5 ಪರ್ಸೆಂಟ್ ಮೈನಾರಿಯಲ್ಲಿರುವುದು 2.30 ಲಕ್ಷ ರೂ. ಇನ್ನು ಅವರು

ಕೊಡುವ ಉಳಿದ 60 ಪರ್ಸೆಂಟ್ ಮೈನಾರಿಟಿಯಲ್ಲಿರುವುದರಲ್ಲೂ ಶೇಕಡ 40ರಷ್ಟನ್ನು ರೂ. 2.30 ಲಕ್ಷ ರೂ. ಕೊಡಬೇಕು. ಡೆಂಟಲ್‌ನಲ್ಲಿ ರೆಗ್ಯುಲರ್‌ನಲ್ಲಿ ನಮ್ಮದು 50 ಪರ್ಸೆಂಟ್, ನಾನ್ ಮೈನಾರಿಟೀಸ್‌ನಲ್ಲಿ. ಅದರಲ್ಲಿ 35 ಪರ್ಸೆಂಟ್ ರೂ. 25 ಸಾವಿರಕ್ಕೆ 15 ಪರ್ಸೆಂಟ್ 2.3 ಲಕ್ಷ ರೂ. ಆಮೇಲೆ ಮ್ಯಾನೇಜ್‌ಮೆಂಟಿನ ಹತ್ತಿರ ಉಳಿಯುವ ಸೀಟಿನಲ್ಲಿ ಮೆರಿಟ್ ಸೀಟಿಗೆ ಮೂವತ್ತು ಶೇಕಡ 2.3 ಲಕ್ಷ ರೂ. ಡೆಂಟಲ್‌ನಲ್ಲಿ. ಉಳಿಯುವಂತಹ 20 ಸೀಟುಗಳಲ್ಲಿ ಇನ್‌ಸ್ಟಿಟ್ಯೂಶನಲ್ ಪ್ರಿಫರೆನ್ಸ್ 5 ಪರ್ಸೆಂಟ್‌ಗೆ 2.3 ಲಕ್ಷ ರೂ. ಎನ್‌ಆರ್‌ಐಗೆ ಸುಪ್ರೀಂಕೋರ್ಟು ಎನ್‌ಆರ್‌ಐ ಗೆ ಸುಪ್ರೀಂ ಕೋರ್ಟ್‌ನವರೂ ಫೀ ಫಿಕ್ಸ್ ಮಾಡಲಿಲ್ಲ. ನಾವು ಫಿಕ್ಸ್ ಮಾಡಲಿಲ್ಲ. ಹೋದ ವರ್ಷ ಡೆಂಟಲ್‌ನಲ್ಲಿ ಫ್ರೀ ಸೀಟ್ 769 ಬಂದಿತ್ತು. ಈ ಸಾರಿ 900 ಸೀಟಿಗೆ 3 ಸೀಟುಗಳು ಕಡಿಮೆ. ಅಂದರೆ 897 ಸೀಟುಗಳು ಫ್ರೀ ಬಂದಿವೆ. 25 ಸಾವಿರ ರೂಪಾಯಿಗಳಿಗೆ ಒಂದು ಡೆಂಟಲ್ ಸೀಟ್ ಸಿಗುತ್ತದೆ. The poor students, merit students, backward class, scheduled castes and scheduled tribes are going to get all together 10,013 seats in engineering. ಫ್ರೀ ಸೀಟ್‌ನಲ್ಲಿ, 495 ಮೆಡಿಕಲ್ ಸೀಟ್‌ನಲ್ಲಿ 449 ಡೆಂಟಲ್ ಸೀಟ್‌ನಲ್ಲಿ ಕೇವಲ ಎಸ್‌ಸಿ ಎಸ್‌ಟಿ ಮತ್ತು ಬ್ಯಾಕ್‌ವಾರ್ಡ್ ಕಮ್ಯುನಿಟಿಯವರಿಗೆ ಅಗ್ಗ ದರದ ಸೀಟು ಬರುವ ಹಾಗೆ ಆಗಿದೆ. Engineeringನಲ್ಲಿ ಜನರಲ್ ಅನ್ ಏಡೆಡ್ ಇನ್ಸ್‌ಟಿಟ್ಯೂಷನ್ಸ್ ಶೇ. 60 ಗೌರ್ನಮೆಂಟ್‌ಗೆ. 60 ಶೇಕಡದಲ್ಲಿ 40 ಶೇಕಡ ಸೀಟು ಅಂದರೆ 20,026 ಸೀಟುಗಳು, ಕಳೆದ ವರ್ಷ ಇದು 11,986 ಇತ್ತು. ಈ ಬಾರಿ ಅದು 20,026 ಸೀಟುಗಳು 15 ಸಾವಿರ ರೂ.ಗೆ 40ರಷ್ಟು ಶೇಕಡ ಸೀಟುಗಳು ನಮಗೆ ಬರುತ್ತವೆ. ಉಳಿದಂಥ 20 ಸೀಟಿಗೆ ಅದು ಬಿ. ಕ್ಯಾಟಿಗೆರಿ ಸೀಟ್ ಅದಕ್ಕೆ 85 ಸಾವಿರ ರೂಪಾಯಿ. ಮತ್ತು ಸಿ. ಕ್ಯಾಟೆಗೆರಿ ಮ್ಯಾನೇಜ್‌ಮೆಂಟ್‌ನ 40 ಸೀಟುಗಳ ಪೈಕಿ ಸಿ. ಕ್ಯಾಟಿಗರಿ ಸೀಟ್ ಓಪನ್ ಮೆರಿಟ್ ಸೀಟ್ ಎಂದು ಹೆಸರಿಟ್ಟಿದ್ದಾರೆ. ಅದು ಕಾಮೆಡ್–ಕೆ ಯಿಂದ ಸೆಲೆಕ್ಟ್ ಆಗುತ್ತದೆ 25 ಪರ್‌ಸೆಂಟ್. ಅದಕ್ಕೂ 85 ಸಾವಿರ ರೂ. ಅಲ್ಲಿ ಕ್ಯಾಟೆಗರಿ ಎನ್‌ಆರ್‌ಐ ಅದಕ್ಕೆ ಯುಎಸ್‌ಡಿ 5 ಸಾವಿರ ಡಾಲರ್ಸ್ ಎಂದು ಇಟ್ಟಿದ್ದಾರೆ ಅಥವಾ ಸುಪ್ರೀಂ ಕೋರ್ಟ್ ಏನೂ ಫೀ ನಿಗದಿ ಮಾಡಿಲ್ಲ. ಮಾನ್ಯ ಪ್ರತಿ ಪಕ್ಷದ ನಾಯಕರಲ್ಲಿ ನಾನು ಅಪೀಲು ಮಾಡುವಂಥದ್ದು ಈ ಕಾಲೇಜುಗಳು ನಡೆಯಬೇಕು. ಚೆನ್ನಾಗಿ ನಡೆಯಬೇಕು. ನಡೆದರೆ ಮಾತ್ರ ನಮ್ಮ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಅಗ್ಗ ದರದಲ್ಲಿ ಇಷ್ಟು ಸಂಖ್ಯೆಯಲ್ಲಿ ಸಿಗುವುದಕ್ಕೆ ಸಾಧ್ಯವಿದೆ. ಇಂಜಿನಿಯರಿಂಗ್ ಹೋದ ವರ್ಷ ಬ್ಯಾಕ್‌ವಾರ್ಡ್‌ನವರಿಗೆ ಒಟ್ಟು ಇದ್ದಂಥದ್ದು, ಈ ಸಾರಿ by hard bargaining, we have got 20,026 seats as against 11,986. 11,986ರ ಬದಲಿಗೆ ನಾವು ಇಷ್ಟು ಮಾಡಿದ್ದೇವೆ. ಇವತ್ತು ಹಸು ಒಳ್ಳೆಯ ಹಾಲನ್ನು ಕೊಡುತ್ತಿದ್ದರೆ ಒಂದು 4 ಲೀಟರ್ ನಮ್ಮ ಮನೆಗೂ ಬರಬಹುದು. ಅವರ ಮನೆಗೂ ಹೋಗಬಹುದು. ಎಲ್ಲರಿಗೂ ಸಿಗಬಹುದು. ಹಸು ಹಾಲೇ ಕೊಡದಿದ್ದರೆ ಏನೂ ಮಾಡಲಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ಬ್ಯಾಕ್‌ವಾರ್ಡ್ಸ್‌ಗೆ ಕಳೆದ ಬಾರಿ ಎಸ್‌ಸಿ ಎಸ್‌ಟಿಗೆ ಇಂಜಿನಿಯರಿಂಗ್‌ಗೆ ಎಷ್ಟಿತ್ತು? ಈ ಬಾರಿ ಎಷ್ಟಿದೆ? ಎಷ್ಟು ಎಂದು ಕೇಳೋಣ. ನೀವು ಸ್ವಲ್ಪ ಸಂತೋಷವಾಗಿ ಕೇಳಿ. ಏಕೆಂದರೆ ಹಿಂದುಳಿದವರಿಗೆ, ದಲಿತರಿಗೆ ಕಳೆದ ವರ್ಷ ಎಷ್ಟಿತ್ತು? ಈ ವರ್ಷ ಎಷ್ಟು ಸೀಟಿದೆ? ಅದನ್ನು ಸ್ವಲ್ಪ ಹೇಳಿ ಬಿಡಲಿ.

ಡಾ|| ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೇ, ನಾನು ಈಗ ಕೇವಲ ಫ್ರೀ ಸೀಟ್‌ನಲ್ಲಿ ಕೇವಲ ಈ ಮೆರಿಟ್ ಸೀಟ್‌ನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ಯವರಿಗೆ ಹೋದ ವರ್ಷಕ್ಕಿಂತ ಫ್ರೀ ಸೀಟ್‌ನಲ್ಲಿ 4020 ಮತ್ತು ಪೇಮೆಂಟ್ ಸೀಟ್‌ನಲ್ಲಿ ಸುಮಾರು ಎರಡೂವರೆ ಸೀಟುಗಳು ಜಾಸ್ತಿಯಾಗಿದೆ. ಇನ್‌ಟೇಕ್ ಹೆಚ್ಚಿಗೆ ಆಗಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಈ ರೀತಿ ಫಿಗರ್ಸ್ ಕೊಡುವಾಗ ಹೋದ ವರ್ಷ ಇನ್‌ಟೇಕ್ ಎಷ್ಟಾಯಿತು? ಈ ವರ್ಷ ಇನ್‌ಟೇಕ್ ಏನಾಗಿದೆ ಎಂಬುದನ್ನು ಹೇಳಿ.

ಡಾ|| ವಿ.ಎಸ್. ಆಚಾರ್ಯ : ನಮಗೆ ನಿಮಗೆ ಗೊತ್ತಿದೆ. ಒಂದೆರಡು ಕಾಲೇಜು ಹೆಚ್ಚಿಗೆ ಆಗಿರಬಹುದು. ಹಾಗಾಗಿ ಒಂದೆರಡು ಕಾಲೇಜುಗಳು ಹೆಚ್ಚಿಗೆ ಆಗಿದ್ದರಿಂದ....

ಶ್ರೀ ಕೆ. ಶ್ರೀನಿವಾಸಗೌಡ : ಕರಾರುವಕ್ಕಾಗಿ ಇದನ್ನು ಮಾತ್ರ ಬಹಳ ಸರಿಯಾಗಿ ಹೇಳುತ್ತೀರಿ. ಹೋದ ವರ್ಷ ಇನ್‌ಟೇಕ್ 20 ಸಾವಿರ ಆಯಿತಾ? 40 ಸಾವಿರ ಆಯಿತಾ? ಈ ವರ್ಷ 60 ಸಾವಿರ ಆಯಿತಾ? 70 ಸಾವಿರ ಆಯಿತಾ ಎಂದು ಹೇಳುವುದಕ್ಕೇನು ತೊಂದರೆ ಇದೆ? ಮಾಹಿತಿಯನ್ನು ನಿಮ್ಮ ಅಧಿಕಾರಿಗಳು 5 ನಿಮಿಷದಲ್ಲಿ ಕೊಡುತ್ತಾರೆ.

ಡಾ|| ವಿ.ಎಸ್. ಆಚಾರ್ಯ : ಈ ಸಾರಿ ಎಷ್ಟು ಸೀಟುಗಳು ಸಿಗುತ್ತದೆ ಎನ್ನುವ ಚಿತ್ರವನ್ನು ನಾನು ಕೊಟ್ಟಿದ್ದೇನೆ. ರಾಜ್ಯದ ವಿದ್ಯಾರ್ಥಿಗಳಿಗೆ ಒಳ್ಳೆಯದಾಗಿದೆ. ಮತ್ತು ಇನ್ನೂ ಕೆಲವರು ಮಾತನಾಡುವವರು ಇರುವುದರಿಂದ ಅವರ ಮಾಹಿತಿಗೋಸ್ಕರ ನಾನು ಇದನ್ನು ಕೊಟ್ಟಿದ್ದೇನೆ. ಇಂಜಿನಿಯರಿಂಗ್‌ನಲ್ಲಿ ಮ್ಯಾನೇಜ್‌ಮೆಂಟ್‌ಗೆ ಇರುವಂಥ 40 ಸೀಟುಗಳ ಪೈಕಿ 25 ಪರ್‌ಸೆಂಟ್ ಸೀಟುಗಳು ಓಪನ್ ಮೆರಿಟ್, ಅದಕ್ಕೆ ಪುನಃ ಅವರು 85 ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಾರೆ. ಉಳಿದ 15 ಪರ್‌ಸೆಂಟ್‌ಗೆ ನಾನು ಆಗಲೇ ಹೇಳಿದೆ. ಮೈನಾರಿಟಿ ಇಂಜಿನಿಯರಿಂಗ್ ಸೀಟ್‌ನಲ್ಲಿ 50 ಪರ್‌ಸೆಂಟ್ ಇದೆ. 50 ಪರ್‌ಸೆಂಟ್‌ನಲ್ಲೂ ಅದೇ ರೀತಿ ಅವರು ಸುಮಾರು ಅವರು ಶೇಕಡ 15 ಎನ್‌ಆರ್‌ಐಗೆ ಕೊಡುತ್ತಾರೆ. ಉಳಿದ ಶೇಕಡ 35 ಅವರು ಮೆರಿಟ್ ಸೀಟ್‌ನಲ್ಲಿ ಕೊಡುತ್ತಾರೆ. ಇದು ಕಳೆದ ವರ್ಷದ ಇನ್‌ಟೇಕ್‌ನ ಆಧಾರದ ಮೇಲೆ ಈ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಒಂದೆರಡು ಕಾಲೇಜುಗಳು ಇನ್‌ಟೇಕ್ ಜಾಸ್ತಿಯಾದರೆ ಇದ್ದಕಿಂತಲೂ ನಮಗೆ ಉತ್ತಮವಾದ ಸೀಟುಗಳು ಸಿಗುತ್ತವೆ. ಇದು ಕಳೆದ ವರ್ಷದ ಆಧಾರದಲ್ಲಿ ನಾನು ಹೇಳಿರುವಂಥದ್ದು. ಮತ್ತು ಸೀಟ್ ಮ್ಯಾಟ್ರಿಕ್ ಫಿಕ್ಸ್ ಮಾಡಿರುವಂಥದ್ದು. ಈ ಸಾರಿ ಹೆಚ್ಚಳ ಆಗಿರಬಹುದಾದಂಥದ್ದನ್ನು ನಾವು ಈ ಸಂಖ್ಯೆಯಲ್ಲಿ ಪರಿಗಣಿಸಲಿಲ್ಲ. ಆದ್ದರಿಂದ this number will be likely to be further

improved. ಹಾಗಾಗಿ ಅದರಲ್ಲಿ ಯಾವ ಒಂದು ಸಂದೇಹವೂ ಇಲ್ಲ. ಇದಿಷ್ಟು ಸೀಟ್ ಮ್ಯಾಟ್ರಿಕ್ಸ್ ಫೀ ಸ್ಟಕ್ಚರ್ vital points in admission to professional colleges ನಾನು ತಮ್ಮ ಮುಂದಿಟ್ಟಿದ್ದೇನೆ. ಹಾಗಾಗಿ ಬರೀ ಊಹೆ ಮೇಲೆ ಹೋಗುವುದು ಬೇಡ. ಇವತ್ತು ಹಸು ಚೆನ್ನಾಗಿದ್ದರೆ ನಾನು ಆಗಲೇ ಹೇಳಿದ ಹಾಗೆ ಎಲ್ಲರಿಗೂ ಹಾಲು ಸಿಗುತ್ತದೆ. ಹಸುಗೆ ಜಡ್ಡು ಬಂದರೆ ಹಾಲು ಯಾರಿಗೂ ಸಿಗುವುದಿಲ್ಲ. ಆ ದೃಷ್ಟಿಯಿಂದ ಈ ಕಾಲೇಜುಗಳು ಉಳಿಯಬೇಕಾದರೆ ನಮ್ಮ ರಾಜ್ಯ ಒಂದು ಕ್ಯಾಪಿಟಲ್ ಸ್ಟೇಟ್ ಎಂದು ಇಂಡಿಯಾದಲ್ಲಿ ಪರಿಗಣನೆಯಾಗಿ ನಾಲೆಜ್ ಸ್ಟೇಟ್ ಆಗಿ ಮುಂದುವರಿಯಬೇಕೆಂದು ಇದ್ದರೆ, ನಾವು ಒಂದಲ್ಲ ಒಂದು ರೀತಿಯಿಂದ ಇದಕ್ಕೆ ಪೂರಕವಾದ ರೀತಿಯಲ್ಲಿ ವರ್ತನೆಯನ್ನು ಮಾಡಬೇಕು. ಆಗ ಅದರ ಲಾಭ ನಮ್ಮ ಬಡ ವಿದ್ಯಾರ್ಥಿಗಳಿಗೆ ಸಿಗುತ್ತದೆ. ಇಷ್ಟು ಸ್ಪಷ್ಟವಾದ ಮಾತುಗಳಲ್ಲಿ ತಮ್ಮನ್ನು ನಾವು ಮನವರಿಕೆ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದ್ದೇನೆ. ಇದು ನಮ್ಮ ರಾಜ್ಯದ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಇದನ್ನು ಮಾಡಲಾಗಿದೆ. ದಯವಿಟ್ಟು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಸಹಾ ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಒಪ್ಪಿಗೆ ಕೊಡುವುದಕ್ಕೆ ಮುಂಚೆ ನಾನು ರೈಸ್ ಮಾಡಿದ್ದಕ್ಕೆ ನೀವು ಉತ್ತರ ಹೇಳಲಿಲ್ಲ. ಉತ್ತರವನ್ನು ಆಮೇಲೆ ಹೇಳುತ್ತೀರೆಂದು ಅಪೇಕ್ಷೆಯನ್ನೂ ಮಾಡಿಲ್ಲ. ನಾನು ಹೇಳಿದ್ದೇನೆಂದರೆ ಮೊದಲೇ ತಂದಂಥ ಬಿಲ್ಲೇ ಡಿಫೆಕ್ಟೀವ್. ಅದನ್ನು ನಮ್ಮ ಕೈಯಿಂದ ಪಾಸು ಮಾಡಿಸಿಕೊಂಡಿರಿ. ಎರಡನೆಯದು, ಅದು ಸರಿ ಇಲ್ಲವೆಂದ ಮೇಲೆ ಇವತ್ತಿನ ದಿವಸ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದಿರಿ. ಮಾಡುವುದಲ್ಲದೇ ಇವತ್ತೇನು ಶಹಭಾಷಗಿರಿಯನ್ನೇನು ತೆಗೆದುಕೊಳ್ಳುತ್ತಿದ್ದೀರಿ. ಇವತ್ತು ಮೆಡಿಕಲ್‌ನಲ್ಲಿ 50 ಪರ್‌ಸೆಂಟ್ ಸರ್ಕಾರಕ್ಕೆ 50 ಪರ್‌ಸೆಂಟ್ ಮ್ಯಾನೇಜ್‌ಮೆಂಟ್‌ಗೆಂದು ಮಾಡಿದ್ದೀರಿ. ಅದರಲ್ಲೇನು ಮಾಡಿದಿರಿ. 35 ಪರ್‌ಸೆಂಟ್ 35 ಸಾವಿರ ರೂ.ಗೆ ಉಳಿದ 15 ಪರ್‌ಸೆಂಟ್ 2.90 ಲಕ್ಷ ರೂ. ಇಲ್ಲಿ ನಾನು ತಮ್ಮನ್ನು ಕೇಳುವುದು 15 ಪರ್‌ಸೆಂಟ್ ಏನು ಇದ್ದಾರೆ ಮತ್ತು ಈ 35 ಇವೆರಡೂ ಒಂದೇ ಕ್ಯಾಟೆಗರಿ. ನಿಮ್ಮ ಕೋಟಾನೇ ಸರ್ಕಾರಕ್ಕೆ ಸಿಗುವುದು 50 ಪರ್‌ಸೆಂಟ್. ಆ 50 ಪರ್‌ಸೆಂಟ್‌ನಲ್ಲಿಯೇ ನೀವು ತಾರತಮ್ಯಕ್ಕೆ ಒಪ್ಪಿಕೊಂಡಿದ್ದೀರಿ. ಒಬ್ಬರಿಗೆ 2.90 ಲಕ್ಷ ರೂ. ಇನ್ನೊಂದು ಕ್ಯಾಟಿಗರಿ ವಿದ್ಯಾರ್ಥಿಗಳಿಗೆ 35 ಸಾವಿರ ರೂ. ಈ. 35 ಪರ್‌ಸೆಂಟ್‌ನಲ್ಲೇ ಎಸ್‌ಸಿ : ಎಸ್‌ಟಿ, ಅದರ ಬ್ಯಾಕ್‌ವಾರ್ಡ್ ಕ್ಲಾಸಸ್, ಜನರಲ್. ಈ 35 ಸಾವಿರ ಕ್ಯಾಟೆಗರಿಯಲ್ಲೇ ಅಂದರೆ ಏನಾಯಿತು? ಈ 35 ಸೀಟುಗಳಲ್ಲಿ ಎಸ್‌ಸಿ : ಎಸ್‌ಟಿ ವಿದ್ಯಾರ್ಥಿಗಳು 7 ಬರಬಹುದು. ಓಬಿಸಿ ಯವರು 8–9 ಬರಬಹುದು. ಜನರಲ್ ಸ್ಟೂಡೆಂಟ್ ಐದಾರು ಬರಬಹುದು. ಅಂದರೆ ಏನಾಯಿತು? ನೀವು ಆ 15 ಪರ್‌ಸೆಂಟನ್ನು ಇದಕ್ಕೆ ಸೇರಿಸಿದರೆ ಮಾಡಿದರೆ, 50 ಪರ್‌ಸೆಂಟ್‌ನಲ್ಲಿ ಎಲ್ಲರಿಗೂ ಸರಿಸಮಾನವಾಗಿ 35 ಸಾವಿರ ರೂ. ಫಿಕ್ಸ್ ಮಾಡಿದ್ದರೆ ಹಾರ್ಟ್ ಬರ್ನಿಂಗ್ ಇರುವುದಿಲ್ಲ. ಬೇರೆಯವರೆಲ್ಲರೂ ಇವತ್ತು ಎಸ್‌ಸಿ ಎಸ್‌ಟಿ, ಬ್ಯಾಕ್‌ವಾರ್ಡ್ ಕ್ಲಾಸಸ್ ಮೇಲೆ ಏಕೆ ಎದ್ದು ಬೀಳುತ್ತಿದ್ದಾರೆ. ಈ ಡಿಸ್ಕ್ರಿಮಿನೇಷನ್‌ನಿಂದ ಮೆರಿಟ್ ವಿದ್ಯಾರ್ಥಿಗಳನ್ನು

ಕೂಡ ಒಂದೇ ಕ್ಯಾಟೆಗರಿಯಲ್ಲಿ ಇದ್ದರೂ ಕೂಡ ಒಂದೇ ಕೋಟಾದಲ್ಲಿದ್ದರೂ ಕೂಡ ಒಬ್ಬರಿಗೆ ನೀವು 2.90 ಲಕ್ಷ ರೂ. ಇನ್ನೊಬ್ಬರಿಗೆ 35 ಸಾವಿರ ರೂಪಾಯಿಗಳು. ಇಲ್ಲೇ ಎತ್ತಿ ಕಟ್ಟುವುದು. ಅವರು ಇವರ ಮೇಲೆ ಬೀಳುವುದು. ಅವರು ರಿಸರ್ವೇಷನ್ನೇ ಬೇಡ ಎನ್ನುವುದು. ಎಷ್ಟು ವರ್ಷ ಇವರಿಗೆ ರಿಸರ್ವೇಷನ್‌ನ್ನು ಕೊಡುವುದು ಎಂದುಕೊಂಡು ಅವರು ಹೋಗುವುದು. ಏಕೆ ಹೋಗುವುದು? ನಾವು ಮೆರಿಟ್ ಇದ್ದರೂ ಕೂಡ ನಮಗೆ ಒಂದು ಫೀಸ್. ಅವರಿಗೆ ಒಂದು ಫೀಸ್ ಎನ್ನುವ ತಾರತಮ್ಯವನ್ನು ನೀವಾಗಿಯೇ ಇದರಲ್ಲಿ ಮಾಡಿದ್ದೀರಿ. 50 ಪರ್‌ಸೆಂಟ್ ಟೋಟಲ್ ಆಗಿ 35 ಸಾವಿರ, ಬೇಕಾದರೆ ಎನ್‌ಆರ್‌ಐ ಅವರಿಂದ ಅವರು ತೆಗೆದುಕೊಳ್ಳಲಿ. 2 ಲಕ್ಷವೋ, 3 ಲಕ್ಷವೋ, 4 ಲಕ್ಷವೋ, 5 ಲಕ್ಷವೋ ತೆಗೆದುಕೊಳ್ಳಲಿ. ಅದಕ್ಕೆ ಮಿತಿಯೇ ಇಲ್ಲ. ಅವರು ಏನು ಕೊಡುತ್ತಾರೋ ಎಷ್ಟು ಕೊಡುತ್ತಾರೋ ಗೊತ್ತೂ ಆಗುವುದಿಲ್ಲ. ನಿಮಗೂ ಲೆಕ್ಕ ಕೊಡುವುದಿಲ್ಲ. ಲೆಕ್ಕ ಎಷ್ಟು ಕೊಡಬೇಕೋ, ಅಷ್ಟು ಮಾತ್ರ ಕಮಿಟಿ ಮುಂದೆ ಕೊಡಬಹುದು ಅಥವಾ ಇನ್‌ಕಂ ಟ್ಯಾಕ್ಸ್‌ಗೆ ಕೊಡಬಹುದು. ಅದಕ್ಕೋಸ್ಕರ, ನಾನು ಏನು ಹೇಳುತ್ತಿರುವುದೇನೆಂದರೆ, ಇಲ್ಲಿ ನೀವು really ಮೆರಿಟ್ ವಿದ್ಯಾರ್ಥಿಗಳ ಹಿತ ಕಾಪಾಡಬೇಕೆಂಬ ಬಗ್ಗೆ ನಿಮಗೇನಾದರೂ ಕಿಂಚಿತ್ತಾದರೂ ಕಾಳಜಿ ಇದ್ದರೆ, ಇದನ್ನು ಕ್ಲಬ್ ಮಾಡಿ. 50 ಪರ್ಸೆಂಟ್ ವಿದ್ಯಾರ್ಥಿಗಳಿಗೆ ಒಂದೇ ಫೀಸ್, 35 ಸಾವಿರ ರೂಪಾಯಿ ಮಾಡಿದರೆ ಅವರಿಗೆ ನೀವು ಅನುಕೂಲ ಮಾಡಿಕೊಟ್ಟಂತಾಗುತ್ತದೆ. Atleast, ಇಲ್ಲಿ ಏನಾಗುತ್ತದೆಂದರೆ, ಉದಾಹರಣೆಗೆ ಹೇಳುತ್ತೇನೆ. 15 ಪರ್ಸೆಂಟ್‌ನಲ್ಲಿ 2.90 ಅಂದರೆ, 2 ಲಕ್ಷ 90 ಸಾವಿರದಲ್ಲಿ ಎಸ್‌ಸಿ:ಎಸ್‌ಟಿಗೆ ಕನಿಷ್ಠವೆಂದರೂ ಈ 15 ಪರ್ಸೆಂಟ್‌ನಲ್ಲಿ 4–5 ಸೀಟುಗಳು ಸಿಗುತ್ತವೆ. 4–5 ಸೀಟುಗಳು ಸಿಕ್ಕಿದ ನಂತರ 2 ಲಕ್ಷ 90 ಸಾವಿರ ಕೊಟ್ಟು ಓದುವಷ್ಟು ಸಾಮರ್ಥ್ಯ ಆತನಿಗೆ ಇರುತ್ತದೆಯೇ? ನಿಮ್ಮ ಲೆಕ್ಕದಲ್ಲಿ ಎಸ್‌ಸಿ:ಎಸ್‌ಟಿಗೆ ಜಾಸ್ತಿ ಕೊಟ್ಟಿದ್ದೀರಿ. Free seats ಜಾಸ್ತಿ ಬಂದವು. ಅದು ಲೆಕ್ಕದಲ್ಲಿದೆ. ಪುಸ್ತಕಗಳಲ್ಲಿ ನಮಗೆ enhancement ಆಯಿತು. ವಿದ್ಯಾರ್ಥಿಗಳಿಗೆ Capacity ಬೇಕಲ್ಲಾ, ಫೀಸ್ ಕೊಟ್ಟು ಓದುವುದು. ನೀವು ಅದರ ಬಗ್ಗೆ ಹೇಳಿಲ್ಲ. ಇಲ್ಲಿ 35ರಲ್ಲೂ ನೀವು vertical reservation ಕೊಡಬೇಕಾಗುತ್ತದೆ. 15ರಲ್ಲೂ ನೀವು ಅದೇ ರೀತಿ ಕೊಡುತ್ತೀರಿ. Another 50% ಇವೆಲ್ಲವೂ ಕೂಡ 25 : 25ಗೆ. ನಿಮ್ಮ 15 ಪರ್ಸೆಂಟ್ ಎನ್.ಆರ್.ಐ. ಬಿಟ್ಟರೆ, ಉಳಿದಕ್ಕೂ ನೀವು ಅದೇ ರೀತಿ ಮಾಡುತ್ತಿದ್ದೀರಿ. ಅದನ್ನು ಮಾಡುವಾಗ fees structure ಪ್ರಕಾರ ಅವರೂ ಹೋಗಬೇಕಾಗುತ್ತದೆ. ಇಲ್ಲಿ ಬರುವ ಎಸ್‌ಸಿ:ಎಸ್‌ಟಿ, ಬ್ಯಾಕ್‌ವರ್ಡ್ ಕ್ಲಾಸ್ ವಿದ್ಯಾರ್ಥಿಗಳಿಗೆ ನೀವು 35 ಸಾವಿರ ಕೊಡುತ್ತೀರಾ? ಇಲ್ಲ. 'ನಾವು ಸಬ್ಸಿಡಿ ಕೊಡುತ್ತೇವೆ' ಎಂದು ಧಾರಾಳವಾಗಿ Finance Minister ಹೇಳಬಹುದು. ಹಿಂದಿನ ಬಾಕಿ ಕೊಡುವುದಕ್ಕಾಗುವುದಿಲ್ಲ. ಎಲ್ಲಾ ಸರ್ಕಾರಗಳು ಕೂಡ ಸ್ಕಾಲರ್‌ಶಿಪ್ ಹಣವನ್ನು ಮುಂದಕ್ಕೆ ಹಾಕಿಕೊಂಡು ಬಂದವು. ಸಕಾಲದಲ್ಲಿ ಸಬ್ಸಿಡಿ ಕೊಡತಕ್ಕಂಥಾದ್ದು ಮುಂದೆ ಹೋದರೆ ಮತ್ತು ಅನೇಕ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಫೀಸ್ ಕೊಟ್ಟಿಲ್ಲವೆಂದು ಕೆಲವು ಕಡೆ deny

ಮಾಡುವಂತಹ ಪರಿಸ್ಥಿತಿ ಬಂದಾಗ ಏನು ಮಾಡುವುದು? ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ಆಂಜನೇಯ ಮತ್ತಿತರೆಲ್ಲರೂ ಮಾತನಾಡಿದರು. ಆದರೆ, ಇವೊತ್ತು ಆ ಪರಿಸ್ಥಿತಿ ಇದ್ದಾಗ ನೀವು ಹೇಗೆ ಇದನ್ನು ಯೋಚನೆ ಮಾಡಿದಿರಿ? ಇದೇ ಪರಿಸ್ಥಿತಿಯಿಂದಾಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳು ಜಾಸ್ತಿಯಾಗಿರಬಹುದು. ಆದರೆ, ನಿಮ್ಮ ಸೀಟುಗಳು ಏನು ಜಾಸ್ತಿಯಾಗುತ್ತವೆ. ಆ ಸೀಟುಗಳು ಫಲಾನುಭವಿಗಳಿಗೆ ಮುಟ್ಟುವುದಿಲ್ಲವೆಂಬ ಮಾತು ಈ ಆ್ಯಕ್ಟ್‌ನಿಂದ ಖಂಡಿತ, ಅದಕ್ಕೋಸ್ಕರ, ಈ ಬಿಲ್ ಸರಿಯಿಲ್ಲ. ತಾವು ಪುನಃ ಯೋಚಿಸಿ. ನಾವು ಪದೇ ಪದೇ ಹೇಳುವುದು, ನಾವು ಮಾಡಿದ್ದೇ ಸರಿ ಎಂದು ನೀವು ಹೇಳುವುದು ಅದು ಸರಿ ಅಲ್ಲ. ಆ ದೃಷ್ಟಿಯಿಂದ ಇದರ ಬಗ್ಗೆ ಯೋಚಿಸಿ. ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೂ ಹೊಡೆತ, ಮೆರಿಟ್ ಹುಡುಗರಿಗೂ ಹೊಡೆತ, ಬ್ಯಾಕ್‌ವರ್ಡ್ ಕ್ಲಾಸ್ ಹುಡುಗರಿಗೂ ಹೊಡೆತ, ಎಸ್‌ಸಿ:ಎಸ್‌ಟಿ ಹುಡುಗರಿಗೂ ಹೊಡೆತ. ಎಲ್ಲರನ್ನೂ ಅದರಲ್ಲಿ discriminate ಮಾಡುವುದು ಸರಿಯಲ್ಲ. ಅದೇ ರೀತಿ Dentalನಲ್ಲಿ ಹಾಗೂ ಉಳಿದ Professional Courseನಲ್ಲೂ ಕೂಡ ಆಗುತ್ತದೆ. ಅದಕ್ಕೆ ಈ 15% effect ಈ ರೀತಿ ಆಗುತ್ತದೆ. ಉದಾಹರಣೆಗೆ, ನಮ್ಮಲ್ಲಿ in totality 10 ಸಾವಿರ ಸೀಟುಗಳು ಇದ್ದರೆ, 1,500 ಸೀಟುಗಳನ್ನು ನೀವು ಅವರಿಗೆ ಅಲಾಟ್ ಮಾಡಿದರೂ 1,500 ವಿದ್ಯಾರ್ಥಿಗಳು, ಫೀ 2 ಲಕ್ಷ 90 ಸಾವಿರ ರೂ. ಇರಬಹುದು. ಇನ್ನೊಂದು ಕಡೆ 2 ಲಕ್ಷ 10 ಸಾವಿರ ರೂ. ಇರಬಹುದು. ಅಷ್ಟು ಫೀ ಕೊಟ್ಟು ಸೇರತಕ್ಕಂಥವರು ಯಾರೂ ಇಲ್ಲ. ಯಾವುದೇ middle class familyಗೂ ಸಾಧ್ಯವಿಲ್ಲ. ಒಬ್ಬ Peon ಕೂಡ ಮಿನಿಮಮ್ 7–8 ಸಾವಿರ ರೂಪಾಯಿಗಳನ್ನು ಡ್ರಾ ಮಾಡುತ್ತಾನೆ. ಆತ ಕೂಡ Government Order ಪ್ರಕಾರ he exceeds income limit. ಆತನ ಮಗನಿಗೂ ಕೂಡ ಸಿಗುವುದಿಲ್ಲ. ಅದಕ್ಕೋಸ್ಕರ, ಇದರ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ. ಬಹಳ ಜಾಸ್ತಿ ತೆಗೆದುಕೊಂಡಿದ್ದಾರೆ. ಬಹಳ ಪ್ರಯತ್ನ ಮಾಡಿದ್ದಾರೆ ಎನ್ನುವುದು ಬೇರೆ. ಆದರೆ, actual ಆಗಿ ಇಲ್ಲಿ ಲಾಭವಾಗುವುದು ಬೇರೆ. ಆದಕಾರಣ, ಇವೆರಡನ್ನೂ ನೀವು ಕ್ಲಬ್ ಮಾಡಿ, 35 ಪರ್ಸೆಂಟ್, 15 ಪರ್ಸೆಂಟ್, 50 ಪರ್ಸೆಂಟ್ ನೀವು ಮ್ಯಾನೇಜ್‌ಮೆಂಟ್‌ನಿಂದ ತೆಗೆದುಕೊಳ್ಳಲು ಅವರು ಒಪ್ಪಿದ್ದಾರೆಂದು ಹೇಳುತ್ತೀರಲ್ಲ, ಆ 50 ಪರ್ಸೆಂಟ್‌ಗೂ ಒಂದೇ ಫೀ ಇಡಿ. ಜನರಲ್ ವಿದ್ಯಾರ್ಥಿಗಳಿರಲಿ, ಎಸ್‌ಸಿ:ಎಸ್‌ಟಿ ವಿದ್ಯಾರ್ಥಿಗಳಿರಲಿ, ಬ್ಯಾಕ್‌ವರ್ಡ್ ಕ್ಲಾಸ್ ವಿದ್ಯಾರ್ಥಿಗಳಿರಲಿ, ಉಳಿದ 50 ಪರ್ಸೆಂಟ್‌ನಲ್ಲಿ ತಾವು discrimination ಮಾಡಿದಿರಿ. Discriminate ಮಾಡಿದಾಗ ಅಲ್ಲೂ ಕೂಡ ಸ್ವಲ್ಪ ನಮಗೆ ತಲುಪತಕ್ಕಂಥ, ಎಟುಕತಕ್ಕಂಥ ರೀತಿಯಲ್ಲಿ ಇರಬೇಕು. ಮೂರನೆಯದಾಗಿ, ಅವರಿಗೂ ಇಷ್ಟು free hand ಕೊಟ್ಟಿದ್ದೀರಿ. 'NRI and Others' 10 ಲಕ್ಷ ಕೊಟ್ಟು ಇಲ್ಲಿರುವವರನ್ನೂ ತೆಗೆದುಕೊಳ್ಳಬಹುದು. ಎನ್.ಆರ್.ಐ. ಸಿಕ್ಕಿದರೆ ಸರಿ, ಸಿಗದಿದ್ದರೂ ಲೋಕಲ್‌ನವರನ್ನು ತೆಗೆದುಕೊಳ್ಳುವುದಕ್ಕೆ ನೀವು ಇದರಲ್ಲಿ ತಿಳಿಸಿದ್ದೀರಿ. ಹೀಗೆ ಎಲ್ಲರಿಗೂ ಅನುಕೂಲ ಮಾಡಿಕೊಟ್ಟು ಈ ವಿದ್ಯಾರ್ಥಿಗಳಿಗೆ ಅನಾನುಕೂಲ ಏಕೆ ಮಾಡುತ್ತೀರಿ? ಒಂದು ಕಡೆ ಮ್ಯಾನೇಜ್‌ಮೆಂಟ್‌ಗೆ ಏನು

ಬೇಕೋ, ಆ ಅನುಕೂಲ ಮಾಡಿಕೊಟ್ಟಿದ್ದೀರಿ. ಇನ್ನೊಂದು ಕಡೆ, ಮೆರಿಟ್ ವಿದ್ಯಾರ್ಥಿಗಳಿಗೆ ಏಕೆ ಅನಾನುಕೂಲ ಮಾಡುತ್ತೀರಿ? ನಿಮ್ಮ ಪ್ರಕಾರ ಹೋದ ವರ್ಷ ಖಾಸಗಿಯಲ್ಲಿ 2.90 ಲಕ್ಷ, ಸಿ.ಇ.ಟಿ. ಯಲ್ಲಿ 1.65 ಲಕ್ಷ ಆದರೆ, ಈ ವರ್ಷ ಮೆಡಿಕಲ್‌ನಲ್ಲಿ 2.90 ಲಕ್ಷ ಮಾಡಿದಿರಿ. ಅಂದರೆ, ಈಗ ಇಂಜಿನಿಯರಿಂಗ್‌ನಲ್ಲಿ ಕೂಡ ಅದೇ ರೀತಿಯಾಗಿ ಮೊದಲು 11 ಸಾವಿರದಿಂದ 35 ಸಾವಿರ ಇತ್ತು. ಈಗ 23 ಸಾವಿರದಿಂದ 85 ಸಾವಿರದ ತನಕ ನೀವು prescribe ಮಾಡಿದ್ದೀರಿ. ಅಂದರೆ, 85 ಸಾವಿರವನ್ನು ಯಾರ ಜೊತೆಯಲ್ಲಿ ನೀವು ಲಿಂಕ್ ಮಾಡಿದ್ದೀರಿ? ಸಿ.ಇ.ಟಿ.ಯಲ್ಲಿ ಕೊಡತಕ್ಕಂಥವರಿಗೆ ಮತ್ತು ಖಾಸಗಿಯಲ್ಲಿ ಅವರಾಗಿಯೆ ಕೊಡುವುದು, ಎರಡೂ ಒಂದೇ ಇದೆ.

ಡಾ॥ ವಿ.ಎಸ್. ಆಚಾರ್ಯ : ಸುಪ್ರಿಂಕೋರ್ಟ್ ಬಡ ಮೆರಿಟ್ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಸಬ್ಸಿಡಿ ರೂಪದಲ್ಲಿ ಕೊಡುವುದಕ್ಕೆ ಒಪ್ಪಿದೆ. ಉಳಿದಂತೆ ಎನ್.ಆರ್.ಐ. ಬಿಟ್ಟು ಎಲ್ಲದಕ್ಕೂ ಒಂದೇ ನಮೂನೆ, ಸಮಾನ ಫೀ ಇರಬೇಕೆಂಬ ಒಂದು ತತ್ವವನ್ನು ಅನುಸರಿಸಿದೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು 'ಬಿ' ಕೆಟಗಿರಿ, 'ಸಿ' ಕೆಟಗಿರಿ ಮತ್ತು 'ಡಿ' ಕೆಟಗಿರಿ, ಯಾವುದು 5 ಪರ್ಸೆಂಟ್ ಸೀಟು ಎಂದು ಹೇಳುತ್ತೇವೋ, ಅದನ್ನು ಎಷ್ಟೆಷ್ಟಕ್ಕೋ ಕೊಡುವ ಹಾಗಿಲ್ಲ. ಎಲ್ಲದಕ್ಕೂ ಒಂದೇ ಸೀಟು ಮಾಡುವಾಗ average yield ಅಥವಾ realisation. ಕಳೆದ ವರ್ಷ ಇಂಜಿನಿಯರಿಂಗ್‌ನಲ್ಲಿ 57 ಸಾವಿರ ಬಂದಿದ್ದು, ಯಾರಿಗೂ ಲಾಭ ಮಾಡಿಕೊಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಕೇಳುವುದೇನೆಂದರೆ, 50 ಪರ್ಸೆಂಟ್ ಸೀಟುಗಳನ್ನು ಅವರು ನಿಮಗೆ ಏನು ಕೊಟ್ಟಿದ್ದಾರೆ, ಅದರಲ್ಲೇಕೆ split ಮಾಡುತ್ತೀರಿ?

ಡಾ॥ ವಿ.ಎಸ್. ಆಚಾರ್ಯ : ಅದರಿಂದ ಹೆಚ್ಚು ಜನರಿಗೆ ಬಾಧೆಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಭಾರ ಆಗುತ್ತದೆಂದರೆ, ಭಾರ ಹೊತ್ತುಕೊಳ್ಳಲಿ, ಎನ್.ಆರ್.ಐ. ಆ ಭಾರ ಹೊತ್ತುಕೊಳ್ಳಲಿ, ಮ್ಯಾನೇಜ್‌ಮೆಂಟ್‌ನವರು ಹೊತ್ತುಕೊಳ್ಳಲಿ. ಈ 15 ಪರ್ಸೆಂಟ್‌ನಲ್ಲಿ ಯಾರು ಬರುತ್ತಾರೆ? ಅವರು ಬಡ ಮಕ್ಕಳು ತಾನೇ? ನೀವು split ಮಾಡಿ, ಡಿವಿಜನ್ ಕ್ರಿಯೇಟ್ ಮಾಡಿ ಇಡುತ್ತೀರಿ. ಆ ಡಿವಿಜನ್‌ನಿಂದ ultimately ತೊಂದರೆ ಯಾರಿಗೆ ಆಗುತ್ತದೆ? ಎಸ್‌ಸಿ:ಎಸ್‌ಟಿ ಹುಡುಗರಿಗೆ ಎಲ್ಲಿ ರಿಸರ್ವೇಶನ್ ಇದೆಯೋ, ಅಲ್ಲಿ ಅವರಿಗೆ ಮಾತನಾಡುವ ರೀತಿಯಲ್ಲಿ ಅವಕಾಶ ಮಾಡಿಕೊಟ್ಟಂತಾಗುತ್ತದೆ. Heart burning ಆಗುತ್ತದೆ. 'ನಾವೂ same marks ತೆಗೆದುಕೊಂಡು ಬಂದಿದ್ದೇವೆ, ನಾವು ಸಿ.ಇ.ಟಿ.ಯಲ್ಲಿ ಪಾಸ್ ಆಗಿದ್ದೇವೆ, ಇಲ್ಲಿ ಕಾಮೆಡ್-ಕೆ ನಲ್ಲೂ ಪಾಸ್ ಆಗಿದ್ದೇವೆ. ಈ ರೀತಿ ನಾವು ಒಂದೇ ಇರುವಾಗ, ಆ ಮಕ್ಕಳಿಗೆ ನೀವು 35 ಸಾವಿರ ಕೊಡುತ್ತೀರಿ, ನಮಗೆ 2 ಲಕ್ಷ 90 ಸಾವಿರ ರೂಪಾಯಿಗಳು ಏಕೆ?' ಎಂದು ಕೇಳಬಹುದು. Discretinary ಕೋಟಾ ಇದ್ದಾಗ discrimination ಮಾಡಿದರೆ ಯಾರಿಗೂ heart burning ಆಗುವುದಿಲ್ಲ. ಆದರೆ ಇಲ್ಲಿ ಮೆರಿಟ್ ಕೋಟಾ ಎಂದು ನೀವು ಟ್ರೀಟ್ ಮಾಡಿ, ಎಲ್ಲರಿಗೂ ನೀವು 50 ಪರ್ಸೆಂಟ್ ತೆಗೆದುಕೊಳ್ಳುವಾಗ ನಿಮ್ಮ ಕೋಟಾದಲ್ಲಿ discrimination ಏಕೆ

ಮಾಡುತ್ತೀರಿ? ಎರಡನೆಯದಾಗಿ, ಅವರಿಗೆ ಏನು ಭಾರವಾಗುತ್ತದೆ, ಅದರ ಬಗ್ಗೆ ನೀವು ಅನುಕಂಪ ತೋರಿಸುವ ಅವಶ್ಯಕತೆ ಇಲ್ಲ. ಅವರು ಅದನ್ನು work out ಮಾಡಿಕೊಳ್ಳುತ್ತಾರೆ. ಆದರೆ, ಅದಕ್ಕೋಸ್ಕರ, general seat ನಲ್ಲಿ ಕಡಿಮೆ ಬಂತೆಂದರೆ 15 ಪರ್ಸೆಂಟ್ ಸೀಟುಗಳು ಎನ್.ಆರ್.ಐ.ಗೆ ಶಿಫ್ಟ್ ಆಗುತ್ತದೆ. ಎನ್.ಆರ್.ಐ.ಗಳು ಸಿಗಲಿಲ್ಲವೆಂದರೆ, ಇಲ್ಲಿ ದಡ್ಡ ಹುಡುಗರು 10–20 ಲಕ್ಷ ಕೊಟ್ಟು ಸೇರುವವರು ಇರುತ್ತಾರಲ್ಲ, ಅವರನ್ನು ಸೇರಿಸಿಕೊಳ್ಳುತ್ತಾರೆ. ಅವರ ಬಗ್ಗೆ ನೀವು sympathy ತೋರಿಸುವ ಅವಶ್ಯಕತೆ ಇಲ್ಲ. ನಿಜವಾಗಿಯೂ ನಿಮ್ಮ sympathy ಇರಬೇಕಾಗಿರುವುದು Medical, Engineering, Dental and other Professional Coursesನಲ್ಲಿ ಎಲ್ಲಿ ನೀವು 60 ಪರ್ಸೆಂಟ್ ತೆಗೆದುಕೊಂಡಿದ್ದೀರಿ ಅಥವಾ 40 ಪರ್ಸೆಂಟ್ ತೆಗೆದುಕೊಂಡಿದ್ದೀರಿ, ಎಲ್ಲಿ ನೀವು 50 ಪರ್ಸೆಂಟ್ ತೆಗೆದುಕೊಂಡಿದ್ದೀರಿ, ಇವರುಗಳನ್ನು ರಕ್ಷಣೆ ಮಾಡುವುದು ಬಹಳ ಮುಖ್ಯ. ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಕೂಡ 40 ಪರ್ಸೆಂಟ್ ಏಕೆ? ಮೆಡಿಕಲ್‌ನಲ್ಲಿ 50 ಪರ್ಸೆಂಟ್ ಒಪ್ಪಿಕೊಳ್ಳುತ್ತಿದ್ದೀರಿ. ಇಂಜಿನಿಯರಿಂಗ್‌ನಲ್ಲಿ 40 ಪರ್ಸೆಂಟ್ ಒಪ್ಪಿಕೊಳ್ಳುತ್ತಿದ್ದೀರಿ, 60 : 40, ಅಲ್ಲಿ ನೀವು 40 ಪರ್ಸೆಂಟ್ ತೆಗೆದುಕೊಂಡಿದ್ದೀರಿ. ಮೊದಲ ಹಂತ 40 ಪರ್ಸೆಂಟ್ 15 ಸಾವಿರಕ್ಕೆ. ಆನಂತರ, 20 ಪರ್ಸೆಂಟ್‌ಗೆ fee structure 85,000 ಮತ್ತು ಮೂರನೆಯ ಹಂತಕ್ಕೆ ಏನಿದೆ, ಅದೂ ಇದೂ ಒಂದೇ. So, as good as that quota is not yours. You have agreed for management quota. ಅದನ್ನು ಮ್ಯಾನೇಜ್‌ಮೆಂಟ್ ಕೊಟ್ಟಂತೆ. ಆದರೆ, ನೀವು ನಿಮ್ಮ ಕೋಟಾದಲ್ಲಿ ತೆಗೆದುಕೊಂಡಂತೆ ತೋರಿಸುತ್ತಿದ್ದೀರಿ. ಮೆರಿಟ್‌ನಲ್ಲಿ ಬೆನಿಫಿಟ್ ಏನಿದೆ? ಮೆರಿಟ್ ಹುಡುಗರಿಗೆ ಅದರಿಂದ ಏನು ಬೆನಿಫಿಟ್? ಅದಕ್ಕೋಸ್ಕರ, ಇದನ್ನು ಪುನರ್ ಪರಿಶೀಲಿಸಲು ಮತ್ತೊಮ್ಮೆ ಕುಳಿತುಕೊಳ್ಳಿ. Atleast, ಈ ಸಲವಾದರೂ ಅವರು ನಮ್ಮ ಮಾತನ್ನು ಕೇಳಲಿ. ಹೋದ ಸಲ ನಮ್ಮನ್ನು ಕೇಳದೆ ತರಾತುರಿಯಲ್ಲಿ ಪಾಸ್ ಮಾಡಿ ಮುಖಭಂಗ ಮಾಡಿಸಿಕೊಂಡಿರಿ. ಕನಿಷ್ಟ ಪಕ್ಷ ಈ ಸಾರಿ ಕುಳಿತು, ಸಂಬಂಧ ಪಟ್ಟವರನ್ನು ಕರೆದು ಮಾತನಾಡಿ, ಯಾವುದು ಒಳ್ಳೆಯದನ್ನು ರಾಜ್ಯಕ್ಕೆ, ರಾಜ್ಯದ ವಿದ್ಯಾರ್ಥಿಗಳಿಗೆ ಒಳ್ಳೆಯದೋ ಅದನ್ನು ಮಾಡೋಣ. ಇನ್ನೊಂದು ಕಡೆ Institutions ಮುಳುಗಿಸಬೇಕು ಎಂದು ಯಾರಿಗೂ ಇಚ್ಛೆ ಇಲ್ಲ. Institutions ಹೆಚ್ಚಿಗೆ ಬಂದರೆ, ಈಗ ಹೆಚ್ಚಿಗೆ ಸೀಟ್ ಕೂಡ ಸಿಗುತ್ತವೆ. ಆ ಮಾತು ಬೇರೆ. ಆದರೆ ಆ ಹೆಸರಿನಲ್ಲಿ ಬಡ ವಿದ್ಯಾರ್ಥಿಗಳಿಗೆ, ಮೆರಿಟ್ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುವುದು ಬೇಡ. ಅದಕ್ಕೆ ದಯವಿಟ್ಟು ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಿ, ಹೋದ ಸಲ ಇದೇ ರೀತಿಯಲ್ಲಿ ಆಯಿತು. ಮತ್ತೆ ಕುಳಿತು ಚರ್ಚೆ ಮಾಡೋಣ, ಇಲ್ಲವೇ Select Committee ಗೆ ಕಳುಹಿಸಿ. ಅಲ್ಲಿಯಾದರೂ ಚರ್ಚೆ ಮಾಡೋಣ. ಅದೂ ಇಲ್ಲ, ಇದೂ ಇಲ್ಲ. ನಾವು ಮಾಡಿದ್ದೇ ಸರಿ ಎಂದರೆ ನಾವು ಏನು ಹೇಳಿದರೂ ಕೂಡ ಪ್ರಯೋಜನವಾಗುವುದಿಲ್ಲ. ಪುನಃ ಪುನಃ ಅವರು ತಪ್ಪನ್ನು ಮಾಡುತ್ತಲೇ ಇರುತ್ತಾರೆ, ನಾವು ಹೇಳುತ್ತಲೇ ಇದ್ದೇವೆ, ಕೊನೆಗೆ ಹೇಳಿ ಬಿಡುವುದು, ನಿಮ್ಮ ಸಲಹೆ ಏತಕ್ಕೆ ಬೇಕು

ಅಂತ. ನಮ್ಮ ಸಲಹೆ ಇದಕ್ಕೇ ಬೇಕಾಗಿತ್ತು ನಿಮಗೆ. ನೀವು ಪದೇ ಪದೇ ತಪ್ಪು ಮಾಡಬೇಡಿ ಎಂದು ಎರಡು ಎರಡು ದಿವಸ ಇಲ್ಲಿ ಕುಳಿತಿದ್ದಾಗ ನಮಗೆ ಹೇಳಿ ವ್ಯರ್ಥ ಮಾಡಿದಿರಿ, ನಾವು ಸಲಹೆ ಒಳ್ಳೆಯದು ಕೊಟ್ಟಾಗ ಅದನ್ನು ಸ್ವೀಕಾರ ಮಾಡುವುದಿಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ಮೆರಿಟ್, ವಿದ್ಯಾರ್ಥಿಯ ರಕ್ಷಣೆ ಮಾಡಿ, ಅವರಿಗೆ ಒಂದೇ fee structure ಇಡಿ. ಉಳಿದ 50% ನಲ್ಲಿ ಯಾವ ರೀತಿಯಾಗಿ ಅವರು category-wise ಮಾಡಿದ್ದಾರೋ, ಅದನ್ನು ನೀವು ಎಷ್ಟೇ ಆ ಸಿಟ್ಸ್‌ನಲ್ಲಿ ಬಡ ವಿದ್ಯಾರ್ಥಿಗಳಿಗೆ ಕೊಟ್ಟರೆ ಅಥವಾ ರೈತನ ಮಕ್ಕಳಿಗೆ ಕೊಟ್ಟರೆ, ಅವನಿಗೆ ತೆಗೆದುಕೊಳ್ಳುವ ಶಕ್ತಿ ಇರುವುದಿಲ್ಲ. ಅವೂ ultimately, management ಗೆ ಹೋಗುತ್ತವೆ. ಕನಿಷ್ಟ ಈ ಐವತ್ತಾನ್ನಾದರೂ ನೀವು ಕಾಪಾಡಿಕೊಳ್ಳಿ ಅನ್ನತಕ್ಕಂಥ ಮಾತು ತಮ್ಮ ಮುಖಾಂತರ ಹೇಳಿ, ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಇಂಟ್ರಡ್ಯೂಸ್ ಮಾಡಲಿಕ್ಕೆ ಲಾಯಕ್ಕಾದ ಬಿಲ್ ಅಲ್ಲ. ಈ ಬಿಲ್ ಇಡುವುದಕ್ಕೆ ಮೊದಲೇ ನಾನು ಬಹಳ ಬೇಸರದಲ್ಲಿ ಹೇಳಬೇಕಾಗುತ್ತದೆ, ಅವತ್ತೇನು ನಾವು ಬಿಲ್ ಮೇಲೆ ಮಾತನಾಡಿದೆವು. "ನಮಗೆ ಇಲ್ಲಿ ಶಕ್ತಿ ಇದೆ, strength ಇದೆ ಎನ್ನುವ ಒಂದು ಕಾರಣಕ್ಕಾಗಿ ಬಿಲ್ ಪಾಸ್ ಮಾಡಿಕೊಂಡು ಹೋಗಿ ಬಿಟ್ಟು" ಅವತ್ತು ಸನ್ಮಾನ್ಯ ಉನ್ನತ ಶಿಕ್ಷಣ ಶಿಕ್ಷಕರು ಕೌನ್ಸಿಲ್‌ನಲ್ಲಿ ಹೋದಾಗ "ರಿಯಾಯಿತಿಗಳನ್ನು ಘೋಷಣೆ ಮಾಡುತ್ತೇನೆ, ನಿಮ್ಮನ್ನೆಲ್ಲಾ ಕರೆಸಿ ಮಾತನಾಡುತ್ತೇನೆ" ಎಂದರು. ನಾವು ಕೇಳಿದೆವು, ಏನು ಇನ್ನೂ ವಿಧಾನ ಸಭೆ ಸದಸ್ಯರೇ ಕುಳಿತುಕೊಂಡು ಮಾತನಾಡದೆ, Councilನವರ ಜೊತೆಗೆ ಮಂತ್ರಿಗಳು ಮಾತನಾಡುತ್ತಿದ್ದಾರಲ್ಲಾ ಎಂದು ಕೇಳಿದರೆ, Council ಗೆ ಮಾತು ಕೊಟ್ಟಿದ್ದೆವು, ಹಾಗಾಗಿ ಅವರ ಜೊತೆಗೆ ಮಾತನಾಡಿದೆವು, ವಿಧಾನಸಭೆಯಲ್ಲೇನೂ ಮಾತು ಕೊಟ್ಟಿರಲಿಲ್ಲ ಎಂದು ಹೇಳಿದರು. ಆ ಸ್ಥಿತಿ ವಿಧಾನ ಸಭೆಗೆ ಇವತ್ತು ಬಂದಿದೆ ಅಧ್ಯಕ್ಷರೆ, ವಿಧಾನ ಸಭೆಯಲ್ಲಿ ನಾವು ಹೇಳಿದರೆ, ನಮ್ಮ ಹತ್ತಿರ ಏನು ಕುಳಿತು ಮಾತನಾಡುವ ಸ್ಥಿತಿ ಇಲ್ಲ ಇವತ್ತು. ಅಲ್ಲಿ ಪಾಸ್ ಆಗಬೇಕು, "ಅಲ್ಲೇನೂ convince ಮಾಡಿ ಬಿಡುತ್ತೇವೆ, ಆಮೇಲೆ ಕುಳಿತುಕೊಂಡು ಮಾತನಾಡುತ್ತೇವೆ" ಎಂದು ಮಂಡಿಸಿದ್ದಾರೆ. ಎರಡನೆಯದು, ಬಿಲ್ ಅನ್ನು ಏಕೆ ಇಡುತ್ತಿದ್ದೀರಿ ಎಂದು ಕೇಳಿದೆವು. ಯಾರ ಅನುಕೂಲಕ್ಕಾಗಿ ಬಿಲ್ ಅನ್ನು ಇಡುತ್ತಿದ್ದೀರಿ ಎಂಬುದು ನಮಗೆ ಗೊತ್ತಾಗಬೇಕು. ಸಾರ್, ಸಿಇಟಿಯಲ್ಲಿ ಬರೆದಿರುವುದು ಈ ರಾಜ್ಯದ ಮಕ್ಕಳೇ ಅಥವಾ ಸಿಇಟಿಯಲ್ಲೂ ಬೇರೆ ರಾಜ್ಯದ ಮಕ್ಕಳು ಬರೆದಿದ್ದಾರೆ. ಕಾಮೆಡ್-ಕೆ ನಲ್ಲೂ ಈ ರಾಜ್ಯದ ಮಕ್ಕಳು ಬರೆದಿದ್ದಾರೆ, ಅಲ್ಲೂ ಬೇರೆ ರಾಜ್ಯದ ಮಕ್ಕಳು ಬರೆದಿರಬಹುದು. ಕಾಮೆಡ್-ಕೆ ನಲ್ಲಿರುವ ಹುಡುಗರನ್ನು ಕಡಿಮೆ ಮಾಡಿ, ಸಿಇಟಿ ಯಲ್ಲಿ ಅಡ್ಮಿಷನ್ಸ್ ಕೊಡುತ್ತೇವೆ ಎನ್ನುವಂತಹ ಒಂದೇ ಒಂದು ಮಾತು ಹೇಳಲಿಕ್ಕೆ ತಾವು ಈ ಬಿಲ್ ಅನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿದ್ದೀರಿ. ಕಾಮೆಡ್-ಕೆ ನಲ್ಲೂ ಬರೆದಿರುವವರು.

ಬೇರೆ ಯಾವ ಮಕ್ಕಳು ಬರೆದಿಲ್ಲ. ಅಲ್ಲೇನು 88–89 ಸಾವಿರ ಬರೆದಿದ್ದಾರ್ರೋ, ಅವರೆಲ್ಲಾ ಬಹುತೇಕ ಕರ್ನಾಟಕದವರೇ, ಸಿಇಟಿಯಲ್ಲಿ ಬರೆದಿರುವವರೂ ಅದೇ ಮಕ್ಕಳು. ನಿಮ್ಮ ಕಡೆಗೆ ತೆಗೆದುಕೊಂಡು ಕೊಟ್ಟರೆ ಮಕ್ಕಳಿಗೇನಾದರೂ ಅನುಕೂಲ ಆಗಬೇಕಲ್ಲವೇ? ಸಿಇಟಿ ಯಲ್ಲಿ ತಂದು ಅಡ್ಮಿಷನ್ ಕೊಟ್ಟು, ನಾವು ಬಹಳ ಅನುಕೂಲ ಮಾಡಿದೆವು ಎಂದು ನೀವು ಹೇಳಬಹುದು. ನೀವು ಈ ಸಲ ಇದನ್ನು ಮಾಡಲಿಕ್ಕೆ ಬರುವುದಿಲ್ಲ. ಏಕೆ ಬರುವುದಿಲ್ಲ? ಸುಪ್ರೀಂಕೋರ್ಟ್ ಸ್ಪಷ್ಟವಾಗಿ common single entrance ನಲ್ಲಿ ಒಂದು window system ನಲ್ಲಿ ಅಡ್ಮಿಷನ್ಸ್ ಆಗಬೇಕು ಎಂದು ಹೇಳಿದೆ. ಒಂದು ಮೆಡಿಕಲ್ ಕಾಲೇಜ್ ಈಗ ಕಾಮೆಡ್–ಕೆ ನಲ್ಲಿ ಪರೀಕ್ಷೆ ಮಾಡಿದೆ. Seats ಅನ್ನು notify ಮಾಡಿಬಿಟ್ಟಿದೆ. So many seats are availabled with our Medical College ಅಥವಾ Comed-K group ನಲ್ಲಿ ಎಂದು ತಿಳಿಸಿದೆ. ಈಗ ನೀವು ಅಲ್ಲಿ ಸೀಟ್ ಅನ್ನು reduce ಮಾಡುತ್ತೀರಿ. ಅಲ್ಲಿ ಹುಡುಗ ಅದನ್ನು question ಮಾಡುತ್ತಾನೆ. "I have entered Comed-K examination because, ಇಷ್ಟು available seats ಇದೆ ಎಂದು notification ಆಗಿತ್ತು. ಈಗ ದಿಢೀರ್ ಎಂದು ಅಲ್ಲಿರುವಂತಹ 60% seats cut ಆಗಿದೆ. I am loosing my right "ಎಂದು ಅವನು ಹೇಳುತ್ತಾನೆ. ಇದಕ್ಕೆ ನೀವು ಉತ್ತರ ಹೇಳಬೇಕಲ್ಲವೇ? ನೀವು ಕರೆದಿರುವ CET examination 382-383 medical ಹುಡುಗರಿಗೆ, 54 dental ಹುಡುಗರಿಗೆ, ನಾಲ್ಕು ಸಾವಿರ ಚಿಲ್ಲರೆ engineering ಹುಡುಗರಿಗೆ. ಈ ಹುಡುಗರ strength ಅನ್ನು ಜಾಸ್ತಿ ಮಾಡುತ್ತೇವೆ ಎಂದು ಇಲ್ಲಿ ಹೇಳುತ್ತೀರಿ. ಅವರೂ ಹೇಳಬೇಕಲ್ಲವೇ? It was also a common entrance test conducted under the guidance of Hon'ble Supreme Court of India. ಆ common test ನಲ್ಲಿ ಬರೆದಂತಹ ಹುಡುಗರಿಗೆ, ನೀವು ಹೇಗೆ justify ಮಾಡುತ್ತೀರಿ ಈಗ? ನನಗೆ ಏಕೆ ಕೊಡಲಿಲ್ಲ seat ಎಂದು say, 26th man ಇವತ್ತು ಕೋರ್ಟ್‌ಗೆ ಹೋಗುತ್ತಾನೆ ಎಂದಿಟ್ಟುಕೊಳ್ಳಿ. ನನಗೆ ಏಕೆ ಅಡ್ಮಿಷನ್ ಇಲ್ಲ? ನನಗೆ ಇಲ್ಲಿ available seats were 85%. 85% seat ಇರುವಂತಹ ಕಾಲೇಜಿನಲ್ಲಿ ನೀವು 60%–50% ನೀವು ತೆಗೆದುಕೊಂಡು, 15% NRI ನವರಿಗೆ ಎಂದು ನೀವು ಕೊಡಬೇಕಾದರೆ, he is confined to 25-35%. 36th man ಗೆ ಏನು ಎಂದು ಅವರು ಉತ್ತರ ಹೇಳಬೇಕಲ್ಲವೇ? Is it not against the decision of the Supreme Court? ನೀವು ಹೇಗೆ ಮಾಡಲಿಕ್ಕೆ ಬರುತ್ತದೆ? ಎರಡನೆಯದು, The State cannot insist on Private Educational Institutions, which receive no aid from the State to implement the State Policy on reservation, ಆ reservation ಬಿಡಿ, the State cannot insist as per neither the judgment of Pai Foundation nor in the Constitution Bench Division in Kerala Education Bill 959, which was approved by the judgment in Pai Foundation. Is

there anything which would allow the State to regulate or control admissions to the unaided professional educational institutions? ನಿಮಗೆ ಇದರಲ್ಲಿ interfere ಆಗಲಿಕ್ಕೆ ಅಧಿಕಾರ ಉಳಿಸಿಲ್ಲ. ಒಪ್ಪಂದ ಎಲ್ಲಿ ಆಗಬೇಕಾಗಿತ್ತು ಎಂಬ ಬಗ್ಗೆ ನಾನು ಆಮೇಲೆ ಬರುತ್ತೇನೆ. ನಿಮಗೆ ಅಧಿಕಾರ ಇಲ್ಲ. ಆಮೇಲೆ the Supreme Court decision is very much clear. 85% of the seats are to be given only on merit. 'Only on merit'. No other consideration. 15% NRI ಮಾತ್ರ discretion ಗೆ ಇತ್ತು. ಆ discretion ಬಗ್ಗೆ ನಾನು ನಂತರ ಬರುತ್ತೇನೆ. 85% seats ಅನ್ನು merit ನಲ್ಲಿ ಕೊಡಬೇಕು. ಒಂದೇ examination ನಲ್ಲಿ ಆಗಿರುವ merit ನಲ್ಲಿ ತಾವು ಕೊಡಬೇಕು. Single window, single entrance. ಇಲ್ಲವೇ entiye seats ಅನ್ನು ಆ ಕಾಲೇಜಿಗೆ CET ನಲ್ಲಿ ಕೊಡಬೇಕಾಗುತ್ತದೆ. ಇಲ್ಲವೇ entire seats ಅನ್ನು ಕಾಲೇಜಿಗೆ ಕಾಮೆಡ್-ಕೆ ನಲ್ಲಿ ಕೊಡಬೇಕು. You have to recognize only one entrance examination. You cannot go for two entrance examination which is against the decision of the Supreme Court. You cannot do this. ನೀವು ಏಕೆ ಮಾಡುತ್ತಿದ್ದೀರಿ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ನಾವು ಅವತ್ತು ಹೇಳಿದೆವು, ಇದನ್ನು ನೀವು ಮಾಡಲಿಕ್ಕೆ ಸಾಧ್ಯವೇ ಇಲ್ಲ. ಎರಡು examination ಎಂದಾಕ್ಷಣ Supreme Court ನಿಮ್ಮನ್ನು ಹೊಡೆದು ಹಾಕುತ್ತದೆ ಅಂತ. ಆದರೆ ಇವತ್ತು automatic ಆಗಿ ಎರಡು examination ಆಗಿ ಹೋಯಿತು. Un-aided college ನಲ್ಲಿ ಕಾಮೆಡ್-ಕೆ ಮುಗಿದು ಬಿಟ್ಟಿದೆ. ಕಾಮೆಡ್-ಕೆ ನಲ್ಲಿ ಬರೆದಿರುವವನೂ ಈಗ ಅಲ್ಲಿ admissionಗೆ ಬರುತ್ತಾನೆ, ಕಾಮೆಡ್-ಕೆ ನಲ್ಲಿ ಬರೆದಿರುವವನು ಸಿಇಟಿನಲ್ಲಿ ಇದ್ದನೋ ಇಲ್ಲವೋ ನಿಮಗೆ ಗೊತ್ತಿಲ್ಲ. CET ಹುಡುಗನನ್ನು ಅಲ್ಲಿ admit ಮಾಡಲಿಕ್ಕೆ ನೀವು ಹೊರಟಿದ್ದೀರಿ. ನಮಗೇನು ಒಳ್ಳೆಯದು ಮಾಡಿದ್ದೀರಿ? ಹೋಗಲಿ, let us face the consequence, Supreme Courtಗೆ ಹೋಗಿ ಬಿಡೋಣ. Fee structure ನಾನು ಓದುತ್ತೇನೆ, ಅವರು ಓದಲಿಲ್ಲ. ಹೋದ ಸಲ ಇದ್ದಂತಹ comparative statement. Concessional fee seats 849 medical ನಲ್ಲಿ, ಕಾಮೆಡ್-ಕೆ ದ್ದು. Fees Rs. 35,000/-. Higher fee seats 560 fee Rs. 1,55,000/-. ಈಗ ನೀವು ಮಾಡಿದ್ದು, concessional fee seats 990, fee amount Rs. 35,000/- Higher fee seats 425, fee amount Rs. 2,90,000/-. Private Medical College ನವರು 1 ಲಕ್ಷದ 65 ಸಾವಿರ ರೂಪಾಯಿಗಳಿಗೆ ಕೊಡುತ್ತಿದ್ದಂತಹ ಸೀಟನ್ನು ಅವರ ಪಾದಕ್ಕೆ ಅಡ್ಡಬಿದ್ದು 2 ಲಕ್ಷದ 90 ಸಾವಿರ ರೂಪಾಯಿಗಳಿಗೆ ಕೊಡುತ್ತೇವೆ ಎಂದು ನೀವು ಒಪ್ಪಿಕೊಂಡು ನಮ್ಮ ಮುಂದೆ ಇವತ್ತು ಬಿಲ್ ಅನ್ನು ಇಂಟ್ರಡ್ಯೂಸ್ ಮಾಡುತ್ತೀರಿ. ಈ ಭಾಗದಲ್ಲಿ ಅವತ್ತು ದೊಡ್ಡ ಹೋರಾಟ ನಡೆಯಿತು. 1 ಲಕ್ಷದ 65 ಸಾವಿರ ರೂಪಾಯಿಗಳನ್ನು ಕೊಡುವುದಕ್ಕಾಗುತ್ತದೆಯೇ? ನಾವೆಲ್ಲಾ

ಕುರಿತು 4–5 ರೌಂಡ್ ಚರ್ಚೆ ಮಾಡಿದೆವು. ಆಗಿದ್ದ Finance Minister ಆದ ಮಾನ್ಯ ಸಿದ್ದರಾಮಯ್ಯನವರು reimbursement ಮಾಡಬೇಕು ಎಂದು ಗಲಾಟೆ ಆಯಿತು. 1 ಲಕ್ಷ 65 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಮುರಗೋಡ್ ಕಮಿಟಿಯಲ್ಲಿ structure fix ಆದರೆ, ನೀವು ಯಾವುದೇ ಕಮಿಟಿ ಇಲ್ಲದೆ ಯಾವುದೇ authority ಇಲ್ಲದೆ, Rs. 2,90,000/-ಗೆ ಮಾಡುತ್ತೀರಿ. Dental seats concessional fee seats 769, fee amount was Rs. 25,000/-. Higher fee seats 512, fee amount Rs. 1 lakh. ಈಗ concessional fee seats 899, fee Rs. 25,000/- same. Higher fee seats 384, fee Rs. 2,30,000/-. 1 ಲಕ್ಷ ರೂಪಾಯಿಗಳಿಗೆ ಸುಪ್ರೀಂ ಕೋರ್ಟ್ ಇನ್ನು revise ಮಾಡದಿರುವಂತಹ ಸ್ಥಿತಿಯಲ್ಲಿ dentalದು higher fee seats ಕೊಡಬೇಕು ಇವತ್ತು ಅವರು. 1 ಲಕ್ಷದ 65 ಸಾವಿರ ರೂಪಾಯಿಗಳನ್ನು ಇವರು ನಾವು ರಾಜಿ ಮಾಡಿಕೊಂಡಿದ್ದೇವೆ ಎಂದು 2 ಲಕ್ಷದ 30 ಸಾವಿರ ರೂಪಾಯಿಗಳನ್ನು ಕೊಡಿಸುತ್ತಿದ್ದಾರೆ. ಕೊಡಿಸುವ ಬದಲಾಗಿ ಇವರು 2 ಲಕ್ಷದ 90 ಸಾವಿರ ರೂಪಾಯಿಗಳನ್ನು ಕೊಡಿಸುತ್ತಿದ್ದಾರೆ. ಯಾವ higher fee seat ಗೆ Rs. 1,65,000/- ಕೊಡುತ್ತಿದ್ದರೋ ಹುಡುಗರು, this Hon'ble Government, ಬಡವರಿಗೆ ಸಹಾಯ ಮಾಡುವುದಕ್ಕೆ ಹಳ್ಳಿ ಹುಡುಗರನ್ನು ಉಳಿಸಲಿಕ್ಕೆ ಏನು ಎಲ್ಲಾ ಸೀಟ್ ಸರ್ಕಾರಕ್ಕೆ ತೆಗೆದುಕೊಂಡಿರುವುದಕ್ಕೆ the amount payable is Rs. 2,90,000/-. Engineering, ನಿಮಗೆ concessional seats 11,986. Fee amount Rs. 15,000/-. Higher fee seats 13,047, fee amount Rs. 50,000/- last yearದ್ದು. ಈ ವರ್ಷ concessional fee seats 20,000/-. Fee amount Rs. 15,000/-. Higher fee seats ಇದ್ದದ್ದು 5,000. Fee amount Rs. 85,000/-. 50 ಸಾವಿರ ರೂಪಾಯಿಗಳಿಗೆ engineering seat higher feesಗೆ ತೆಗೆದುಕೊಳ್ಳುವ ಕಡೆ 85 thousand. ಇದಕ್ಕಲ್ಲದೆ ನೀವು ಏನು ಮಾಡಿದ್ದೀರಿ? 5% of the seats against the decision of the Supreme Court, management criteriaಗೆ ಬಿಟ್ಟಿದ್ದೀರಿ. Again 15% of the seats NRI, NRI ಬಗ್ಗೆ Supreme Court of India ಏನು ಹೇಳುತ್ತದೆ ಸಾರ್? You have no discretion. NRIನಲ್ಲಿ ನೀವು ಬಾಯಿ ಹಾಕುವ ಪ್ರಶ್ನೆ ಇರಲೇ ಇಲ್ಲ. NRI seats: They also wish to which the money they would be spending elsewhere on education of their children should rather reach their own motherland, a limited reservation of such seats not exceeding 15% in our opinion may be available to NRIs depending on the discretion of the management subject to two conditions. First, such seats should be utilized bonafide by NRI only and for their

children or wards. Secondly, within this quota, merit should not be given a complete to bye 'MERIT SHOULD NOT BE GIVEN A COMPLETE GO BYE' and he has to be a bonafide NRI. ನೀವು ಹಾಕಿದ ಕಂಡೀಷನ್ಸ್ ಅಲ್ಲ. Bonafide NRI ಎಂದು ಹಾಕಿ ಬಿಟ್ಟೆವು, management ನವರು ಓಡಿ ಬಂದು ಬಿಟ್ಟರು ಎಂದು ನೀವು ಹೇಳಲು ಆಗುವುದಿಲ್ಲ. ನಿಮಗೆ ಅಧಿಕಾರ ಕೊಟ್ಟವರು ಯಾರು ಎಂದು ಹೇಳಬೇಕಲ್ಲವೇ? See, when you are giving seats under the decision of the Supreme Court. NRI quota ವನ್ನು violate ಮಾಡಲಿಕ್ಕೆ ನಿಮಗೆ ಯಾರು ಅಧಿಕಾರವನ್ನು ಕೊಟ್ಟವರು, ನಿಮಗೆ ಮ್ಯಾನೇಜ್‌ಮೆಂಟಿನವರಿಗೆ 5% ಬಿಡಲಿಕ್ಕೆ ಯಾರು ಅಧಿಕಾರ ಕೊಟ್ಟರು? ನೀವು ಇದನ್ನೆಲ್ಲಾ ಮಾಡಲಿಕ್ಕೆ ಸಂವಿಧಾನದಲ್ಲಿ ನಿಮಗೆ ಅಧಿಕಾರ ಎಲ್ಲಿದೆ ಎಂದು ನಮಗೆ ಗೊತ್ತಾಗಬೇಕಲ್ಲವೇ? You have no authority. You are trespassing the Constitutional provisions and you are trespassing the decision of the Supreme Court in this case. The amount of money in whatever form collected from such NRI should be utilized for the benefit of students such as, from economically weaker section of the society, whom or well defined criteria prevent mis utilisation of such quota or any malpractice referable to NRI quota seats, suitable legislation or regulation is to be framed. NRI quota ವನ್ನು mis-utilisation ಮಾಡದಂತೆ ನೋಡಿಕೊಳ್ಳಿ, ಆ ದುಡ್ಡನ್ನು ಬಡವರ ಮಕ್ಕಳಿಗೆ, economically weaker section ಮಕ್ಕಳಿಗೆ ಆ ಸಂಸ್ಥೆಯವರು ಬಳಸುವಂತೆ ನೋಡಿಕೊಳ್ಳಿ, ಅವನು ಯಾರೋ ಬೇರೆ ರಾಷ್ಟ್ರದವನು ಬೇರೆ ಎಲ್ಲೋ ಓದಿಕೊಳ್ಳುವುದರ ಬದಲು ದುಡ್ಡು ಕೊಟ್ಟರೆ ಕೊಡಲಿ ಎಂದು ಸುಪ್ರೀಂ ಕೋರ್ಟ್‌ನವರು ಒಂದು ಸಣ್ಣ ಅವಕಾಶವನ್ನು ಮಾಡಿಕೊಟ್ಟರೆ, ಇವತ್ತು NRI & others ಎಂದು ನೀವು ಮಾಡಿರುವುದು ಸರಿಯಲ್ಲ. I challenge, ಎಷ್ಟು ಜನ NRI ನವರು ಬರುತ್ತಾರೆ ಈ ವರ್ಷ ಈ quota ದಲ್ಲಿ ಓದುವುದಕ್ಕೆ ಎಂದು ಸನ್ಮಾನ್ಯ Ministers ನವರು ಹೇಳಬೇಕು. ಮಾನ್ಯ ಅಧ್ಯಕ್ಷರೆ, ಈ ಪೂರ ಕಸರತ್ತು ನಡೆದಿರುವುದು NRI admissions ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಆಗುವುದಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕಾಗಿ. 15% seat ಏನಿದೆಯೋ, ಯಾವ NRI ಸಹ ಕರ್ನಾಟಕಕ್ಕೆ ಇವತ್ತು ಬರುವ ಸ್ಥಿತಿಯಲ್ಲಿ ಇಲ್ಲ ಎಂದು ಗೊತ್ತಾಗಿ, ಇವರು ಕರೆದ ತಕ್ಷಣ ಮ್ಯಾನೇಜ್‌ಮೆಂಟಿಯವರು ಬಂದು ರಾಜಿ ಆಗಿರುವುದು. ಆ 15% seats ಸಾಕಾಗಿತ್ತು to safeguard their interest. ತಾವು ಯಥೇಚ್ಛವಾಗಿ ಕೊಟ್ಟು ಬಿಟ್ಟಿದ್ದೀರಿ. Is it the BJP's decision? ಇಲ್ಲಿ ಕುಳಿತು ಹೋರಾಟ ಮಾಡಿ, ಹಳ್ಳಿಹಳ್ಳಿಗಳಲ್ಲಿ ABVP ಹುಡುಗರಿಗೆ ಎತ್ತಿಕಟ್ಟಿ,

ರೋಡ್ ರೋಡ್‌ನಲ್ಲಿ ಗಲಾಟೆ ಮಾಡಿ, ಇಡೀ ಸರ್ಕಾರದ ವಿರುದ್ಧ ಘೋಷಣೆ ಕೂಗಿ, effigy burn ಮಾಡಿದಂತಹ ಒಂದು ಪಕ್ಷ, ಆ ಪಕ್ಷದ ಇಬ್ಬರು ತಾವು ಸಚಿವರು, ಅನುಭವಿಗಳು, ಇಂತಹ ಒಂದು ಬಿಲ್ ಅನ್ನು ಶಾಸನ ಸಭೆ ಮುಂದಿಡುವುದಕ್ಕಿಂತ ನಮಗೆ ಸರ್ಕಾರ ಬೇಡ ಎಂದು ಹೇಳಲಿಕ್ಕೆ ನಿಮಗೇನಾಗಿತ್ತು? For one year sake, you are spoiling the entire future. ಇವರನ್ನು ಯಾರೂ ಕೂಡ ಕ್ಷಮಿಸುವುದಿಲ್ಲ, ಯಾರೂ ಕ್ಷಮಿಸುವುದಿಲ್ಲ. ಇವತ್ತಿನವರೆಗೆ ABVP ಯಂತಹ ಒಂದು ಸಂಘಟನೆ ನಿಮ್ಮನ್ನು ನಂಬಿಕೊಂಡು ಕಾಲ ಮೇಲೆ ನಿಂತಿತ್ತು. ಇವತ್ತು ಅವರ ಕಾಲ ಮೇಲೆ ಚಪ್ಪಡಿ ಎತ್ತು ಹಾಕಿದ್ದೀರಿ ನೀವು. ಯಾವ ಸರ್ಕಾರ ಮ್ಯಾನೇಜ್‌ಮೆಂಟ್ ಪರವಾಗಿದೆ ಎಂದು ಇಲ್ಲಿ ನಿಂತುಕೊಂಡು ಭಾಷಣಗಳನ್ನು ಮಾಡಿದ್ದಿರೋ, ಯಾವ ಸರ್ಕಾರದಲ್ಲಿ ಮ್ಯಾನೇಜ್‌ಮೆಂಟ್ ಪ್ರತಿನಿಧಿಗಳು ಇದ್ದಾರೆಂದು ಭಾಷಣಗಳನ್ನು ಮಾಡಿದ್ದಿರೋ, ಇಡೀ ಸರ್ಕಾರದಲ್ಲೆಲ್ಲಾ ಕಾಲೇಜ್ ನಡೆಸುವವರು ಇದ್ದಾರೆ ಎಂದು ಭಾಷಣ ಮಾಡಿ ಇವತ್ತು ನೀವೇನು ಮಾಡಿದ್ದೀರಿ ನೋಡಿ. Without calling any Opposition Party Leaders, without consulting anybody on earty, ನೀವು ಕುಳಿತುಕೊಂಡು ಇಂತಹ ಒಂದು ದೊಡ್ಡ ದಂಧೆ ಮಾಡುತ್ತೀರಿ, ನೀವು urgent ಆಗಿ ಬಂದು bill pass ಮಾಡಿಕೊಡಿ ಎಂದು ಹೇಳುತ್ತೀರಿ. Statement ready ಇದೆ. You are not kind enough to give what was the prevailing seats last year? ನೀವು ಕೊಡುವುದಿಲ್ಲವಲ್ಲಾ ಅಸೆಂಬ್ಲಿಗೆ, ಕೊಡುವುದೇ ಇಲ್ಲ ಇದನ್ನು. ಬೇಕೆಂದೇ ಕೊಡುವುದಿಲ್ಲ. ಈಗ ಗೊತ್ತಿಲ್ಲವೇ? 1 ಲಕ್ಷದ 65 ಸಾವಿರ ರೂಪಾಯಿಗಳು ಎಂದಿರುವುದನ್ನು 2 ಲಕ್ಷದ 90 ಸಾವಿರ ರೂಪಾಯಿಗಳೆಂದು ಮಾಡುತ್ತೀರಿ. ಸೀಟ್ಸ್ ವ್ಯತ್ಯಾಸ ಆಗಲೇ ಇಲ್ಲ. ಸೀಟ್ಸ್ ವ್ಯತ್ಯಾಸ ಆಗಿದ್ದರೆ ಏನಾಗಿದೆ? Comed-K ನಲ್ಲಿ ಆಗುವ admissions CET ನಲ್ಲಿ ಆಗುತ್ತದೆ, ಅಷ್ಟೇ. But ಇವತ್ತು ಮಕ್ಕಳು ಎಷ್ಟು ದುಡ್ಡು ಕೊಡಬೇಕಾಗಿದೆ ಎನ್ನುವುದನ್ನು ಯೋಚನೆ ಮಾಡಿ. ಯಾರ ಹಿತಾಸಕ್ತಿ ಕಾಪಾಡಲಿಕ್ಕೆ ನೀವು ಹೊರಟಿದ್ದೀರಿ? ಇದರಿಂದ ನಿಮಗೇನು ಪ್ರಯೋಜನ? ಕರ್ನಾಟಕದ ಮಕ್ಕಳನ್ನು ಏಕೆ ಹೀಗೆ ಕೊಲ್ಲುತ್ತೀರಿ? ನಾವು ಇಲ್ಲಿ ಬೇಡಿದ್ದೇವೆ, PUC ಮತ್ತು CET marks aggregate ತೆಗೆದುಕೊಳ್ಳಿ ಎಂದು. ಅದನ್ನು ಮಾಡಲೇ ಇಲ್ಲ. ನಾವು ಸರ್ವ ಪಕ್ಷಗಳ ಸಭೆಯಲ್ಲಿ ಕುಳಿತುಕೊಂಡು ಕೇಳಿದ್ದೇವೆ. ತಮಿಳುನಾಡು Government, 200 marks ಅನ್ನು PUC ಯಿಂದ ತೆಗೆದುಕೊಳ್ಳುತ್ತಿದೆ, 100 marks ಅನ್ನು CET ಯಿಂದ ತೆಗೆದುಕೊಳ್ಳುತ್ತಿದೆ, 200ರಲ್ಲಿ 100 for Biology, 50 each to Chemistry and Physics. 100ರಲ್ಲಿ 50 Biology, 25 each to Chemistry and Physics ಇದೆ, ತಾವು ತೆಗೆದು ನೋಡಿ. This is again after the decision of the Supreme Court of India. Supreme Court of India decision ಆಗಿರುವುದನ್ನು ತೆಗೆದುಕೊಂಡು ಹೋಗಿ High Court ಮುಂದಿಡಿ, ನಮ್ಮ commitment ಅನ್ನು clear ಮಾಡಿಕೊಳ್ಳಿ, MCI ನಿಮಗೆ ಮಧ್ಯೆ ಬರಲಿಕ್ಕೆ ಸಾಧ್ಯವೇ ಇಲ್ಲ,

ಒಂದು ಸ್ಟೇಟ್‌ನಲ್ಲಿ ಆ ರೀತಿ admissions ಗೆ ಅವಕಾಶ ಕೊಟ್ಟು ಇನ್ನೊಂದು ಸ್ಟೇಟ್‌ನಲ್ಲಿ ಕೊಡಬೇಡಿ ಎಂದರೆ, ಇವತ್ತಿನವರೆಗೆ ನಮ್ಮ ಹಳ್ಳಿ ಮಕ್ಕಳಿಗೆ ಒಂದು ಸೀಟು ಸಿಗುವಂತಹ ಸ್ಥಿತಿಯನ್ನು ನೀವು ನಿರ್ಮಾಣ ಮಾಡಲಿಲ್ಲ. ಇಲ್ಲಿಂದ ಮುಂದಕ್ಕೆ ಯಾರೂ PUC ಯಲ್ಲಿ Biology ಓದುವ ಸ್ಥಿತಿಯಲ್ಲೇ ಇರುವುದಿಲ್ಲ. ಏಕೆ ಓದಬೇಕು? ಒಂದು ನಂಬರ್ ಕೂಡ ನೀವು PUC ಯಿಂದ aggregate ಆ ಮಕ್ಕಳದ್ದು ತೆಗೆದುಕೊಳ್ಳುವುದಿಲ್ಲ ಎನ್ನುವುದಾದರೆ, ಏಕೆ ಓದಬೇಕು? ಏಕೆ ಓದಬೇಕೋ ನಮಗೆ ಗೊತ್ತಿಲ್ಲ. ಪಕ್ಕದ ತಮಿಳುನಾಡು ಮಾಡುತ್ತಿದೆ ಎಂದು ನಾವು ಮೂರು ಸಲ ಕುಳಿತುಕೊಂಡು ಸನ್ಮಾನ್ಯ ಮಂತ್ರಿಗಳಿಗೆ convince ಮಾಡಿದರೂ, ಅದನ್ನು consider ಮಾಡಲಿಕ್ಕೆ ತಾವು ಒಪ್ಪಲೇ ಇಲ್ಲ. ಏಕೆ? ತಾವು Graduate Constituency, Teacher's Constituency ಯಿಂದ ಬಂದಿರುವವರು. ನಿಮಗೇನು ಗೊತ್ತು ನಮ್ಮ ಕಷ್ಟ? ರೈತರ ಮಧ್ಯದಿಂದ ಬಂದಿರುವಂತಹ ನಮ್ಮ ಕಷ್ಟ ನಿಮಗೇನು ಗೊತ್ತು? ನಗರದವರನ್ನು ಚೆನ್ನಾಗಿ ಇಟ್ಟುಕೊಂಡು ನೀವು ಗೆಲ್ಲುತ್ತೀರಿ. ನಾವು, ನಾವೂ ಹಾಗೆಯೇ ಮಾಡಲಿಕ್ಕಾಗುತ್ತದೆಯೇ? ಹಳ್ಳಿಯಲ್ಲಿರುವ ಮಕ್ಕಳನ್ನು ನಾವು ನೋಡಬಾರದೇ? ಸಾರ್, ಇದೊಂದು ದೊಡ್ಡ ಪಿತೂರಿ. ಇದು ಮ್ಯಾನೇಜ್‌ಮೆಂಟ್ ಜೊತೆಗೆ ಶಾಮೀಲಾಗಿರುವ ಪಿತೂರಿ. ಇದರಲ್ಲೇನೂ ಎರಡನೇ ಮಾತಿಲ್ಲ. ದಾಕ್ಷಿಣ್ಯ ಯಾರಿಗೂ ಬೇಕಾಗಿಲ್ಲ. ಈ ರಾಜ್ಯಕ್ಕೆ ಇವತ್ತು ನೀವು ಏನನ್ನೂ ಮಾಡಿಲ್ಲ. ದೊಡ್ಡ ಚಪ್ಪಡಿ ಹಾಕುತ್ತಿದ್ದೀರಿ. ಅವರ್‍ಯಾರೋ ಸುಪ್ರೀಂ ಕೋರ್ಟ್‌ಗೆ ಹೋಗಿ ಅರ್ಜಿ ಹಾಕಿಕೊಂಡು, fees ಜಾಸ್ತಿ ಮಾಡಿ ಎಂದು ಕೇಳಿ, ಕೇಸ್ ಗೆಲ್ಲಲಿಕ್ಕೆ ಆಗದೆ ಆ ಕೇಸ್ ಹಾಗೇ ನಿಂತಿದೆ. ನೀವು ಬಿಲ್ ತೆಗೆದುಕೊಂಡು ಬಂದು ಇವತ್ತು ಅವರಿಗೆ ದುಡ್ಡು ಮಾಡಿಕೊಡುತ್ತಿದ್ದೀರಿ, ಎಷ್ಟು ಮಾಡಿಕೊಡುತ್ತಿದ್ದೀರಿ? ಒಂದೂ ಕಾಲು ಲಕ್ಷ ರೂ ಒಂದೊಂದು ಸೀಟಿಗೆ. ಒಂದು ಲಕ್ಷದ ಮೂವತ್ತು ಸಾವಿರ ರೂಪಾಯಿಗಳನ್ನು ನೀವು ಡೆಂಟಲ್ ಸೀಟ್‌ನಲ್ಲಿ ಮಾಡಿಕೊಡುತ್ತಿದ್ದೀರಿ. ಪ್ರತಿ ಇಂಜಿನಿಯರಿಂಗ್ ಸೀಟಿಗೂ 35 ಸಾವಿರ against the higher fee of last year, ನೀವು ಇದನ್ನು ಮಾಡಿಕೊಡುತ್ತಿದ್ದೀರಿ. ಇದನ್ನು ಏತಕ್ಕೋಸ್ಕರ ಮಾಡುತ್ತಿದ್ದೀರಿ? ಬಹಳ ನೀವು ಹೇಳಿಕೊಳ್ಳುತ್ತಿದ್ದೀರಿ, ಸೀಟುಗಳು ಹೊರಟು ಹೋಗಿ ಬಿಡುತ್ತಿದ್ದವು, ಸಮುದ್ರದಿಂದ ಆಚೆಯಲ್ಲಿತ್ತು. ನಾವಿಬ್ಬರೂ ಹೋಗಿ ಅದನ್ನು ಹಿಡಿದುಕೊಂಡು ಬಿಟ್ಟು ಇಲ್ಲಿ ಕುಳ್ಳಿರಿಸಿಕೊಂಡಿದ್ದೇವೆ ಎನ್ನುವಂತೆ ಹೇಳುತ್ತಿದ್ದೀರಿ. I am very sorry to say seats were either given under Comed-K or CET, nothing else. Comed-K ನಲ್ಲಿ ಇದ್ದಂತಹ ಸೀಟನ್ನು ನೀವು CET ಗೆ ತೆಗೆದುಕೊಂಡು ಬಂದು ದೊಡ್ಡ ಉದ್ಧಾರ ಇಲ್ಲಿ ಮಾಡಿದ್ದೇವೆ ಎಂದು ಹೇಳಲೇಬೇಡಿ. CET ನಲ್ಲಿ ಬೇರೆ ರಾಜ್ಯದ ಮಕ್ಕಳು ಬರೆಯುವುದಕ್ಕಾಗುವುದಿಲ್ಲ ಎಂದು ನೀವೆಲ್ಲೂ ಪ್ರಾವಿಷನ್ ಮಾಡುವುದಕ್ಕಾಗುವುದಿಲ್ಲ. ನೀವು ಮಾಡಿಲ್ಲ. ಕಾಮೆಡ್-ಕೆ ನಲ್ಲೂ ಕರ್ನಾಟಕದ ಹುಡುಗರು ಬರೆದಿದ್ದಾರೆ. ನಾಳೆ, ಕರ್ನಾಟಕದ ಹುಡುಗರೇ ಕೋರ್ಟಿಗೆ ಹೋಗುತ್ತಾರೆ. ನಾನು ಕಾಮೆಡ್-ಕೆ ನಲ್ಲಿ eligible ಇದ್ದೇನೆ, ಆ management notify ಮಾಡಿರುವಂತಹ

ಸೀಟನ್ನು ಕಾಮೆಡ್-ಕೆ ಯಿಂದ fill up ಮಾಡಿಲ್ಲ, I was told to enter a single entrance examination, ಹಾಗಾಗಿ ನಾನು CET ಬರೆಯಲಿಲ್ಲ ಎಂದು ಆ ಹುಡುಗ ಪ್ರಶ್ನೆ ಮಾಡಿದರೆ, ಸುಪ್ರೀಂ ಕೋರ್ಟ್ ಮುಂದೆ ತಾವಲ್ಲಾ ಉತ್ತರ ಹೇಳಬೇಕಾಗಿರುವುದು, ಮ್ಯಾನೇಜ್‌ಮೆಂಟಿನವರು. Second thing is, 5% management discretion ಇಡಲಿಕ್ಕೆ ನಿಮಗೆ ಯಾರೂ ಅಧಿಕಾರ ಕೊಟ್ಟಿಲ್ಲ. No, it is 100% against the Supreme Court decision. How can you do this? 5% management ನವರಿಗೆ ಕೊಡುತ್ತೀರಿ, 15% NRI ಎಂದು ಇರುವುದನ್ನು change ಮಾಡಿ again management ಗೆ ಬಿಡುತ್ತೀರಿ. ಅಲ್ಲೇನೂ ಲಿಮಿಟ್ ಹಾಕುವುದಿಲ್ಲ. merit fix ಮಾಡುವುದಿಲ್ಲ. basic marks ಅನ್ನು fix ಮಾಡುವುದಿಲ್ಲ, PUC marks consider ಮಾಡಬೇಕೋ? CET marks consider ಮಾಡಬೇಕೋ? Comed-K ಮಾಡಬೇಕೋ ಎಂದು ಹೇಳುವುದಿಲ್ಲ. You have simply thrown away all the 15% of seats in favour of management plus 5% ಅವರ quota management ಗೆ ಎಂದು ಕೊಟ್ಟು, ಯಾವ ಪುರುಷಾರ್ಥಕ್ಕೆ ನೀವು ಈ ಬಿಲ್ ಅನ್ನು ತಂದಿಟ್ಟಿದ್ದೀರಿ? ಯಾರಿಗೆ ಒಳ್ಳೆಯದು ಮಾಡಲಿಕ್ಕೆ ನೀವು ಈ ಸರ್ಕಾರವನ್ನು ನಡೆಸುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. This is too much. This is really too much from BJP side. ಇದನ್ನು ನಾನು ನಿಮ್ಮಿಂದ expect ಮಾಡಿರಲಿಲ್ಲ. Sorry, ಇಲ್ಲಿ ಕುಳಿತುಕೊಂಡು ಆಡಿರುವಂತಹ ಮಾತುಗಳನ್ನು ಕಡತ ತರಿಸಿ ತಾವು ಓದಬೇಕು. ಅದರಲ್ಲೂ ಮಾನ್ಯ ವಿಶ್ವೇಶ್ವರ ಹೆಗಡೆಯವರು, ಭಟ್ಟರು, I am very sorry to say. ಎಷ್ಟು ಖುಷಿಯಾಗಿತ್ತು, ಅವತ್ತು ಅವರಿಗೆ ಇದ್ದಂತಹ ಭಾವನೆ, ಮಕ್ಕಳ ಬಗ್ಗೆ ಇದ್ದಂತಹ ಪ್ರೀತಿ, ABVP ನಡೆಸುತ್ತಿದ್ದಂತಹ ಹೋರಾಟಗಳ ಬಗ್ಗೆ ಅವರು ಇಲ್ಲಿ ನಿಂತುಕೊಂಡು ಮಾಡುತ್ತಿದ್ದಂತಹ ಸಮರ್ಥನೆ, ಎಲ್ಲಿ ಹೋಯಿತು ಇವತ್ತು? ಅದಕ್ಕೆ ನಾವು ನಿನ್ನೆ, ಮೊನ್ನೆ ಕೇಳಿದ್ದು ಇದನ್ನು ದಯಮಾಡಿ BPL Legislature Party ಯಲ್ಲಿಟ್ಟು ಚರ್ಚೆ ಮಾಡಿ ಬನ್ನಿ ಎಂದು ಹೇಳಿದ್ದು, ಇದೇ ಕಾರಣಕ್ಕೋಸ್ಕರ. ಅವರೇನು ಇಲ್ಲಿ ನಿಂತುಕೊಂಡು ಮಾತನಾಡಿದ್ದಾರೋ, ಇವತ್ತು ಅವರು ಯಾರಾದರೂ ಒಬ್ಬರು ನಿಂತುಕೊಂಡು ಉತ್ತರ ಹೇಳಬೇಕು. Do they still deserve to sit in that Party? Do they still wants to continue in that Party? Do they still feel that Party is secular and for socialistic activities? ಇದು ಯಾರ ಪರವಾಗಿ ಇರತಕ್ಕಂಥ ಪಾರ್ಟಿ? ಯಾರ ಪರವಾದಂತಹ ತೀರ್ಮಾನ ಎಂದು ಅವರು ಯೋಚನೆ ಮಾಡಿ ಹೇಳಬೇಕು. ಅದಕ್ಕಾಗಿಯೇ ಇಲ್ಲಿ ಬಿಲ್‌ಗಳನ್ನು ಚರ್ಚೆ ಆಗಬೇಕೆಂದು ನಾವು ಕೇಳುವುದು. I am very sorry, ನನಗೆ ನಿಜವಾಗಿಯೂ ಭಾರಿ ನೋವಾಗುತ್ತಿದೆ, ಇಂತಹ ಒಂದು ಕೆಟ್ಟ ಬಿಲ್ ಅನ್ನು ತೆಗೆದುಕೊಂಡು ಬಂದು ಈ ಸದನದ ಸಮಯವನ್ನು ಹಾಳು ಮಾಡಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೇ, ನಾನೇನೂ ಹೆಚ್ಚಿಗೆ ಮಾತನಾಡುವುದಿಲ್ಲ ಏಕೆಂದರೆ, ನಮ್ಮ ನಾಯಕರು ಮಾತನಾಡಿದ್ದಾರೆ, ಮೂರು ಪ್ರಶ್ನೆಗಳಿಗೆ ನನಗೆ ಉತ್ತರ ಬೇಕು, ಎಬಿವಿಪಿಯವರು, ಧರ್ಮಸಿಂಗ್ ಸರ್ಕಾರವಿದ್ದು ನಾವು ಮಸೂದೆ ತಂದಾಗ, ಬಹಳಷ್ಟು ಜನ ತಾವೇ ಬಿಜೆಪಿ ಲೀಡರ್ಸ್ ಅವರನ್ನು ಲೀಡ್ ಮಾಡಿ ಅಲ್ಲಿ ನಾವು ಮಾಡಿದ ಫೀ ಸ್ಟ್ರಕ್ಚರ್ ಸರಿಯಿಲ್ಲ. ಅಲ್ಲಿ ನಾವು ಮಾಡಿದ ರಿಸರ್ವೇಶನ್ ಸರಿಯಿಲ್ಲ ಎಂದು ಇಡೀ ರಾಜ್ಯ ತುಂಬಾ ಹೋರಾಟ ಮಾಡಿದಿರಿ, ತಾವು ಅದಕ್ಕೆ ಉತ್ತೇಜನವನ್ನು ಕೊಟ್ಟಿರಿ. ಆ ಹುಡುಗರದ್ದು ತಪ್ಪಾಗುವುದಿಲ್ಲ. ಪಾಪ, ಏಕೆಂದರೆ, ಇವತ್ತು ಎಲ್ಲರೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮೆರಿಟ್ ಸ್ಟೂಡೆಂಡ್ಸ್ ದೃಷ್ಟಿಯಿಂದ ಗ್ರಾಮಾಂತರ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಮಾತನಾಡುತ್ತಿದ್ದಾರೆ. ಮೊನ್ನೆ ತಾವು ಮಸೂದೆ ಏಪ್ರಿಲ್‌ನಲ್ಲಿ ಪಾಸ್ ಮಾಡಿಕೊಂಡಿರಿ, ಅದನ್ನು ಎಬಿವಿಪಿ ಹುಡುಗರು ಸ್ವಾಗತ ಮಾಡಿದರು. ಪನಿಶ್‌ಮೆಂಟ್ ಮಾಡುತ್ತೀರಿ. ಮತ್ತೊಂದು ಮಾಡುತ್ತೀರಿ, ಶಿಕ್ಷೆ ಕೊಡುತ್ತೀರಿ, ನಮ್ಮ ವಿರೋಧಪಕ್ಷದಿಂದ ನಾವು ಬಹಳ ಎಚ್ಚರಿಕೆಯನ್ನು ಕೊಟ್ಟೆವು. ಇದು ಸರಿಯಿಲ್ಲ. ಈ ಮಸೂದೆಯನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡಿ ಎಂದು ಕೇಳಿದೆವು. ತಾವು ಕೇಳಿದಿರಿ, ಪಾಸ್ ಮಾಡಿಕೊಂಡಿರಿ, ಇವತ್ತು ಪುನಃ ಮಸೂದೆಯನ್ನು ತಂದಿದ್ದೀರಿ. ಯಾವ ಜನ ನಿಮಗೆ ಬೆಂಬಲ ಕೊಟ್ಟರೋ ಆ ವಿದ್ಯಾರ್ಥಿಗಳಿಗೆ ಏನು ಉತ್ತರ ಕೊಡುತ್ತೀರೆಂಬುದು ನನಗೆ ಗೊತ್ತಾಗಬೇಕು. ಇದು ಮೊದಲನೆಯದು. ಎರಡನೆಯದಾಗಿ, ಒಂದು ಕಾನೂನು ತರಬೇಕಾದರೆ ಸ್ಕ್ರೂಟಿನಿ ಕಮಿಟಿ ಇರುತ್ತದೆ. ಈ ಮಸೂದೆ ಸ್ಕ್ರೂಟಿನಿ ಕಮಿಟಿಯಲ್ಲಿ ಪಾಸ್ ಆಗಿದೆ, ಕ್ಯಾಬಿನೆಟ್‌ಗೆ ಹೋಗಿಲ್ಲ. ತಾವು ಈ ಸದನದ ಮುಂದೆ ತೆಗೆದುಕೊಂಡು ಬಂದಿದ್ದಿರಿ. ನಮಗೆ ಮಸೂದೆ ಮಂಜೂರಾಗುವುದಕ್ಕಿಂತ ಮುಂಚೆ ಲೀಗಲ್ ಡಿಪಾರ್ಟ್‌ಮೆಂಟಿನ ಅಭಿಪ್ರಾಯ ಬೇಕು. whether this law will stand the test of law? This is very important. ಏಕೆಂದರೆ, ಏನು ಸುಪ್ರೀಂಕೋರ್ಟ್‌ನಲ್ಲಿ ಡಿಸೈಡ್ ಆಗಿದೆ, ಅದರ ವಿರುದ್ಧವಾಗಿ ಮಾಡುತ್ತಿದ್ದೀರಿ. ಮೊನ್ನೆ ಮಾಡಿದ ಮಸೂದೆಯ ವಿರುದ್ಧವಾಗಿ ಮಾಡುತ್ತಿದ್ದೀರಿ. If we pass this bill, whether it will sustain the test of law. ನನ್ನ ದೃಷ್ಟಿಯಲ್ಲಿ ಇಲ್ಲ. ಈ ಇಲ್ಲೀಗಲ್ ಕೆಲಸಕ್ಕೆ why /do you want to make us a party. ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತಿದ್ದೇನೆ. this Bill is unconstitutional and ilegal. It will not sustain the test of law. ಹಾಗಾಗಿ ತಾವು ನಮಗೆ ಸರಿಯಾದ ಉತ್ತರವನ್ನು ಕೊಡಬೇಕು. whether this Bill/Will sustain. ಮ್ಯಾನೇಜ್‌ಮೆಂಟ್‌ನವರು ಒಪ್ಪಿಕೊಂಡಿದ್ದೇವೆಂದು ತಾವು ಹೇಳಬಹುದು. ಯಾರು ಒಪ್ಪುತ್ತಾರೆ, ಏಕೆ ಕೋರ್ಟ್‌ಗೆ ಹೋಗುವುದಿಲ್ಲ. There are so many people who will go for public interest litigation. ನಿಮ್ಮ ಎಬಿವಿಪಿಯವರು ಹೋಗುತ್ತಾರೆ. ಕ್ಯಾಂಡಿಡೇಟ್ಸ್ ಹೋಗುತ್ತಾರೆ. Can you stop them? We cannot stop them. I may file/ a public interest litigation. ನೀವು ಮ್ಯಾನೇಜ್‌ಮೆಂಟ್

ಒಂದಾಗಿರಬಹುದು ಮ್ಯಾನೇಜ್‌ಮೆಂಟ್‌ಗೆ ಸಹಾಯ ಮಾಡುವುದಕ್ಕೆ ನೀವು ಮಾಡಿರಬಹುದು. ಆದರೆ ಎನ್‌ಆರ್‌ಐ ಕೋಟಾ ಬಗ್ಗೆ. ಮಾಧುಸ್ವಾಮಿಯವರು ಹೇಳಿದಂತೆ ಕ್ಲಿಯರ್ ಕಟ್ "ಅದರ್ಸ್" ಎಂದು ಹಾಕುವ ಅವಶ್ಯಕತೆ ಇರಲಿಲ್ಲ. ಎನ್‌ಆರ್‌ಐ ಎಂದು ಇಡಿ. ಬರುವ ಎನ್‌ಆರ್‌ಐನವರು ಬರುತ್ತಾರೆ. ಇಲ್ಲವೆಂದರೆ ನಿಮ್ಮ ಕಡೆಯ ಸೀಟನ್ನು ತುಂಬಿರಿ. ಇವತ್ತು ನಿಮಗೆ ಇದ್ದ 50 ಪರ್ಸೆಂಟ್ ಸೀಟುಗಳಲ್ಲಿ ಕಡಿಮೆ ಮಾಡಿಕೊಂಡು, ಅದನ್ನು ಅವರಿಗೆ ನೀವು ಸರಂಡರ್ ಮಾಡಿ. ಆ ಭಾಗದಲ್ಲೇನು ಕೊಡುತ್ತೀರಿ, ಅದಕ್ಕೂ ಹೆಚ್ಚಿನ ಫೀ ಮಾಡಿ ಕೊಡುವುದರಿಂದ ಏನು ಸಾಧನೆ ಮಾಡಲು ಹೊರಡುತ್ತಿದ್ದೀರಿ? ಈ ರೀತಿಯ ಅಪೇಕ್ಷೆ ನಿಮ್ಮಂತಹ ಮಂತ್ರಿಗಳಿಂದ, ನಿರೀಕ್ಷಿಸಿರಲಿಲ್ಲ. ಆಚಾರ್ಯರವಂತಹವರ ಬಗ್ಗೆ ನಮಗೆ ಗೌರವವಿದೆ. ತಾವು ಈ ಕಾಸ್ ಬಗ್ಗೆ ಫೈಟ್ ಮಾಡಿದ್ದೀರಿ, ಕೆಲವು ಸಾರಿ ಮಂತ್ರಿಯಾದ ಮೇಲೆ ಒತ್ತಡಕ್ಕೆ ಮಣಿದು ತರುತ್ತಿದ್ದೀರೆಂದು ನಾನು ಭಾವಿಸುತ್ತೇನೆ. ನಿಮ್ಮ ಕಾನ್ಸಿಶಿಯಸ್‌ಗೆ ಬೈಟ್ ಮಾಡಿ ತರುತ್ತಿದ್ದೀರೆಂದು ಭಾವಿಸುತ್ತೇನೆ. ಹಾಗಾಗಿ ಈ ಮಸೂದೆಯನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ವಾಪಸ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದರೆ ಜಂಟಿ ಸದನ ಸಮಿತಿಗೆ ರೆಫರ್ ಮಾಡಿ ಎಂದು ನಿಮ್ಮಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ಈ ಬಿಲ್‌ನಲ್ಲಿ ಸೀಟುಗಳು ಜಾಸ್ತಿಯಾಗುತ್ತಿವೆಂದು ಹೇಳಿದಿರಿ. ಉದಾಹರಣೆಗೆ ನಾನು ಮಾನ್ಯ ಶಂಕರಮೂರ್ತಿಯವರಿಗೆ ಕೇಳುತ್ತೇನೆ. ಈಗ ಶಿವಮೊಗ್ಗದಲ್ಲಿ ನ್ಯಾಷನಲ್ ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ ಇದೆ. ಎಲ್ಲಾ ಸೀಟ್‌ಗಳನ್ನು ಮ್ಯಾನೇಜ್‌ಮೆಂಟ್‌ನವರು ಇಟ್ಟುಕೊಂಡಿದ್ದಾರಾ? ಒಂದು ಸೀಟನ್ನೂ ಕೂಡ ಮ್ಯಾನೇಜ್‌ಮೆಂಟ್‌ನವರು ಇಟ್ಟುಕೊಂಡಿಲ್ಲ. ಎಂಟೈರ್ ಸೀಟುಗಳನ್ನು ಸಿಇಟಿಗೆ ಕೊಟ್ಟಿದ್ದಾರೆ. ಅಂದರೆ ನಿಮ್ಮ ಫೀ ಸ್ಟ್ರಕ್ಚರ್‌ನಲ್ಲಿ ಏನಿದೆ, ತಾವು ಹೇಳಿದಂತೆ ಏನು ಎಬಿಸಿಡಿ ಎಂದು ಕ್ಯಾಟಗರಿ ಮಾಡಿದ್ದೀರಿ, ಎ ಅನ್ನು ರ್‍ಯಾಶನಲೈಸ್ ಮಾಡಬೇಕು ಎಂದು ಇದೆ. that, you have to rationalise. One more point is, ಒಂದು ಹೆಜ್ಜೆ ಮುಂದೆ ಹೋಗಬೇಕೆಂದರೆ, ಮೈನಾರಿಟಿಸ್ ಇನ್‌ಸ್ಟಿಟ್ಯೂಷನ್‌ನಲ್ಲಿ ಏನು ತಾವು ಸೀಟ್‌ಗಳನ್ನು ಮೈನಾರಿಟಿಸ್‌ನಲ್ಲೇ ತುಂಬಿಕೊಳ್ಳ ಬೇಕೆಂದೇನು ಹೇಳುತ್ತೀರಿ, in case if minority fails to fill up the seats, ಅದನ್ನು ನೀವು ಜನರಲ್‌ಗೂ ಕೂಡ ಟರ್ನ್ ಮಾಡಿಕೊಳ್ಳಬಹುದೆಂದು ನೀವು ಅನುಮತಿಯನ್ನು ಕೊಟ್ಟಿದ್ದೀರಿ, ಅಂದರೆ, ಎನ್‌ಆರ್‌ಐನಲ್ಲಿ ಮಾಡುತ್ತೀರಾ, ಅದರ್ಸ್‌ನಲ್ಲಿ ಮಾಡುತ್ತೀರಾ ಅಥವಾ ಸಿಇಟಿಗೆ ನೀವು ಆ ಸೀಟ್‌ಗಳನ್ನು ತೆಗೆದುಕೊಂಡು ಬಿಟ್ಟು ನೀವು ಫಿಲ್ ಆಫ್ ಮಾಡುತ್ತೀರಾ. On which category you are going to fix it up? ಎಂಬುದರ ಬಗ್ಗೆ ತಾವು ವಿವರವನ್ನು ಕೊಡಬೇಕಾಗುತ್ತದೆ. ಇಲ್ಲವೆಂದರೆ, ಈಗ ಮುರಗೋಡ್ ಕಮಿಟಿಯವರು ಫೀ ಸ್ಟ್ರಕ್ಚರ್ ಅನ್ನು ಕೊಟ್ಟಿದ್ದಾರೆ. ಅದನ್ನು ಓವರ್ ರೂಲ್ ಮಾಡಿಕೊಂಡು ಕೆಲವು ಕಾಲೇಜಿಗೆ ಅರವತ್ತೆರಡು ಸಾವಿರದಿಂದ ಎರಡುವರೆ ಲಕ್ಷದವರೆವಿಗೂ ಇದೆ. ಈಗ ನೀವು ರ್‍ಯಾಶನಲೈಸ್ ಮಾಡಿ ಬಿಟ್ಟು. ಮೂವತ್ತೆರಡು ಸಾವಿರಕ್ಕೂ

ಬರುತ್ತದೆ, ಎಂಭತ್ತೈದು ಸಾವಿರಕ್ಕೂ ಬರುತ್ತದೆ. ಎರಡು ಲಕ್ಷದ ತೊಂಬತ್ತೈದು ಸಾವಿರಕ್ಕೂ ಬರುತ್ತದೆ ಎನ್ನುವುದಾದರೆ ಇಲ್ಲಿ ಯಾರಿಗೂ ಕೂಡ ಅನುಕೂಲವಾಗುವುದಿಲ್ಲ. ತಾವು ದಯಮಾಡಿ, ಎಲ್ಲಿ ಮೈನರಿಟಿ ಇನ್‌ಸ್ಟಿಟ್ಯೂಷನ್ಸ್ ಮೈನಾರಿಟಿಸ್ ಸೀಟ್‌ಗಳನ್ನೆ ತುಂಬಿಕೊಳ್ಳಬೇಕೆಂದು ಹೇಳಿದ್ದೀರಿ. ಅದನ್ನು ಯಾವ ರೀತಿಯಲ್ಲಿ ತುಂಬಿಸಿಕೊಳ್ಳುತ್ತೀರೆಂಬುದನ್ನು ಕ್ಲಾರಿಫಿಕೇಷನ್ ಕೊಡುವಾಗ ಹೇಳಬೇಕು. Under which category? Whether it is going to be on B, C or D ಎಂದು ತಾವು ಕ್ಲಾರಿಫಿಕೇಷನ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಈ ಬಿಲ್ ಅನ್ನು ನಿನ್ನೆ ದಿವಸ ಇಂಟ್ರಡ್ಯೂಸ್ ಮಾಡಿದಾಗ ಇದನ್ನು ನಾವು ವಿರೋಧ ಮಾಡುತ್ತಿದ್ದೇವೆ. ಬಿಲ್ಲನ್ನೇ ಇಂಟ್ರಡ್ಯೂಸ್ ಮಾಡಬಾರದು. ಇದು ಮ್ಯಾನೇಜ್‌ಮೆಂಟ್ ಪರವಾಗಿದೆ. ವಿದ್ಯಾರ್ಥಿಗಳಿಗೆ ವಿರುದ್ಧವಾಗಿದೆ ಎನ್ನುವ ವಿಚಾರವನ್ನು ಹೇಳಿದೆವು. ಆದರೂ ನೀವು ಅದನ್ನು ಮಂಡನೆ ಮಾಡಿದ್ದೀರಿ. ಈ ವರ್ಷದಲ್ಲಿಯೇ ಇದು ಎರಡನೇ ಬಿಲ್. ಆ ಬಿಲ್‌ನ ಗತಿಯೇನೆಂದು ಸದನಕ್ಕೆ ಗೊತ್ತಿಲ್ಲ. ಮೊನ್ನೆ ಮೂರು ತಿಂಗಳ ಹಿಂದೆ ನಾವು ಪಾಸ್ ಮಾಡಿದೆವಲ್ಲಾ ಆ ಬಿಲ್‌ನ ಪರಿಸ್ಥಿತಿಯೇನು? ಅದು ಸತ್ತಿದೆಯೋ ಬದುಕಿದೆಯೋ ಅದನ್ನೆನಾದರೂ ಇಂಪ್ಲಿಮೆಂಟ್ ಮಾಡುತ್ತೀರೋ ಇಲ್ಲವೊ, ಈಗ ಇದೊಂದು ಬಿಲ್ ಮಡುತ್ತಿದ್ದೀರಿ. ಯಾರಾದರೂ ಮ್ಯಾನೇಜ್‌ಮೆಂಟ್‌ನವರು, ಯಾರಾದರು xyz ಆ ಬಿಲ್ ತೆಗೆದುಕೊಂಡು ಹೋಗಿ "ಇದರ ಪ್ರಕಾರ ಅಡ್ಮಿಷನ್ ಮಾಡಿಕೊಳ್ಳಿ" ಈ ಬಿಲ್ ಅನ್ನು ತೆಗೆದುಕೊಂಡು ಹೋಗಿ "ಇದರ ಪ್ರಕಾರ ಅಡ್ಮಿಷನ್ ಮಾಡಿಕೊಳ್ಳಿ" ಎಂದರೆ, ನೀವು ಏನು ಉತ್ತರವನ್ನು ಹೇಳುತ್ತೀರಿ? You must clarify what happened to that previous Bill which this House has passed and why you are bringing the new Bill? What is the intention? ಇದನ್ನು ನೀವು ಕ್ಲಾರಿಫೈ ಮಾಡಲೇ ಇಲ್ಲ. ಹಿಂದಿನ ಬಿಲ್ ಏನಾಯಿತು. ಆ ಬಿಲ್ ಇದ್ದು ಇದನ್ನು ಏಕೆ ತರುತ್ತಿದ್ದೀರೆಂದು ಕ್ಲಾರಿಫೈ ಮಾಡಲಿಲ್ಲ. ಇಂಟೆಂಷನ್ ಕ್ಲಾರಿಫೈ ಮಾಡಲಿಲ್ಲ. ಅದರ ಇಂಟೆಂಷನ್ ಏನು ಹೇಳಿದ್ದೀರೆಂದರೆ, ಮ್ಯಾನೇಜ್‌ಮೆಂಟ್‌ಗೂ ನಮಗೂ ಆಗಿರುವ ಒಪ್ಪಂದದ ಪ್ರಕಾರ ಎಂದು ಹೇಳಿದ್ದೀರಿ. who authorized you to make an agreement? ಅವರ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟರು? Has Supreme Court directed it? Has Supreme Court directed to have a /dialogue with the private management ಈ ಹಂತದಲ್ಲಿ ಸುಪ್ರೀಂ ಕೋರ್ಟ್‌ನವರು ಮ್ಯಾನೇಜ್‌ಮೆಂಟ್ ಜೊತೆ ಮಾತನಾಡಿ ಎಂದು ಹೇಳಿದ್ದಾರಾ? ಯಾವ ಆಧಾರದ ಮೇಲೆ ನೀವು ಮಾತನಾಡಿದಿರಿ, ನೀವು ಅವರಿಬ್ಬರು ಇಲ್ಲಿ ಮಾತನಾಡಿಕೊಂಡಿದ್ದೀರಿ, ನಾನು ಕೋರ್ಟ್‌ಗೆ ಹೋಗುತ್ತೇನೆ. ನೀವಿಬ್ಬರೂ ಮಾತನಾಡಿಕೊಂಡಿರಬಹುದು. ನಾನು ಕೋರ್ಟ್‌ಗೆ ಹೋಗುತ್ತೇನೆ. ಆಗ ಯಾರು ನನ್ನನ್ನು ತಡೆಯುತ್ತೀರಿ. ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ತಡೆಯುತ್ತೀರಾ? ನನ್ನನ್ನು ನೀವು

ತಡೆಯುತ್ತೀರಾ? ನಾನು ಕೋರ್ಟ್‌ಗೆ ಹೋಗುತ್ತೇನೆ. whether Supreme Court agrees or dis-agrees, that is a different thing. ನಾನು ಹೋಗುತ್ತೇನೆ. ಅಲ್ಲಿ ನಾನು ಹೋದರೆ ನೀವು ಏನೆಂದು ಡಿಫೆಂಡ್ ಮಾಡುತ್ತೀರಿ? Can Supreme Court say that Management ಮತ್ತು ಸರ್ಕಾರ ಒಪ್ಪಿಕೊಂಡಿದೆ ಆದುದರಿಂದ ನೀವು ಕೋರ್ಟ್‌ಗೆ ಬರಲು ಸಾಧ್ಯವಿಲ್ಲವೆಂದು ನಾಳೆ ಸುಪ್ರೀಂಕೋರ್ಟ್‌ನವರು ಹೇಳುವುದಕ್ಕಾಗುತ್ತದೆಯೇ? ಹೇಳುವುದಕ್ಕೆ ಸಾಧ್ಯವಾಗುತ್ತದೆಯಾ? ಯಾರನ್ನು ಮೆಚ್ಚಿಸಲು ಯಾರನ್ನು ಕೇಳುವುದಕ್ಕೆ ಹೊರಟಿದ್ದೀರಿ? ಸುಪ್ರೀಂಕೋರ್ಟ್ ಮುಂದೆ ಈ ಬಿಲ್ಲು ನಿಲ್ಲುವುದಿಲ್ಲ ಎಂಬುದು ಒಂದನೇ ಅಂಶ. ಎರಡನೆಯ ಅಂಶ. ನೀವು ಆ ಹಿಂದಿನ ಬಿಲ್ ಅನ್ನು ಏನು ಮಾಡಿದ್ದೀರೆಂಬ ಸುದ್ದಿಯೇ ಇಲ್ಲದೇ, ಆ ಬಿಲ್‌ನಲ್ಲಿ ಏನು ಹೇಳಿದ್ದು ಸುಪ್ರೀಂಕೋರ್ಟ್ ಡೈರೆಕ್ಷನ್ ಪ್ರಕಾರ ನಾವು ಈ ಬಿಲ್ ಅನ್ನು ಪಾಸ್ ಮಾಡುವ ಅನಿವಾರ್ಯತೆ ಇದೆ ಎಂದು ಅವತ್ತು ಸದನಕ್ಕೆ ಹೇಳಿದಿರಿ, 93 ತಿದ್ದುಪಡಿಯ ಪ್ರಕಾರ ಈ ಬಿಲ್ ಅನ್ನು ಪಾಸ್ ಮಾಡುವ ಅನಿವಾರ್ಯತೆ ಇದೆ. ಅದಕ್ಕೋಸ್ಕರ ಈ ಬಿಲ್ ಅನ್ನು ನಾವು ಪಾಸ್ ಮಾಡುತ್ತಿದ್ದೇವೆಂದು ಹೇಳಿದಿರಿ. ಹೌದು ತಾನೆ? ಆದರೆ ಆ ಬಿಲ್ಲಿನಲ್ಲಿದ್ದಂತಹ ದೋಷಗಳೇನು? ನೀವು ಹೇಳುತ್ತಿರುವುದೇನು? ಅದರಲ್ಲಿ ನಮಗೆ ಸೀಟುಗಳು ಬರುತ್ತಿರಲಿಲ್ಲ. ಇದರಲ್ಲಿ ನಮಗೆ ಹೆಚ್ಚು ಸೀಟುಗಳು ಬರುತ್ತಿದೆ ಎಂದು ಹೇಳುತ್ತಿದ್ದೀರಿ ಎಲ್ಲಿಂದ ಬರುತ್ತಿದೆ. ನಿಮಗೆ ಸೀಟುಗಳು ಆಕಾಶದಿಂದ ಬರುತ್ತಿದೆಯಾ? ಆಗಲೇ ಮಾಧುಸ್ವಾಮಿಯವರು ಕ್ಲಿಯರ್ ಆಗಿ ಹೇಳಿದ್ದಾರೆ. ಕಾಮೆಡ್ "ಕೆ" ಪರೀಕ್ಷೆ ಬರೆದಿರುವವರು ಕರ್ನಾಟಕದವರೇ, ನಿಮ್ಮ ಸಿಇಟಿ ಬರೆದಿರುವವರು ಕರ್ನಾಟಕದವರೇ, ಅಲ್ಲೇನೂ ವಿದೇಶದವರು ಬಂದು ಬರೆದಿಲ್ಲ. ಒಬ್ಬರೋ ಇಬ್ಬರೋ ಬೇರೆ ರಾಜ್ಯದವರು ಬಂದು ಬರೆದಿರಬಹುದು. ಎಲ್ಲಾ ಕಡೆ ಬರೆದಿರುತ್ತಾರೆ. ಅವರಿಗೆ ಅಲ್ಲೆ ಸೀಟ್ ಸಿಗುತ್ತದೆ. ನಿಮ್ಮಲ್ಲೇಕೆ ಅವರು ಬರಬೇಕಾಗಿದೆ, ಅದರ ಬಗ್ಗೆ ಮಾಧುಸ್ವಾಮಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತೆ ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ಫೀ ಸ್ಟ್ರಕ್ಚರ್ ಬಗ್ಗೆ ನೀವು ಎಲ್ಲಿ ಸ್ವಾಮಿ ಕಡಿಮೆ ಮಾಡಿರುವುದು? ಯಾವುದರಲ್ಲಿ ನೀವು ಕಡಿಮೆ ಮಾಡಿದ್ದೀರಿ. ಕಳೆದ ವರ್ಷಕ್ಕೂ ಈ ವರ್ಷಕ್ಕೂ ನೀವು ಏನು ವ್ಯತ್ಯಾಸ ಮಾಡಿದ್ದೀರಿ? ನಿಮ್ಮ ಎಬಿವಿಪಿಯವರು ಈ ಫೀಸ್ಟ್ರಕ್ಚರ್ ಬಗ್ಗೆ ಹೋರಾಟ ಮಾಡುತ್ತಿರುವುದು ಅವರಿಗೆ ಪಿಯುಸಿ ಬಗ್ಗೆ ಕನ್ಸರ್ನೆ ಇಲ್ಲ. ಕೇವಲ ಫೀ ಸ್ಟ್ರಕ್ಚರ್ ಬಗ್ಗೆ ಹೋರಾಟ ಮಾಡುತ್ತಿದ್ದಾರೆ. ಹಾನೆಸ್ಟ್ ಆಗಿ ಹೇಳಿ ಹೋದ ವರ್ಷಕ್ಕಿದ್ದ ಫೀಗೂ ಈ ವರ್ಷದ ಫೀಗೂ ನೀವು ಏನು ವ್ಯತ್ಯಾಸ ಮಾಡಿದ್ದೀರಿ. ಹೆಚ್ಚು ಮಾಡಿದ್ದೀರೇ ಹೊರತು ಕಡಿಮೆ ಮಾಡಲಿಲ್ಲ. ಫೀ ಅನ್ನು ಜಾಸ್ತಿ ಮಾಡಿದಿರಿ. ಅಂದರೆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ನೀವು ಬೇಕಾದಷ್ಟು ಹಣ ಮಾಡಿಕೊಳ್ಳಿ ಎಂದು ಅವಕಾಶ ಮಾಡಿದ್ದೀರಿ. ನೀವು ಹಂಚಿರುವುದು ಹೇಗೆ, 15 ಪರ್ಸೆಂಟ್ ಒಂದು, 20 ಪರ್ಸೆಂಟ್ ಮ್ಯಾನೇಜ್‌ಮೆಂಟ್‌ಗೆ ಅವರು ಎಷ್ಟು ಬೇಕಾದರೂ ಫೀಸ್ ವಸೂಲಿ ಮಾಡಿಕೊಳ್ಳಬಹುದು. ಈ ಬಿಲ್ ಪಾಸ್ ಮಾಡಿದರೆ ಇನ್ನೊಂದು ಅಪಾಯ ಇದೆ. ಹಿಂದಿನ ಬಿಲ್‌ನಲ್ಲಿ ಎನ್‌ಆರ್‌ಐ

ಎಂದು ಇತ್ತು. ಎನ್‌ಆರ್‌ಐಗೆ ಮಾತ್ರ 15 ಪರ್ಸೆಂಟ್ ಎಂದು ಇತ್ತು. ಈ ಬಿಲ್ ಪಾಸ್ ಆಗಿ ಬಿಟ್ಟರೆ ಅದು ಸಲ್ಲಿಪ್ಸೈ ಆಗಿ NRI and others ಎಂದು ಆಗುತ್ತದೆ. ಯಾರು ಬೇಕಾದರೂ ಎಂದು ಆಗುತ್ತದೆ. ಈಗಿರತಕ್ಕಂತಹ ಎನ್‌ಆರ್‌ಐ ಡೆಫನೆಷನ್ ಪ್ರಕಾರ ಯಾರೂ ಎನ್‌ಆರ್‌ಐಗಳು ಇಲ್ಲಿ ಬಂದು ಅಡ್ಮಿಷನ್ ಆಗುವುದಿಲ್ಲ. ಅದಕೋಸ್ಕರ ಮ್ಯಾನೇಜ್‌ಮೆಂಟ್‌ನವರು ಇವರ ಹತ್ತಿರ ಬಹಳ ಜಂಬ ಕೊಚ್ಚಿಕೊಂಡು ಹೇಳುತ್ತಿದ್ದಾರೆ. "ನಾವು ಬಿಲ್ ಪಾಸ್ ಮಾಡಿದ್ದಕ್ಕೆ ಮ್ಯಾನೇಜ್‌ಮೆಂಟ್‌ನವರು ನಮ್ಮ ಹತ್ತಿರ ಓಡಿ ಬಂದರು. ಅದಕ್ಕೋಸ್ಕರ ನಮಗೆ ಅನುಕೂಲವಾಯಿತು" ಎಂದು ಹೇಳುತ್ತಿದ್ದಾರೆ. ಆದರೆ ಅದಕ್ಕಲ್ಲ ಇವರು ಬಂದಿರುವುದು, ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿರತಕ್ಕಂತಹ ತೀರ್ಪಿನ ಪ್ರಕಾರ ಎನ್‌ಆರ್‌ಐಗೆ ಮಾತ್ರ 15 ಪರ್ಸೆಂಟ್ ಸೀಟ್ ಇದೆ. ಅದರ್ಸ್ ಎನ್ನತಕ್ಕಂತಹ ವರ್ಡ್ ಇಲ್ಲ. ಅದು ಇಲ್ಲದಿದ್ದರೆ ಮ್ಯಾನೇಜ್‌ಮೆಂಟ್‌ಗೆ ಒಂದು ರೂಪಾಯಿ ಹಣ ಬರುವುದಿಲ್ಲ. ಏಕೆಂದರೆ No NRI will get the admission. ಅವರು ನಿಮ್ಮ ಡೆಫನೆಷನ್ ಪ್ರಕಾರ ಯಾರೂ ಎನ್‌ಆರ್‌ಐನವರು ಇಲ್ಲಿ ಬಂದು ಅಡ್ಮಿಷನ್ ಆಗುವುದಕ್ಕಾಗುವುದಿಲ್ಲ. ಅದರ್ಸ್ ಎಂದು ಆಗಿ ಬಿಟ್ಟರೆ ಯಾರು ಬೇಕಾದರೂ ಆಗಬಹುದು. ಮ್ಯಾನೇಜ್‌ಮೆಂಟ್‌ನವರು ಎಷ್ಟು ಬೇಕಾದರೂ ದುಡ್ಡು ಹೊಡೆಯಬಹುದು. ಆ ಕಾರಣಕ್ಕೋಸ್ಕರ ಅವರು ನಿಮ್ಮ ಹತ್ತಿರ ಮಾತುಕತೆಗೆ ಬಂದಿದ್ದಾರೆ. ಹೊರತು, ನಿಮ್ಮನ್ನೇನೂ ಉದ್ಧಾರ ಮಾಡಲಿಕ್ಕೆ, ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಉದ್ಧಾರ ಮಾಡಲಿಕ್ಕೆ, ನಿಮಗೆ ಹೆದರಿಕೊಂಡೇನೂ ಅವರು ಬರಲಿಲ್ಲ. ಆ ಒಂದೇ ಕಾರಣಕ್ಕಾಗಿ ಬಂದಿರತಕ್ಕಂಥದ್ದು. ಈಗೇನು ಮಾಡಿದಿರಿ ನೀವು, ಅವರು ಹೇಳಿದ್ದಕ್ಕೆ ಒಪ್ಪಿ ಬಿಟ್ಟಿರಿ. Yes. They can loot. ಎಷ್ಟು ಬೇಕಾದರೂ ತೆಗೆದುಕೊಳ್ಳಬಹುದು. 15+5, 20 ಪರ್ಸೆಂಟ್‌ಗೆ ಇಷ್ಟು ದುಡ್ಡು ಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, 15 ಲಕ್ಷ ರೂಪಾಯಿ ಕ್ಯಾಪಿಟೇಷನ್ ಇಂಜಿನಿಯರಿಂಗ್ ಕಾಲೇಜುಗಳಿಗೆ ಬೆಂಗಳೂರಿನಲ್ಲಿ ಪ್ರಾರಂಭವಾಗಿದೆ. ನೀವು ಈ ನೆಗೋಷಿಯೇಷನ್ ಮಾಡಿದ ಮೇಲೆ 15 ರಿಂದ 17 ಲಕ್ಷ ರೂಪಾಯಿ ಕ್ಯಾಪಿಟೇಷನ್ ಬೆಂಗಳೂರಿನಲ್ಲಿ ಪ್ರಾರಂಭವಾಗಿದೆ. ಅದನ್ನು ನೀವು ಎಲ್ಲಿ ಕಂಟ್ರೋಲ್ ಮಾಡುತ್ತೀರಿ? ನಾನು ಒಂದು ಲಿಸ್ಟ್ ಕೊಡುತ್ತೇನೆ. Three colleges, they have already taken capitation to the tune of Rs. 15 lakhs.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇಷ್ಟು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರಿಗೆ ಅನುಕೂಲ ಮಾಡಿಕೊಡಲಿಕ್ಕೆ ತರಾತುರಿಯಿಂದ ಬಂದು ನಮ್ಮನ್ನೆಲ್ಲಾ ಈ ಬಿಲ್ ಪಾಸ್ ಮಾಡಿ ಕೊಡಿ. ಬಿಲ್ ಪಾಸ್ ಮಾಡಿ ಕೊಡಿ ಎಂದು ಹೇಳಿದರು. ಮಾನ್ಯ ಸಚಿವರು ಇಬ್ಬರೂ ಸೇರಿ ನಮ್ಮನ್ನು ಸಭೆ ಕರೆದಿದ್ದಿರಿ. ನಾವು ಅದನ್ನು ಸ್ಪಷ್ಟವಾಗಿ ಹೇಳುತ್ತೇವೆ. 93 ಕಾನ್‌ಸ್ಟಿಟ್ಯೂಷನ್ amendment ಪ್ರಕಾರ ನೀವು ಬಿಲ್ ಪಾಸ್ ಮಾಡಿದಿರಿ. ಅದು ಈ ವರ್ಷಕ್ಕೆ

ಮಾತ್ರ. ಈ ವರ್ಷ ಇದ್ದು ಬಿಡಲಿ. ನಮ್ಮ ಹುಡುಗರು ಏನೇ ಕಷ್ಟ ಬಂದರೂ ಇದ್ದುಕೊಳ್ಳಲಿ. ಮುಂದಿನ ವರ್ಷ ಆಟೋಮೆಟಿಕ್ ಆಗಿ ಎಲ್ಲವೂ ಸರಿ ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರೆ, ಅದಕ್ಕೆ ಇವರು ತಯಾರಿಲ್ಲ. ಇರಲಿ ಈ ವರ್ಷ. ಈ ವರ್ಷದಲ್ಲಿ ಹಾಗೆಯೇ ಇದ್ದರೆ, ಏನೂ ತೊಂದರೆಯಾಗುವುದಿಲ್ಲ. ಮ್ಯಾನೇಜ್‌ಮೆಂಟ್‌ನವರಿಗೆ ತೊಂದರೆಯಾಗುತ್ತದೆ ಎಂದು ಇವರ ಹತ್ತಿರ ಓಡಿ ಬಂದಿದ್ದಕ್ಕೆ ಈ ರೀತಿ ಅರೇಂಜ್‌ಮೆಂಟ್ ಮಾಡಿಕೊಂಡಿರತಕ್ಕಂಥದ್ದು. ಇದು ಮ್ಯಾನೇಜ್‌ಮೆಂಟ್ ಪರವಾದ ಒಂದು ಬಿಲ್ಲೇ ಹೊರತು ಬಡ ವಿದ್ಯಾರ್ಥಿಗಳಿಗೆ ಮತ್ತು ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಪರವಾದಂತಹ ಬಿಲ್ ಅಲ್ಲ. ಇದು ಸರಿಯಾಗಿ ಬಿಜೆಪಿಯವರ ತತ್ವ. They are very honest to their philosophy. ಅದರಲ್ಲೇನೂ ಅನುಮಾನವಿಲ್ಲ. They are very honest. ಯಾರಿಗೆ ಅವನು ಸಹಾಯ ಮಾಡಬೇಕೋ ಅವರ ಪರವಾಗಿ ಈ ಬಿಲ್ಲನ್ನು ತಂದಿದ್ದಾರೆ. ಇದರಲ್ಲೇನೂ ಅನುಮಾನವಿಲ್ಲ. ಆದ್ದರಿಂದ ನಾವು ಇನ್ನೊಂದು ಪ್ರಶ್ನೆ ಕೇಳತಕ್ಕಂಥದ್ದು ಮ್ಯಾನೇಜ್‌ಮೆಂಟ್‌ನವರಿಗೆ ಅನುಕೂಲವಾಗತಕ್ಕಂತಹ ಬಿಲ್ಲನ್ನು ಈ ಸದನದಲ್ಲಿ ನಾವು ಪಾಸ್ ಮಾಡಿ ಕೊಟ್ಟರೆ ನಮ್ಮ ಪರಿಸ್ಥಿತಿ ಏನು? ಇಲ್ಲಿ ಶೇಕಡ 80 ಭಾಗ ಹಳ್ಳಿಗಾಡಿನಿಂದ ಆಯ್ಕೆಯಾಗಿರತಕ್ಕಂತಹ ಶಾಸಕರಿದ್ದಾರೆ. ನಾವು ಈ ಬಿಲ್‌ಗೆ ಮುದ್ರೆ ಹಾಕಿ ಕೊಟ್ಟರೆ ಅದರ ಪರಿಣಾಮವೇನಾಗುತ್ತದೆ? ನಾಳೆ ನಮ್ಮ ಗೌಡರು ಹೋಗಿ ಕುಷ್ಟಗಿಯಲ್ಲಿ ಉತ್ತರ ಹೇಳಲಿ. ಏನು ಹೇಳುತ್ತಾರೆಂದು ಇವತ್ತು ಇವರು ಮ್ಯಾನೇಜ್‌ಮೆಂಟ್ ಪರವಾದಂತಹ ಬಿಲ್ಲನ್ನು ತಂದಿದ್ದಾರೆ. ಇನ್ನೊಂದು ಮುಖ್ಯವಾದಂತಹ ಅಂಶ, ಮಾನ್ಯ ಮಾಧುಸ್ವಾಮಿಯವರು ಆ ವಿಚಾರವನ್ನು ಹೇಳಿದರು. ಪಿಯುಸಿ ಮಾರ್ಕ್ಸ್‌ನ್ನು ಕನ್‌ಸಿಡರ್ ಮಾಡುವುದಿಲ್ಲ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಹೇಳುತ್ತಾರೆ. ಮಾತೆತ್ತಿದರೆ ಮಾನ್ಯ ಶಂಕರಮೂರ್ತಿಯವರು ಅಸ್ಪೃಶ್ಯರ ತರಹ ಅದನ್ನು ನೋಡತಕ್ಕಂಥದ್ದು. ಹೈಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, ಅದಕೋಸ್ಕರ ನಾವು ಅದನ್ನು ಮುಟ್ಟಲಿಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಭಾರತ ದೇಶಕ್ಕೆ ಇರತಕ್ಕಂಥದ್ದು ಒಂದೇ ಕಾನೂನು. India is owing only one law of land. ತಮಿಳುನಾಡಿನವರು ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಮಾಡುತ್ತಾರೆ. ಅದನ್ನು ಸುಪ್ರೀಂಕೋರ್ಟ್ ಇದುವರೆಗೂ ಕೂಡ ಅಬ್ಜೆಕ್ಟ್ ಮಾಡಲಿಲ್ಲ. ಕರ್ನಾಟಕದಲ್ಲಿ ಮಾತ್ರ ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಮಾಡಿದರೆ ಹೇಗೆ ಅಬ್ಜೆಕ್ಟ್ ಮಾಡುತ್ತಾರೆ? ತಾವು ತಮಿಳುನಾಡನ್ನು ಎಕ್ಸಾಂಪಲ್ ಕೊಡುವುದಿಲ್ಲ, ನಮ್ಮ ಡಾ|| ಆಚಾರ್‌ರವರು ಬೇರೆ ರಾಜ್ಯಗಳನ್ನು ಎಕ್ಸಾಂಪಲ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ತಮಿಳುನಾಡನ್ನು ಏಕೆ ಎಕ್ಸಾಂಪಲ್ ಕೊಡಬಾರದು? ತಮಿಳುನಾಡನ್ನು ಎಕ್ಸಾಂಪಲ್ ತೆಗೆದುಕೊಳ್ಳಬೇಡಿ ಎಂದು ಹೇಳುವವರು ಬೇರೆ ರಾಜ್ಯಗಳನ್ನು ಎಕ್ಸಾಂಪಲ್ ತೆಗೆದುಕೊಳ್ಳಿ ಎಂದು ಏಕೆ ಹೇಳುತ್ತೀರಿ ನೀವು? ನಮಗೆ ಈಗ ಸಧ್ಯಕ್ಕೆ ತಮಿಳುನಾಡೇ ಆದರ್ಶ ಏಕೆ ನೀವು ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಮಾಡುವುದಿಲ್ಲ? ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಏಕೆ ಮಾಡುವುದಿಲ್ಲವೆಂದು ಹೇಳಿದರೆ, ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಮಾಡಿದರೆ ಹಳ್ಳಿ ಮಕ್ಕಳು ಬರುತ್ತಾರೆ. ಪಿಯುಸಿ

ಮಾರ್ಕ್ಸ್ ಕನ್‌ಸಿಡರ್ ಮಾಡಿದರೆ ಹಳ್ಳಿ ಮಕ್ಕಳಿಗೆ ಅನುಕೂಲವಾಗುತ್ತದೆ. ಈ ಸಿಇಟಿ ಮಾರ್ಕ್ಸ್ ಮಾತ್ರ ತೆಗೆದುಕೊಂಡರೆ ಅರ್ಬನ್ ಸ್ಟೂಡೆಂಟ್ಸ್ ಮಾತ್ರ ಬರುತ್ತಾರೆ. That is exactly BJP Policy. ಮಾರ್ವಾಡಿ ಸೇಟುಗಳ ಪಾರ್ಟಿ ಅದು. ಅದಕ್ಕೋಸ್ಕರ ಅವರು ಪಿಯುಸಿ ಕನ್‌ಸಿಡರ್ ಮಾಡುವುದಿಲ್ಲ. ಅದಕ್ಕಾಗಿ ತಮಿಳುನಾಡನ್ನು ಎಕ್ಸಾಂಪಲ್ ತೆಗೆದುಕೊಳ್ಳುವುದಿಲ್ಲ. ನಾವು ಇವತ್ತು ಕೇಳುತ್ತಿದ್ದೇವೆ. ಪಿಯುಸಿ ಕಾಲೇಜುಗಳನ್ನು ಮುಚ್ಚಿ ಬಿಡಿ. ಜೂನಿಯರ್ ಕಾಲೇಜುಗಳನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಏಕೆ ಕೊಡುತ್ತೀರಿ ಜೂನಿಯರ್ ಕಾಲೇಜುಗಳನ್ನು? ಇಲ್ಲವೆಂದರೆ PVC ಸೈನ್ಸ್ ವಿಭಾಗ ಪೂರ್ತಿ ಮುಚ್ಚಿಬಿಡಿ. ಬೇಕಾಗಿಲ್ಲ. When you are not considering the PUC marks for the admission to higher courses, why you should have those subjects in PUC? ಹಣ ಉಳಿಯುತ್ತದೆ, ಲೆಕ್ಚರರ್ಸ್ ಅಪಾಯಿಂಟ್ ಮಾಡುವ ಕೆಲಸ ಇಲ್ಲ. ಲ್ಯಾಬೊರೇಟರಿಗೆ ಹಣ ಖರ್ಚು ಮಾಡಬೇಕಾಗಿಲ್ಲ. ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್‌ನ್ನು ಮುಚ್ಚಿ ಬಿಡಿ. ಏಕೆ ಬೇಕು ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್? ತಮಿಳುನಾಡಿನಲ್ಲಿ ಬಯಾಲಜಿ ಮತ್ತು ಕೆಮಿಸ್ಟ್ರಿಗೆ 200 ಮಾರ್ಕ್ಸ್ ಸಿಇಟಿಗೆ ಕನ್‌ಸಿಡರ್ ಮಾಡುತ್ತಾರೆ. ತಮಿಳುನಾಡಿನಲ್ಲಿ ಸಿಇಟಿದ್ದು 100 ಮಾರ್ಕ್ಸ್ ಕನ್‌ಸಿಡರ್ ಮಾಡುತ್ತಾರೆ. ಇವರಿಗೆ ಪಿಯುಸಿ ಮಾರ್ಕ್ಸ್ ಕನ್‌ಸಿಡರೇಷನ್ ಇಲ್ಲ. ಸಿಇಟಿ ಮಾರ್ಕ್ಸ್ ಮಾತ್ರ ಕನ್‌ಸಿಡರ್ ಮಾಡುತ್ತಾರೆ. ಯಾರ ಪರವಾಗಿ ಇದು? ಯಾರಿಗೋಸ್ಕರ, ಎಂದು ಹೇಳಬೇಕಾಗಿದೆ. ಈ ಬಿಲ್ ಏನಾದರೂ ಈ ಸದನ ಪಾಸ್ ಮಾಡಿಕೊಟ್ಟರೆ, ಖಂಡಿತ ನಾವು ಕರ್ನಾಟಕ ರಾಜ್ಯದ ಶೇಕಡ 80 ಪರ್ಸೆಂಟ್ ಜನರಿಗೆ ದ್ರೋಹ ಬಗೆದ ಹಾಗಾಗುತ್ತದೆ. ಈ ಬಿಲ್ ಏನಾದರೂ ಪಾಸಾದರೆ 80 ಪರ್ಸೆಂಟ್ ಜನರಿಗೆ ದ್ರೋಹ ಮಾಡಿದ ಹಾಗಾಗುತ್ತದೆ. ಮಾನ್ಯ ಆಚಾರ್‌ರವರಿಗೆ ನಾನು ಈಗಲೂ ರಿಕ್ವೆಸ್ಟ್ ಮಾಡುತ್ತಿದ್ದೇನೆ. ಈ ವರ್ಷ ಸುಮ್ಮನೆ ಇದ್ದುಬಿಡಿ. ಆದೇನು ಆಗಿದೆಯೋ ಅದು ಆಗಿ ಬಿಡಲಿ. ಮುಂದಿನ ವರ್ಷಕ್ಕೆ ಸರಿಯಾದ ರೀತಯಾದ ಒಂದು ವ್ಯವಸ್ಥಿತವಾದ ಬಿಲ್ಲನ್ನು ತಂದು ನಮ್ಮ ಬಡ ಮಕ್ಕಳಿಗೆ ಉಪಯೋಗವಾಗತಕ್ಕಂಥದ್ದಕ್ಕೆ ಈ ಬಿಲ್ ಪಾಸ್ ಮಾಡೋಣ. ಸುಪ್ರೀಂ ಕೋರ್ಟ್ ಜಡ್ಜಮೆಂಟನ್ನು ನೀವು ಹೇಳುತ್ತೀರಿ. ಎಲ್ಲಾದರೂ ಒಂದು ಕಡೆ ಅವರು ತೋರಿಸಿ ಬಿಡಲಿ. "ಸುಪ್ರೀಂ ಕೋರ್ಟ್ ಡೈರೆಕ್ಷನ್ ಕೊಟ್ಟಿದೆ, ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಮಾಡಬೇಡಿ, ಇದು ಮಾಡಬೇಡಿ" ಎಂದು ಹೇಳಿದೆ ಎಂದು ತೋರಿಸಲು, ತಮಿಳುನಾಡಿನವರು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಅನ್ನು ವಯಲೇಟ್ ಮಾಡುವುದಕ್ಕೆ ಸಾಧ್ಯವಾ? ಏನಾಯಿತು ಎಂದು ತಮಿಳುನಾಡಿನ ಒಂದೇ ಒಂದೆ ಇನ್‌ಸಿಡೆಂಟ್ ಹೇಳುತ್ತೇನೆ. ಅವರು ಸಿಇಟಿಯನ್ನು ರದ್ದು ಮಾಡಿ ಬಿಟ್ಟರು. ತಮಿಳುನಾಡಿನವರು ಸಿಇಟಿ ರದ್ದು ಮಾಡಿದ್ದಕ್ಕೆ ಸುಪ್ರೀಂ ಕೋರ್ಟಿಗೆ ಅಪೀಲು ಹೋದರು. ಆಗ ಸುಪ್ರೀಮ ಕೋರ್ಟ್ ತೀರ್ಮಾನ ಮಾಡಿತು. ಇಲ್ಲ ಇವರು ಸಿಇಟಿ ಕಂಡಕ್ಟ್ ಮಾಡಲೇಬೇಕೆಂದು ಹೇಳಿತು. ಸಿಇಟಿ ಕಂಡಕ್ಟ್ ಮಾಡುವಾಗ ಸುಪ್ರೀಂ ಕೋರ್ಟ್‌ನವರು ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಮಾಡಬಾರದು ಎಂದು ಹೇಳಿ ಜಡ್ಜ್‌ಮೆಂಟ್

ಕೊಡಬಹುದಾಗಿತ್ತು. Only CET ಎಂದು ಏಕೆ ಕೊಡಲಿಲ್ಲ? ತಮಿಳುನಾಡಿನವರಿಗೆ ಪಿಯುಸಿ ಅಲೋ ಮಾಡುವುದೇನು; ಕರ್ನಾಟಕದಲ್ಲಿ ಅಲೋ ಮಾಡದೇ ಇರತಕ್ಕಂಥದ್ದೇನು? ಇವರು ಏನು ಹೇಳುತ್ತಾರೆ. "ನಾವು ಹೈಕೋರ್ಟಿನಲ್ಲಿ ಬರೆದು ಕೊಟ್ಟಿದ್ದೇವೆ, ಹಿಂದಿನ ಸರ್ಕಾರದವರು ಕರ್ನಾಟಕ ಹೈಕೋರ್ಟಿನಲ್ಲಿ ಅಂಡರ್ ಟೇಕಿಂಗ್ ಕೊಟ್ಟಿದೆ" ಎಂದು ಇವರ ಮೇಲೆ ಹಾಕಲಿಕ್ಕೆ ತಪ್ಪು ಹೇಳುತ್ತಾರೆ. ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಬರೆದು ಕೊಟ್ಟಿದೆಯಂತೆ! ನಾವು ಪಿಯುಸಿ ಕನ್‌ಸಿಡರ್ ಮಾಡುವುದಿಲ್ಲವೆಂದು ಬರೆದು ಕೊಟ್ಟಿದೆಯಂತೆ! ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ರೆಕಮಂಡೇಷನ್ ಪ್ರಕಾರ ನಾವು ಪಿಯುಸಿ ಮಾರ್ಕ್ಸ್ ಕನ್‌ಸಿಡರ್ ಮಾಡುವುದಿಲ್ಲ. MCI has not recognized PUC marks, ಎನ್ನುವಂತಹ ಕಾರಣಕ್ಕೋಸ್ಕರ ಹೈಕೋರ್ಟಿನಲ್ಲಿ ಅಂಡರ್ ಟೇಕಿಂಗ್ ಬರೆದು ಕೊಟ್ಟಿದೆ ಹಿಂದಿನ ಸರ್ಕಾರ, ನಾವು ಮಾಡಿರುವ ಪಾಪ ಅಲ್ಲ ಇದು, ಹಿಂದಿನ ಸರ್ಕಾರ ಮಾಡಿರತಕ್ಕಂತಹ ಪಾಪಕ್ಕೆ ನಮ್ಮನ್ನೇಕೆ ವಿಮರ್ಶೆ ಮಾಡುತ್ತೀರಿ ಎಂಬುದು ಇವರ ವಾದ. ಇಂಡಿಯಾ ದೇಶಕ್ಕೆ ಒಂದೇ ಮೆಡಿಕಲ್ ಕೌನ್ಸಿಲ್ ಉಂಟೋ ಎರಡೆರಡು ಉಂಟೋ? ತಮಿಳುನಾಡಿಗೊಂದು ಮೆಡಿಕಲ್ ಕೌನ್ಸಿಲ್ ಇದೆಯೋ? ತಮಿಳುನಾಡಿಗಾದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಅಬ್ಜೆಕ್ಷನ್ ಇಲ್ಲ. ಕರ್ನಾಟಕಕ್ಕಾದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಅಬ್ಜೆಕ್ಷನ್ ಹೇಗೆ ಬರುತ್ತದೆ? What is this? ಈ ಸದನದಲ್ಲಿರತಕ್ಕಂತಹವರು ನಾವೇನು ಪ್ರೈಮರಿ ಸ್ಕೂಲ್ ಮಕ್ಕಳು ಎಂದು ತಿಳಿದುಕೊಂಡಿರಾ? ತಮಿಳುನಾಡಿಗೆ ಏನಾದರೂ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಬೇರೆ ಇದ್ದರೆ ಹೇಳಿ. ನಾವು ಒಪ್ಪಿಕೊಳ್ಳೋಣ. ಅಲ್ಲಿಗೂ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಒಂದೇ ಸುಪ್ರೀಂ ಕೋರ್ಟು ತಮಿಳುನಾಡಿಗೆ ಒಂದೇ. ಏಕೆ ಸುಪ್ರೀಂ ಕೋರ್ಟ್, ಹೈಕೋರ್ಟ್ ಎಂದು ಹೇಳತಕ್ಕಂಥದ್ದು? ರಿವಿಷನ್ ಪಿಟೆಶನ್ ಹಾಕಿ ಎಂದು ನಾವು ಹೇಳಿದೆವು. ಅದನ್ನೂ ಮಾಡಲಿಲ್ಲ. ಈಗ ತೆಗೆದುಕೊಂಡು ಬಂದು ನಾವೇನೋ ಉದ್ಧಾರ ಮಾಡಿದ್ದೇವೆ. ಏನೂ ಉದ್ಧಾರ ಮಾಡಲಿಲ್ಲ ಸಾರ್, ಲಕ್ಷಾಂತರ ಬಡ ವಿದ್ಯಾರ್ಥಿಗಳ ತಲೆ ಮೇಲೆ ಕಲ್ಲು ಚಪ್ಪಡಿಯನ್ನು ಇವರು ಹಾಕುತ್ತಿದ್ದಾರೆ. ಇವರೇನೂ ಮಾಡುತ್ತಿಲ್ಲ. ಅಂದರೆ ಬಡವರ ಮಕ್ಕಳು ಡಾಕ್ಟರ್ ಆಗುವಂತಿಲ್ಲ. ಇಂಜಿನಿಯರ್‌ಗಳು ಆಗುವಂತಿಲ್ಲ. ಶ್ರೀಮಂತರ ಮಕ್ಕಳು ಮಾತ್ರ ಡಾಕ್ಟರ್ ಮತ್ತು ಇಂಜಿನಿಯರ್ ಆಗಬೇಕು. ಆ ಶ್ರೀಮಂತರ ಮಕ್ಕಳು ಡಾಕ್ಟರ್ ಆದರೆ ಹಳ್ಳಿಯ ಆಸ್ಪತ್ರೆಗೆ ಹೋಗುವುದಿಲ್ಲ. ಅವನು 'ಎ' ಕ್ಲಾಸ್ ಸಿಟಿ ಬೆಂಗಳೂರಿನಲ್ಲಿಯೇ ಇರಬೇಕೆಂದು ಹೇಳುತ್ತಾನೆ. ಹಳ್ಳಿ ಹೇಗಿರುತ್ತದೆ ಎಂಬುದೇ ಅವನಿಗೆ ಗೊತ್ತಿರುವುದಿಲ್ಲ. ಆದರೆ ಅವರುಗಳು ಮಾತ್ರ ಡಾಕ್ಟರ್ ಹಾಗೂ ಇಂಜಿನಿಯರ್‌ಗಳು ಆಗಬೇಕೆಂದು ಇವರು ಹೊರಟಿದ್ದಾರೆ. ಇದು ಜನ ವಿರೋಧಿ ಬಿಲ್. ನಮ್ಮ ವಿದ್ಯಾರ್ಥಿಗಳ ವಿರೋಧದ ಬಿಲ್, ನಮ್ಮ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಭವಿಷ್ಯದ ಮೇಲೆ ಇವರು ಕಲ್ಲು ಚಪ್ಪಡಿ ಎಳೆಯತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಈ ಬಿಲ್‌ನ್ನು ಪಾಸ್ ಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಇಂಥ ಪ್ರಾಮುಖ್ಯವಾದ ಮಸೂದೆಗಳನ್ನು ಈ ಸದನದಲಿ ಮಂಡಿಸಬೇಕಾದರೆ ಕೆಲವು ಶಿಷ್ಠಾಚಾರಗಳಿವೆ. ಅಂದರೆ ತಾವು ಆ ಶಿಷ್ಠಾಚಾರವನ್ನು ಮುರಿದಿರಿ ಎಂದು ನಾನು ಹೇಳುತ್ತಿಲ್ಲ. ಸರ್ಕಾರ ಕರೆಯುವ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ಒಮ್ಮತ ಅಭಿಪ್ರಾಯಕ್ಕೆ ಮೊದಲು ಬರಬೇಕು. ಇದು ಒಂದು. ಇದನ್ನು ಮುಂದೆ ಮಾಡಿಕೊಳ್ಳುತ್ತೇವೆ ಎಂದು ಹೇಳುವ ವಿಚಾರ ಬೇರೆ. ಎರಡನೆಯದಾಗಿ ಬಹಳ ಪ್ರಾಮುಖ್ಯವಾಗಿ ಎರಡು ಪಕ್ಷಗಳು ಸೇರಿ ಏನು ಸರ್ಕಾರವನ್ನು ರಚನೆ ಮಾಡಿದ್ದಾರೆ ಆ ಎರಡೂ ಪಕ್ಷಗಳ ಸದಸ್ಯರು ಒಟ್ಟಿಗೆ ಸೇರಿ ಇದರ ಬಗ್ಗೆ ಚರ್ಚೆಯಾಗಬೇಕು. ಈ ಬಿಲ್‌ನ ಸಾಧಕ ಬಾದಕಗಳ ಬಗ್ಗೆ ಚರ್ಚೆಯಾಗಬೇಕು. ಇವೆರಡೂ ಆಗಿಲ್ಲ. ಸಚಿವ ಸಂಪುಟದ ಸಭೆಯ ಒಪ್ಪಿಗೆಯನ್ನು ಇದು ಪಡೆದಿಲ್ಲ. ಇದಲ್ಲದೇ ಶಾಸಕಾಂಗ ಸಭೆಯಲ್ಲೂ ಕೂಡ ಈ ಬಗ್ಗೆ ಚರ್ಚೆಯಾಗಿಲ್ಲ. ಬಹುತೇಕ ಸದಸ್ಯರುಗಳಿಗೆ ಈ ಸದನದಲ್ಲಿ ಈ ಮಸೂದೆಯ ವಿರುದ್ಧ ಮಾತನಾಡುವುದಕ್ಕೆ ಬಾಯಿ ಕಟ್ಟಿದೆ. ಬಹುತೇಕ ಮುಕ್ಕಾಲು ಭಾಗ ಶಾಸಕರುಗಳು ಇದರ ವಿರುದ್ಧ ಇದ್ದಾರೆ. ಭಾರತೀಯ ಜನತಾ ಪಕ್ಷದ ಮುಖಂಡರುಗಳು ಹಾಗೂ ಈ ಸರ್ಕಾರದ ಸಚಿವರುಗಳಾಗಿರತಕ್ಕಂಥ ಇಬ್ಬರು ಹಿರಿಯ ಸಚಿವರುಗಳು ಯಾವ ಇಂಥ ಮಸೂದೆಯನ್ನು ತಂದಿದ್ದಾರೋ ಅವರ ಪಕ್ಷದವರೇ ನಿನ್ನೆ ಮೊನ್ನೆ ಬೆಂಗಳೂರಿನಲ್ಲಿ ಹೊರಗಡೆ ರಾಜ್ಯಾದ್ಯಂತ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನವರು ಇದರ ಬಗ್ಗೆ ತೀವ್ರವಾದಂಥ ಹೋರಾಟವನ್ನು ಮಾಡಿದ್ದಾರೆ. ಇದರ ವಿರುದ್ಧ ಹೋರಾಟ ನಡೆಸಿದ್ದಾರೆ. ಇದರ ಬಗ್ಗೆ ನೇರವಾಗಿ ಹೇಳುತ್ತಿದ್ದಾರೆ. ಸರ್ಕಾರ ಸಂಪೂರ್ಣವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಾಲಿದ್ದಾರೆ ಎಂದು ಹೇಳಿದ್ದಾರೆ. ನಾನು ಈ ಸದನದಲ್ಲಿಯೇ ಕುಳಿತು ಹಿಂದಿನ ಸರ್ಕಾರದ ಒಂದು ವೀರಾವೇಶದ ಮಾತನ್ನು ಕೇಳಿದ್ದೆ. ಆಗ ಸಚಿವರಾಗಿದ್ದ ಮಾನ್ಯ ಮಂಜುನಾಥ್‌ರವರು ಎಲ್ಲಿಯವರೆಗೂ ಈ ಬಗ್ಗೆ ಹೋಗಿದ್ದರೆಂದರೆ, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸಂಪೂರ್ಣವಾಗಿ ನಾವು ರಾಷ್ಟ್ರೀಕರಣ ಮಾಡುತ್ತೇವೆ. ವಶಪಡಿಸಿಕೊಳ್ಳುತ್ತೇವೆ ಮತ್ತು ಕಾಲೇಜುಗಳನ್ನು ಯಥೇಚ್ಛವಾಗಿ ಜಿಲ್ಲೆಗೊಂದು ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯುತ್ತೇವೆ. ಸೀಟ್‌ಗಳನ್ನು ಜಾಸ್ತಿ ಮಾಡುತ್ತೇವೆ ಎಂದು ಹೇಳಿ ಹೇಳಿ ಉದ್ದುದ್ದ ಭಾಷಣವನ್ನು ಮಾಡಿದರು. ಆದರೆ ಅವರು ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡರು. ಇವರು ಹೋದ ಬಾರಿ ತಂದಂಥ ಮಸೂದೆ ಅದನ್ನೇ ಇವೊತ್ತು ಶ್ರೀರಾಮರೆಡ್ಡಿಯವರು ಕೇಳಿದರು. ಏನಾಯಿತು, ಎಲ್ಲಿ ಹೋಗಿದೆ ಅದು, ಅದರ ಬಗ್ಗೆ ಅವರು ವಿವರಣೆ ಕೊಡಬೇಕಲ್ಲಾ. ವಿವರಣೆಯನ್ನು ಕೊಟ್ಟಿಲ್ಲ. ಇಲ್ಲಿ ಇವರು ಏನು ಹೇಳುತ್ತಾರೆಂದರೆ ಈ ರಾಜ್ಯ ಸರ್ಕಾರವು ಕರ್ನಾಟಕದ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ ಖಾಸಗಿ ಅನುದಾನಿತ ವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಜೊತೆಗೆ ಸಮ್ಮತ ಅಭಿಪ್ರಾಯದ ಒಪ್ಪಂದ ಮಾಡಿಕೊಂಡಿರುತ್ತೇವೆ. ಇದೇನು ಇದು ತೀರಾ ನಾಚಿಕೆಗೇಡು, ಇದು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಲ್ಲ.

ಇವರು ಸಂಪೂರ್ಣವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳವರಿಗೆ ನೇರವಾಗಿ ಗುಲಾಮರಾಗಿದ್ದಾರೆ. ಆದುದರಿಂದ ಇದನ್ನು ನಾನು ಸ್ಪಷ್ಟವಾಗಿ ವಿರೋಧ ಮಾಡುತ್ತೇನೆ. ಇದರ ಜೊತೆಗೆ ನಾನು ಅವರಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುವುದೇನೆಂದರೆ, ಜಂಟಿ ಸಲಹಾ ಸಮಿತಿಯನ್ನು ಈ ಬಗ್ಗೆ ನೀವು ಮಾಡಿ ಎನ್ನುತ್ತೇನೆ. ಏನು ಆಗುತ್ತದೆ. ಸಾಮಾನ್ಯವಾಗಿ ಇಲ್ಲಿ ನಡೆದಿಲ್ಲವೆ ಅನೇಕ ಸಾರಿ. ಹಿಂದೆ ಅನೇಕ ಸಾರಿ ಇಂಥ ಸಂದರ್ಭ ಬಂದಾಗಲೆಲ್ಲಾ ಎರಡೂ ಸದನಗಳ ಸದಸ್ಯರು ಒಳಗೊಂಡಂಥ ಜಂಟಿ ಸಲಹಾ ಸಮಿತಿಯನ್ನು ಮಾಡಿ ಹತ್ತು ದಿವಸದಲ್ಲಿ ಅಥವಾ ಹದಿನೈದು ದಿವಸದಲ್ಲಿ ಅಥವಾ ಮುಂದಿನ ಶಾಸನ ಸಭೆ ಸೇರುವಾಗ ಅಲ್ಲಿ ಒಂದು ತೀರ್ಮಾನವನ್ನು ಕೊಡುತ್ತಾರೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ತಮಗೂ ನಾನು ಹೇಳುತ್ತಿದ್ದೇನೆ. ದಯವಿಟ್ಟು ಇವರಿಗೆ ತಾವು ಕಿವಿ ಮಾತನ್ನು ಹೇಳಿ ಜಂಟಿ ಸಲಹಾ ಸಮಿತಿಗೆ ಇದು ಹೋಗುವಂತೆ ಮಾಡಿ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಅಲ್ಲಿ ಚರ್ಚೆ ಮಾಡಿ ಶುಲ್ಕ ಎಷ್ಟಿರಬೇಕು. ಯಾವ ಯಾರ ರೀತಿ ಇರಬೇಕು ಎಂದು ತೀರ್ಮಾನ ಮಾಡಲಿ. ಇದು ಒಂದು ವಿಚಾರ. ಮತ್ತೆ ಪದವಿ ಪೂರ್ವ ಕಾಲೇಜು ನಮ್ಮದು, ತಮಿಳುನಾಡಿನಲ್ಲಿ ಅಲ್ಲಿನ ನಂಬರ್‌ನ್ನು ಲೆಕ್ಕ ಹಾಕ್ತಾರೆ ಕರ್ನಾಟಕದಲ್ಲಿ ಕಡೆಗಾಣಿಸಿದ್ದೀರಿ. ಆದ್ದರಿಂದ ಶಂಕರಮೂರ್ತಿಯವರೇ, ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿ. ನೀವೇನೂ ಈ ಬಗ್ಗೆ ಅರ್ಜೆಂಟಾಗಿ ಆತರಾತುರವಾಗಿ ಹೋಗಬೇಡಿ. ಈ ವರ್ಷ ಏನಾಗುತ್ತದೋ ಆಗಲಿ. ನೀವು ನೋಡಿದ್ದೀರಿ. ನಿಮ್ಮ ವಿದ್ಯಾರ್ಥಿಗಳೇ, ನೀವು ಯಾರನ್ನು ಘೋಷಣೆ ಮಾಡಿದಿರೋ ನೀವು ಯಾರನ್ನು ಗಳಿಸಿದಿರೋ, ಅವರೇ ಒಂದು ರೀತಿ ಸರ್ಕಾರದ ವಿರುದ್ಧ ಘೋಷಣೆಯನ್ನು ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಬಂದಿದೆ. ತಾವೂ ನೋಡಿದ್ದೀರಿ. ಶುಲ್ಕ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಈ ಅಂತ್ಯದಲ್ಲಿ ನೀವು ಅವರನ್ನೂ ಧಿಕ್ಕರಿಸಿ ಮೌನವಾಗಿ ಈ ಮಸೂದೆಯನ್ನು ತಂದಿದ್ದೀರಿ. ನೀವು ಶಾಸಕರುಗಳನ್ನು ಎಲ್ಲಾದರೂ ಒಂದು ಸಾರಿ ಸೇರಿಸಿ ಇದನ್ನು ನಾವು ತರೋಣವೇ ಎಂದು ಪ್ರತಿಯೊಂದರ ಬಗ್ಗೆ ವಿವರಣೆಯನ್ನಾದರೂ ತಾವು ಕೇಳಿದಿರೋ? ಅದು ಆಗಲಿಲ್ಲ. ಹೋಗಲಿ, ಸಚಿವ ಸಂಪುಟ ಸಭೆಯಲ್ಲಿ, ವಿವರಣೆಯನ್ನು ಕೊಟ್ಟಿಲ್ಲ. ಅಂದರೆ ಮುಂದೆ ಕೊಡಬಹುದು ಎನ್ನುವ ಭಾವನೆ ನಿಮ್ಮಲ್ಲಿರುಬಹುದು. ನಾನು ನಿಮ್ಮನ್ನು ವಿರೋಧ ಮಾಡುತ್ತಿಲ್ಲ. ನಿಮ್ಮ ಪ್ರಯತ್ನದ ಬಗ್ಗೆ ನಾನು ಏನೂ ಹೇಳುತ್ತಿಲ್ಲ. ಆದರೆ ಇದರಿಂದ ಸಂಪೂರ್ಣವಾಗಿ ನಿಮಗೆ ಕೆಟ್ಟ ಹೆಸರು ಬರುತ್ತದೆ. ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದೆ. ಇದು ಪಕ್ಕಾ ಖಾಸಗಿ ಶಿಕ್ಷಣ ಸಂಸ್ಥೆಗಳ ವ್ಯಾಪಾರೀಕರಣದ ವಿಷಯಕ್ಕೆ ಬೆಂಬಲ ಕೊಟ್ಟಂತಾಗುತ್ತದೆ. ಆದ್ದರಿಂದ ತಾವು ಇದನ್ನು ದಯವಿಟ್ಟು ಕೈಬಿಟ್ಟು ತಾವು ಜಂಟಿ ಸಲಹಾ ಸಮಿತಿಯನ್ನು ಮಾಡುತ್ತೇವೆ ಎಂದು ಘೋಷಣೆ ಮಾಡಿ ಎಂದು ಹೇಳಿ ಇದನ್ನು ನಾನು ಸ್ಪಷ್ಟವಾಗಿ ವಿರೋಧ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಈಗ ನನಗೆ ಈ ಬಿಲ್ ಮೇಲೆ ಸಪೋರ್ಟ್ ಮಾಡಬೇಕು ಎನ್ನುವ ಆಸೆ ಇದ್ದರೆ ನಾನು ಸಪೋರ್ಟ್ ಮಾಡಬೇಕು.

ಹೌದು ತಾನೆ? ಈ ಬಿಲ್‌ನ್ನು ಸಪೋರ್ಟ್ ಮಾಡಬೇಕೆಂದಿದ್ದರೆ ನಾನು ಸಪೋರ್ಟ್ ಮಾಡಬೇಕು. ನಾನು ಈ ಬಿಲ್‌ನ್ನು ಸಪೋರ್ಟ್ ಮಾಡುತ್ತೇನೆ. But, you have to convince me. ಯಾವ ರೀತಿಯಲ್ಲಿ ನಾನು ಸಪೋರ್ಟ್ ಮಾಡಬೇಕು ಎಂಬುದಕ್ಕೆ ನನ್ನನ್ನು ಕನ್‌ವಿನ್ಸ್ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೇಗೆ ಕನ್‌ವಿನ್ಸ್ ಮಾಡುವುದು?

ಶ್ರೀ ಎಸ್. ರಾಜೇಂದ್ರನ್ : ಮನೆಗೆ ಬರಬೇಕು, ಪರ್ಸನಲ್ ಆಗಿ ಬರಬೇಕು. ಔಟು ಬೇಕಾದರೆ ಟಾಯ್ಲೆಟ್‌ಗೆ ಹೋದರೆ, ಅಲ್ಲಿಗೂ ಬರಬೇಕು, ಇದೆಲ್ಲಾ ಹೀಗೆಲ್ಲಾ ಇದೆ. ಎಲ್ಲವೂ ಇದೆ. ಎಲ್ಲೆಲ್ಲಿ ಬರಬೇಕು ಅಲ್ಲೆಲ್ಲಾ ಬರಬೇಕು ನಿನಗೆ ಬೇಕು ಅಂದರೆ, ಈಗ ಮಾಧುಸ್ವಾಮಿಯವರು ತಮಿಳುನಾಡು ವಿಚಾರದಲ್ಲಿ ಕೋಟ್ ಮಾಡಿದರು. ಸುಪ್ರೀಂ ಕೋರ್ಟ್ ಹೇಳಿರುವುದನ್ನು ಕೋಟ್ ಮಾಡಿದರು. I don't want to repeat that. ಅವರು ಒಂದು ಮಾತನ್ನು ಹೇಳಿದರು. ಬಿ.ಜೆ.ಪಿ. ಸರ್ಕಾರದಿಂದ ಸ್ಟೂಡೆಂಟ್ಸ್‌ಗಳು ಹಾಳಾಗುತ್ತಿರುವುದು ಎಂದರು. ಅದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ನೀವು ಬಿ.ಜೆ.ಪಿ. ಸರ್ಕಾರವನ್ನು ನಡೆಸುತ್ತಿದ್ದೀರಾ ಈಗ? ಇದು coalition Government. You must tell that. ಇಲ್ಲದಿದ್ದರೆ ನಿಮ್ಮ ಹೆಸರುಗಳು ನಾಶವಾಗುತ್ತದೆ. ಆದುದರಿಂದ ನೀವು ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವೇ ಅವರಿಗೆ ಹೇಳಿಕೊಡುತ್ತಿದ್ದೀರೇನು?

ಶ್ರೀ ಎಸ್. ರಾಜೇಂದ್ರನ್ : ಅವರಿಗೆ ನಾನು ಹೇಳುತ್ತಿದ್ದೇನಷ್ಟೇ. My freedom of speech cannot be curtailed by anybody. I have to speak. ಇದೇನು ಪ್ರೆಸ್ಟೀಜ್ ಮೇಲೆ ಮಾತನಾಡುವುದಲ್ಲ. ಈಗ ಮಾತನಾಡುವುದು ಪ್ರೆಸ್ಟೀಜ್ ಮೇಲೆ ಮಾತನಾಡುತ್ತಾರೋ, ಸ್ಟೂಡೆಂಟ್ಸ್ ಪರವಾಗಿ ಮಾತನಾಡುತ್ತಾರೋ I don't want. But you said NRI and Others, ಅದಕ್ಕೆ ಮುಂದೆ ಏನು ಹೇಳಿದಿರಿ, ಸುಮಾರು 25 ಸಾವಿರದ ವಿದ್ಯಾರ್ಥಿಗಳು ನಮ್ಮ ರಾಜ್ಯದಲ್ಲಿ ಹಾಳಾಗುತ್ತಾರೆ. ಸ್ಪಾಯಿಲ್ ಆಗಿಬಿಡುತ್ತಾರೆ. ಅವರ ಮೇಲಿನ ಅಪಾರ ಪ್ರೀತಿಗೋಸ್ಕರ ನಾವು ಈ ಮಸೂದೆ ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳಿದಿರಿ. ನಿಜ ತಾನೇ? ಅದು ನಿಜವೆಂದರೆ "ಅದರ್ಸ್" ಎಂದು ನೀವು ಹೇಳಿರುವುದು ಕರ್ನಾಟಕದ ರಾಜ್ಯದ ಜನ ಮಾತ್ರವೇ? Please tell about that. ನೀವು "ಆದರ್ಸ್" ಎಂದು ಹೇಳಿದರೆ It is only for our children? Is it not for children of other states children? Then, what is the use? When you are talking about 25,000 students, ಸ್ಟೂಡೆಂಟ್ಸ್ ನಮ್ಮ ರಾಜ್ಯದಲ್ಲಿ ಹಾಳಾಗುತ್ತಾರೆಯಾದ ಕಾರಣ ಅವರ ಮೇಲೆ ಅಪಾರವಾದ ಪ್ರೀತಿ ಇಟ್ಟುಕೊಂಡು ಮಾತನಾಡುವ ನೀವು, ಪಾಪ ನನ್ನ ಹೆಂಡ್ತಿಗೆ ಒಳ್ಳೆಯ ಸೀರೆ ತೆಗೆದುಕೊಂಡು ಬರ್ತೀನಿ ಎಂದು ನಾಲ್ಕು ತೆಗೆದುಕೊಂಡು ಬಂದರೆ ಮೂರು ಯಾರಿಗೆ ಕೊಡ್ತೀರಿ? ಬೇರೆಯವರಿಗೆ ಕೊಡ್ತೀರಿ ಎನ್ನುವ ಅರ್ಥ. That means you are putting a word in the name of wife

and distributing the sarees to others. That is illegal. So, in the name of Karnataka children you are encouraging children of other States. That supports management. ಆದರ್ಶ್ ಎಂದರೆ in your dictionary, in your language, is it only children of Karnataka? Is it only students of Karnataka? That shows you don't have crystal clear ideas, you are using your extra constitutional method, you are using your power to bring this Bill and spoil entire children of Karnataka. ಮ್ಯಾನೇಜ್‌ಮೆಂಟ್‌ಗೆ ಸಪೋರ್ಟ್ ಮಾಡುತ್ತೀರಿ. ಅವರ ಜೊತೆಗೆ ಶಾಮೀಲಾಗಿದ್ದೀರಿ. ಅವರೂ ನೀವೂ master pump ನಲ್ಲಿ booz ಮಾಡುತ್ತೀರಿ. ಅದಕ್ಕೋಸ್ಕರ ಅವರು ನಿಮ್ಮ ಜೊತೆಯಲ್ಲಿ ಬಂದು, ನಾವು ನಿಮ್ಮ ಹತ್ತಿರ ಮಾತುಕತೆಗೆ ಬರುತ್ತೇವೆ, ಏತಕ್ಕೆ? "ನಮಗೇನೂ ಸಿಕ್ಕುವುದಿಲ್ಲ ಸ್ವಾಮಿ, ಮಾತುಕತೆಯಲ್ಲಿ ನಾವು ಮಾತನಾಡುತ್ತೇವೆ. ನೀವು ಒಂದು ಬಿಲ್ ಪಾಸ್ ಮಾಡಿಕೊಡಿ. NRI and Others ಎಂದು ಹೇಳಿ, ಎಲ್ಲಿರೋ ಜನ ಇದ್ದರೂ, ಅವರು ಯಾವ ಕಡೆಯವರಿದ್ದರೂ ಅವರಿಂದ ದುಡ್ಡು ತೆಗೆದುಕೊಂಡು ನಾವು ಅಡ್ಮಿಶನ್ ಮಾಡಿ, ನಾವು ನಮ್ಮ ಕಾಲೇಜುಗಳನ್ನು ನಡೆಸಿಕೊಳ್ಳುವುದಕ್ಕೆ ನೀವು ಸಹಾಯ ಮಾಡಿ" ಎಂದು ಹೇಳಿರುವುದಕ್ಕೋಸ್ಕರ ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ನೀವು ಸಹಾಯ ಮಾಡುತ್ತಿದ್ದೀರಿ. I am against this Bill. I will not coopoerate. I am thankful to the chair for giving me this opportunity.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಕಳೆದ ಬಿಲ್ ಅನ್ನು ಪಾಸ್ ಮಾಡುವಾಗಲೇ ನಾನು ಈ ಮಾತನ್ನು ಸರ್ಕಾರಕ್ಕೆ ಹೇಳಿದ್ದೆ. ತಮಿಳುನಾಡಿನಲ್ಲಿ ಏನು ನಡೆಯುತ್ತಿದೆ ಎಂದರೆ, ಪಿ.ಯು.ಸಿ. ಮತ್ತು ಸಿ.ಇ.ಟಿ. ಮಾರ್ಕ್ ಎರಡನ್ನು ತೆಗೆದುಕೊಳ್ಳುತ್ತಿದ್ದಾರೆ ನೀವು ಏಕೆ ತೆಗೆದುಕೊಳ್ಳಬಾರದು ಎಂದು ಹೇಳಿದ್ದಕ್ಕೆ ಇವರು ಹೈಕೋರ್ಟ್ ಆದೇಶ ಇದೆ ಎಂದು ಹೇಳಿದರು. ಸುಪ್ರೀಂ ಕೋರ್ಟ್ ಆದೇಶ ಇದ್ದರೂ, ತಮಿಳುನಾಡಿನಲ್ಲಿ ಮಾಡುವಾಗ, ಅದನ್ನು ಹೇಳಿದರೂ ಸಹ ಇವರು ಏನು ಮಾಡಬೇಕಾಗುತ್ತದೆ ಎನ್ನುವುದನ್ನು ಪರಿಶೀಲನೆ ಮಾಡಲಿಲ್ಲ. ಇವರು ವಿಷಯವನ್ನು ತಿಳಿದುಕೊಳ್ಳಲಿಲ್ಲ. ನಾವು ವಿಷಯವನ್ನು ತಿಳಿಸುವುದಕ್ಕೆ ಪ್ರಯತ್ನ ಮಾಡಿದ್ದನ್ನು ಇವರು ಅರ್ಥ ಮಾಡಿಕೊಳ್ಳಲಿಲ್ಲ. ಆ ಬಿಲ್ ಪಾಸ್ ಮಾಡಿದ ನಂತರ ಒಂದು ಖಾಸಗಿ ಕಾಲೇಜಿನ ಆಡಳಿತ ಮಂಡಳಿಯವರು ಒಂದು ಹೇಳಿಕೆಯನ್ನು ಕೊಟ್ಟರು. ಅದರಲ್ಲಿ ಬೇರೆ ಬೇರೆ ರೀತಿಯಲ್ಲಿ ಕಂಡೀಷನ್ ಹಾಕಿದ್ದಾರೆ. ಜೈಲು ಶಿಕ್ಷೆಯಲ್ಲಿ ರಿಯಾಯಿತಿ ಇದೆಯೇ ಎಂದು ಮಾನ್ಯ ಜಾಲಪ್ಪನವರು ಕೇಳಿದರು. ಈಗ ಜಾಲಪ್ಪನವರಿಗೆ ಮಾತ್ರ ಅಲ್ಲ, ಎಲ್ಲಾ ಖಾಸಗಿ ಕಾಲೇಜುಗಳಿಗೆ ಈ ಒಂದು ವ್ಯವಸ್ಥೆಯಲ್ಲಿ ಇವರು ರಿಯಾಯಿತಿಯನ್ನು ಕೊಟ್ಟಾಗಿದೆ. ಇದನ್ನು ಕಳೆದ ವರ್ಷದಲ್ಲಿ ವಿವಿಧ ಕಾಲೇಜುಗಳಲ್ಲಿ 1,20,000 ರಿಂದ 1,88,000 ಶುಲ್ಕ ಎಂದು ಹೇಳಿದ್ದನ್ನು ಈ ವರ್ಷ ಯಾವ ರೀತಿಯಲ್ಲಿ

ತಂದರು? ಮೊನ್ನೆ ಎಲ್ಲಾ ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದಾಗ ಮಾನ್ಯ ಧರ್ಮಸಿಂಗ್‌ರವರು, ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿ ನಾವೆಲ್ಲಾ ಹೋಗಿದ್ದೆವು. ಅಲ್ಲಿ ಕೇವಲ ಚರ್ಚೆಯಾಗಿದ್ದು ಒಂದೇ ವಿಷಯ, ಪಿ.ಯು.ಸಿ. ಮಾರ್ಕ್ಸ್ ಅನ್ನು ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದನ್ನು ಬಿಟ್ಟರೆ ಬೇರೆ ವಿಷಯ ಚರ್ಚೆಯಾಗಲಿಲ್ಲ. ಆದರೆ ನಾವು ಒಪ್ಪಿ ಬಂದಿದ್ದೇವೆ ಎನ್ನುವಂತಹ ಮಾತು ಬಂತು, ಆದರೆ ನಾವು ಒಪ್ಪಲಿಲ್ಲ. ನಮಗೆ ನಿಮ್ಮ ಪಕ್ಷದ ಎಂದರೆ, ಭಾರತೀಯ ಜನತಾ ಪಕ್ಷದ ಶಾಸಕರುಗಳೇ ಬಂದು ಕೇಳಿದರು. ನೀವು ಹೇಗೆ ಇದಕ್ಕೆ ಒಪ್ಪಿದಿರಿ ಎಂದು. ಪ್ರಾಯಶಃ ಇವತ್ತು ಅವರು ನೋವನ್ನು ಅನುಭವಿಸುತ್ತಿದ್ದಾರೆ, ಏಕೆಂದರೆ ಸರ್ಕಾರ ಬಿಲ್ ಅನ್ನು ತಂದಾಗಿದೆ. ಇದು ಶಾಸಕಾಂಗ ಪಕ್ಷದಲ್ಲಿ ಚರ್ಚೆಯಾಗಿಲ್ಲ, ಅದು ಬಿಡಿ. ಇದು ಶಾಸಕಾಂಗ ಪಕ್ಷದಲ್ಲಿ ಚರ್ಚೆಯಾಗದೇ ನೇರವಾಗಿ ಇಲ್ಲಿಗೆ ಬಂದಿದೆ. ಕ್ಯಾಬಿನೇಟ್ ಮಂತ್ರಿಗಳಿಗೂ ಕೂಡ ಇದು ಏನಾಗುತ್ತಿದೆ ಎನ್ನುವುದು ಗೊತ್ತಿಲ್ಲ. ಅಂತಹ ವಿಷಯವನ್ನು ನಾವು ಇಲ್ಲಿ ತಂದು ಚರ್ಚೆಯನ್ನು ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ಇವರು ಪುನಃ ಪಿ.ಯು.ಸಿ. ಮಾರ್ಕ್ಸ್ ಅನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯಾಗಬೇಕು. ತಮಿಳುನಾಡಿನಲ್ಲಿ ಯಾವ ರೀತಿಯಲ್ಲಾಗುತ್ತದೆ. ನಮಗೆ ಬೇರೆ ರಾಜ್ಯದ್ದು ಬೇಡ. ವ್ಯವಸ್ಥೆ ಏನಾಗಿದೆ ಎಂದರೆ ಸಿ.ಇ.ಟಿ. ಮಾರ್ಕ್ಸ್ ಅನ್ನು ತೆಗೆದುಕೊಳ್ಳುವುದು ಮಾಡಿರುವಂತಹ ಉದ್ದೇಶ ಏನೆಂದರೆ, ಇಲ್ಲಿ ಸೆಂಟ್ರಲ್ ಸಿಲಬಸ್ ಇದೆ. ಸ್ಟೇಟ್ ಸಿಲಬಸ್ ಇದೆ. ಬೇರೆ ಬೇರೆ ಸಿಲಬಸ್ ಇದ್ದುದ್ದರಿಂದ ಸಿ.ಇ.ಟಿ. ಮಾರ್ಕ್ಸ್ ತೆಗೆದುಕೊಳ್ಳಬೇಕು ಎಂದು ಇದೆ. ಈಗ ಕೇವಲ ಸಿ.ಇ.ಟಿ. ಮಾರ್ಕ್ಸ್ ಅನ್ನು ತೆಗೆದುಕೊಂಡಿರುವುದನ್ನು ನೋಡಿದರೆ ಸಿಟಿಯಲ್ಲಿ ಸೆಂಟ್ರಲ್ ಸಿಲಬಸ್ ಇರುವವರು ಜಾಸ್ತಿ ಮಾರ್ಕ್ಸ್ ಅನ್ನು ತೆಗೆಯುತ್ತಾರೆ. ಗ್ರಾಮೀಣ ಪ್ರದೇಶದಿಂದ ಬಂದಿರುವವರಿಗೆ ಸಿ.ಇ.ಟಿ.ಯಲ್ಲಿ ಜಾಸ್ತಿ ಮಾರ್ಕ್ ಅನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೋಸ್ಕರ ಅವರಿಗೆ ಲಾಭವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೋಸ್ಕರ ಪುನಃ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇದರಲ್ಲಿ ಪಿ.ಯು.ಸಿ. ಮಾರ್ಕ್ ಸೇರಿಸುವಂತಹ ವ್ಯವಸ್ಥೆಯಾಗಬೇಕಾಗಿದೆ. ಮತ್ತೆ ಈಗ ಕಾಮೆಡ್–ಕೆ ಮತ್ತು ಸಿ.ಇ.ಟಿ. ಪರೀಕ್ಷೆ ಎರಡು ಕಡೆಯಲ್ಲಿ ಆಗಿದೆ. ಮಾನ್ಯ ಮಾಧುಸ್ವಾಮಿಯವರು ಸುಪ್ರೀಂ ಕೋರ್ಟ್ ಆದೇಶವನ್ನು ಓದಿ ಹೇಳಿದರು. ಅದನ್ನು ನಾನು ಪುನಃ ಓದುವುದಕ್ಕೆ ಹೋಗುವುದಿಲ್ಲ. ಸುಪ್ರೀಂ ಕೋರ್ಟ್‌ನವರು ಪುನಃ ಇದಕ್ಕೆ ಒಪ್ಪುತ್ತಾರಾ? ಒಂದು ವೇಳೆ ಸಿ.ಇ.ಟಿ. ಯಲ್ಲಿ ಎಲ್ಲರಿಗೂ ಸೀಟು ಕೊಡುವುದ ಕ್ಕಾಗುವುದಿಲ್ಲ. ಏಕೆಂದರೆ ಎಂಜಿನಿಯರಿಂಗ್‌ನಲ್ಲಿ ಎಲ್ಲಾ ಸೀಟ್ ಫುಲ್ ಆಗುವುದಿಲ್ಲ. ಅದಕ್ಕೋಸ್ಕರ ಸಿ.ಇ.ಟಿ.ಗೆ ಜಾಸ್ತಿ ಸೀಟನ್ನು ಕೊಟ್ಟಿದ್ದಾರೆ. ಎಂಜಿನಿಯರಿಂಗ್‌ನಲ್ಲಿ ಎಲ್ಲಾ ಸೀಟು ಫುಲ್ ಆಗುವುದಾಗಿದ್ದರೆ ಸಿ.ಇ.ಟಿ.ಗೆ ಇವರು ಕೊಡುತ್ತಿರಲಿಲ್ಲ. ಇವತ್ತು ಹೆಚ್ಚುವರಿ ಸೀಟಿನಲ್ಲಿ ಉಳಿಕೆಯಾದರೆ ಪುನಃ ಇವರು ಹಂಚಿಕೆ ಮಾಡಿಕೊಳ್ಳುತ್ತಾರೆ. ಖಾಸಗಿ ಕಾಲೇಜಿನವರಿಗೆ ಕೊಡುವ ವ್ಯವಸ್ಥೆ ಆಗುತ್ತದೆ. ಇನ್ನು ಮಾನ್ಯ ಡಾ: ಆಚಾರ್ಯರವರು ಯಾವ್ಯಾವ ಮ್ಯಾನೇಜ್‌ಮೆಂಟ್‌ಗಳಿಗೆ, ಎಷ್ಟು ಸರ್ಕಾರಿ

ಕಾಲೇಜುಗಳಿಗೆ ಎಷ್ಟು ಪರ್ಸಟೇಂಜ್ ಸೀಟುಗಳು ಎಂದು ಓದಿದರು. 40 ಪರ್ಸೆಂಟ್ ರೂ. 15,000ಕ್ಕೆ, 20 ಪರ್ಸೆಂಟ್ ರೂ. 85,000ಕ್ಕೆ ಪುನಃ ಎನ್‌ಆರ್‌ವಿ ರೂ. 15,000ಗೆ ಮೆಡಿಕಲ್ ಕಾಲೇಜು ಸೀಟುಗಳು ಪುನಃ ಬಂದಾಗ 35,000ಕ್ಕೆ 25,000. ಮತ್ತೆ ಉಳಿದದ್ದು 25, 25 ಎಂದರೆ ರೂ. 2,00,000ಗೆ ಅದು 50 ಪರ್ಸೆಂಟ್ ಆಯಿತು. ನೀವು ನಮಗೆ ಸ್ಲಿಟ್ ಮಾಡಿ ಹೇಳಿರುವುದು ಬಿಟ್ಟರೆ ಟೋಟಲ್ 50 ಪರ್ಸೆಂಟ್ ರೂ. 2,90,000ಕ್ಕೆ ನಾನು ಅದಕ್ಕೆ ನೀವು ಫಿಗರ್ಸ್ ಅನನು ಕೊಡುವಾಗ ಮೊದಲು ಕೇಳಿದ್ದು, ಹೋದ ವರ್ಷದ ಫೀಜ್ ಸ್ಟ್ರಕ್ಚರ್ ಬಗ್ಗೆ ಕಂಪಾರಿಟಿವ್ ಫಿಗರ್ ಕೊಡಿ ಎಂದು. ಹೋದ ವರ್ಷ ರೂ. 35,000 ಫಸ್ಟ್ ಸ್ಲ್ಯಾಬ್ ಇತ್ತು. ಸೆಕೆಂಡ್ ಸ್ಲ್ಯಾಬ್ ರೂ. 1,65,000 ಇತ್ತು. ಆದರೆ ಈ ಸಲ ಸ್ಟೇಟ್ ಆಗಿ ರೂ. 35,000 ದಿಂದ ರೂ. 2,90,000ಗೆ ಹೋಯಿತು. ಎಂದರೆ ಎಲ್ಲಿಂದ ಎಲ್ಲಿಗೆ ಹೋಯಿತು? ನೀವು ಸಿ.ಇ.ಟಿ.ಯಲ್ಲಿ ಕೊಟ್ಟು ತೆಗೆದುಕೊಳ್ಳದೇ ಇರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ. ನೀವು ಇವತ್ತು ಹೆಚ್ಚು ಸೀಟನ್ನು ಮಾತ್ರ ಸಿ.ಇ.ಟಿ.ಗೆ ತೆಗೆದುಕೊಂಡಿರುವುದನ್ನು ಬಿಟ್ಟರೆ ಪುನಃ ಖಾಸಗಿ ಮ್ಯಾನೇಜ್‌ಮೆಂಟ್‌ನವರಿಗೆ ಹೆಚ್ಚು ಸೀಟು ಬಿಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದೀರಿ. ನೀವೇ ಸಿ.ಇ.ಟಿ. ಮುಖಾಂತರ ಕೂಡ ಈ ಸೀಟನ್ನು ತೆಗೆದುಕೊಂಡರೂ ಸಹ ಆ ಸೀಟಿಗೆ ಯಾರೂ ಬರುವುದಿಲ್ಲ. ರೂ. 2,95,000ಗೆ ಯಾರೂ ಮುಂದೆ ಬರುವುದಿಲ್ಲ. ನಾನು ಈಗ ಮಾನ್ಯ ವಿಶ್ವೇಶ್ವರ ಹೆಗಡೆಯವರು ಕಳೆದ ಬಾರಿ ಮಾತನಾಡಿದ್ದನ್ನು ಒಂದೇ ಒಂದು ಸೆಂಟೆನ್ಸ್ ಅನ್ನು ಓದುತ್ತೇನೆ. "ಮುರುಗೋಡು ರಾಜೀನಾಮೆ ಕೊಟ್ಟರು ಅವರು ರಾಜೀನಾಮೆ ಕೊಡುವುದಕ್ಕಿಂತ ಮೊದಲೇ ಫೀಜ್ ಸ್ಟ್ರಕ್ಚರ್ ಅನ್ನು ಅನೌನ್ಸ್ ಮಾಡಿದರು. ಇಂಜಿನಿಯರಿಂಗ್‌ಗೆ ರೂ. 30,000 ಎಂದು ಮಾಡಿದರು. ಮೆಡಿಕಲ್‌ಗೆ 1,52,000 ರೂಪಾಯಿ ಎಂದು ಬೇರೆ ಬೇರೆ ಕಡೆ ಮಾಡಿದರು. ಇನ್ನುಳಿದ ಏಳು ಕಾಲೇಜುಗಳಿಗೆ 2,50,000 ಎಂದು ಮಾಡಿದರು. ವಿದ್ಯಾರ್ಥಿಗಳಿಗೆ ಈ ಫೀಜ್ ಅನ್ನು ತುಂಬುವುದಕ್ಕೆ ಆಗುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿಲ್ಲವೇ? ಮತ್ತು ಇಡೀ ಸದನಕ್ಕೆ ಗೊತ್ತಿದೆ" ಎಂದು ಅಷ್ಟು ಕಡಿಮೆ ಇದ್ದರೂ ಸಹ ಹೇಳಿದರು. ಆದರೆ ಇವತ್ತು ನೀವು ರೂ. 2,90,000ಕ್ಕೆ ಒಪ್ಪಿದ್ದೀರಿ. ಅಂದು ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದು, ಏನು ಹೇಳಿದರು ಎಂದೂ ಕೂಡ ಓದುತ್ತೇನೆ. "ಫೀಜ್" ಸ್ಟ್ರಕ್ಚರ್ ಏನಿದೆ, ಇದರಿಂದ ರಾಜ್ಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವುದಿಲ್ಲ ಎಂಬುದು ಬಹಳ ಸ್ಪಷ್ಟವಾಗಿ ಈ ಮನೆಯಲ್ಲಿ ಚರ್ಚೆ ಮಾಡಿ ಒಕ್ಕೊರಲಿನಿಂದ ನಾವು ಒಪ್ಪಿಕೊಂಡೆವು. ಈ ರಾಜ್ಯದಲ್ಲಿ ಯಾವುದೇ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮ್ಯಾನೇಜ್‌ಮೆಂಟ್ ಕೋಟಾ ಎಷ್ಟಿರಬೇಕು ಸರ್ಕಾರದ್ದು ಎಷ್ಟು ಇರಬೇಕು ಎನ್ನುವುದನ್ನು ಯಾರೂ ಕೂಡ ಚರ್ಚೆ ಮಾಡಿಲ್ಲವೆಂದು ಹೇಳುತ್ತಾ, ಕೊನೆಯಲ್ಲಿ ಹೇಳುತ್ತಾರೆ, ಏನಾದರೂ ಮಾಡುವುದಾದರೆ ಯಾವ ಒಂದು ಮುರಗೋಡು ಸಮಿತಿ ಕೊಟ್ಟಂತಹ ಫೀಜ್ ಸ್ಟ್ರಕ್ಚರ್ ಮತ್ತು ಸರ್ಕಾರ ನಿಗದಿ ಮಾಡಿದಂತಹ ಫೀಜ್ ಸ್ಟ್ರಕ್ಚರ್ ವ್ಯತ್ಯಾಸ ಏನಿದೆ ಅದನ್ನು ನೀವು ತುಂಬಿಕೊಟ್ಟಾಗ ಮಾತ್ರ ಈ ಮೆರಿಟ್ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು

ಹೇಳುತ್ತಾರೆ. ಅವತ್ತು ನೀವು ಕೇಳಿದ್ದೀರಿ. ಹೆಚ್ಚುವರಿ ಫೀಜ್ ಇರುವುದನ್ನು ನೀವು ಸರ್ಕಾರದವರು ತುಂಬಿಕೊಡಿ ಎಂದು ಹೇಳಿದಿರಿ. ಇದು ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಕುಳಿತಕೊಂಡು ಹೇಳಿರುವಂತಾದ್ದು. ಈಗ ನೀವು ತುಂಬಿಕೊಡುತ್ತೀರಾ ಎಂದು ಹೇಳಿ. ನೀವು ತುಂಬಿಕೊಡುವುದಾದರೆ ನಾವು ಈ ಫೀಜ್ ಸ್ಟಕ್ಚರ್‌ಗೆ ಒಪ್ಪಿಕೊಳ್ಳುತ್ತೇವೆ. ನೀವು ತುಂಬಿ ಕೊಡದೇ ಹೋದರೆ ಮಕ್ಕಳಿಗೆ ಈ ಫೀಜ್ ಸ್ಟಕ್ಚರ್ ಪ್ರಕಾರ ಕಟ್ಟುವುದಕ್ಕಾಗುವುದಿಲ್ಲ. "ಈ ಬಿಲ್ಲನ್ನು ದಯವಿಟ್ಟು ಗೌರವಯುತವಾಗಿ ವಾಪಸ್ಸು ತೆಗೆದುಕೊಳ್ಳಿ. ನಾಳೆ ಇತಿಹಾಸದಲ್ಲಿ ಕೊನೇ ಗಳಿಗೆಯಲ್ಲಿ ಮೂರು ಕಾಸಿನ ಬೆಲೆ ಇಲ್ಲದಿರುವಂತಹ ಈ ಮಸೂದೆಯನ್ನು ತರುವುದರ ಮೂಲಕ ಮ್ಯಾನೇಜ್‌ಮೆಂಟ್ ಜೊತೆಯಲ್ಲಿ ಕೈ ಜೋಡಿಸುವಂತಹ ಕೆಲಸವನ್ನು ಈ ಸರ್ಕಾರ ಮಾಡಿತ್ತು ಎನ್ನುವ ಅಪಕೀರ್ತಿಗೆ ಒಳಗಾಗದೇ ಗೌರವಯುತವಾಗಿ ಬೇಷರತ್ತಾಗಿ ನೀವು ತಂದಿರುವ ಈ ಮಸೂದೆಯನ್ನು ವಾಪಸ್ಸು ಪಡೆದು ಈ ಸಹಾಯಧನವನ್ನು ಕೊಡುವುದರ ಮೂಲಕ, ಆ 59 ಕೋಟಿ ರೂಪಾಯಿಗಳನ್ನು ಭರ್ತಿ ಮಾಡುವುದರ ಮೂಲಕ ಎಂಜಿನಿಯರಿಂಗ್ ಮತ್ತು ಡೆಂಟಲ್ ಓದುವಂತಹ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದಕ್ಕೆ ನೀವು ಮುಂದು ಬರಬೇಕು ಎನ್ನುವಂತಹ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದರು. ಇದನ್ನು ನಾವ್ಯಾರು ಹೇಳಿದ್ದಲ್ಲ. ಅದನ್ನು ಪುನಃ ನಿಮಗೆ ನೆನಪು ಮಾಡಿಕೊಡುತ್ತಿದ್ದೇನೆ. ನೀವು ಆ ಹಣವನ್ನು ಭರ್ತಿ ಮಾಡಿ ಕೊಡಬೇಕಾಗುತ್ತದೆ ಎಂದು ಹೇಳುತ್ತಾ, ನಾನು ಈ ಬಿಲ್ ಅನ್ನು ನೀವು ವಾಪಸ್ಸು ಪಡೆಯಬೇಕು ಎಂದು ಒತ್ತಾಯವನ್ನು ಮಾಡುತ್ತೇನೆ. ಇಲ್ಲದೇ ಇದ್ದರೆ ನನ್ನ ಎಲ್ಲಾ ವಿರೋಧ ಪಕ್ಷದ ಸಹೋದ್ಯೋಗಿಗಳು ಏನು ಹೇಳಿದ್ದಾರೆ, ಹೋದ ಬಾರಿ ಯಡಿಯೂರಪ್ಪನವರು ಹೋದ ಸಲ ಹೇಳಿದ ಹಾಗೆ ಮ್ಯಾನೇಜ್‌ಮೆಂಟ್ ಜೊತೆ ಕೈಜೋಡಿಸಿಕೊಂಡು ಈ ವ್ಯವಸ್ಥೆಯನ್ನು ಮಾಡುತ್ತಿದ್ದೀರಿ ಎಂದು ನಮಗೆ ಅನುಮಾನ ಬರುತ್ತಿದೆ. ದಯವಿಟ್ಟು ಈ ಬಿಲ್ ಅನ್ನು ಪಾಸ್ ಮಾಡದೇ ವಾಪಸ್ಸು ತೆಗೆದುಕೊಳ್ಳಿ. ಇಲ್ಲದೆ ಇದ್ದರೆ ನಾವು ಇದಕ್ಕೆ ವಿರೋಧವನ್ನು ಮಾಡುತ್ತೇವೆ ಎಂದು ಹೇಳಲು ಬಯಸುತ್ತೇನೆ.

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ನಿಮಿಷ ಮಾತನಾಡುತ್ತೇನೆ.

(ಅಡಚಣೆ)

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಡಿವಿಜನ್‌ಗೆ ಪ್ರೆಸ್ ಮಾಡಿ ಬಿಡಿ.

ಅಧ್ಯಕ್ಷರು : ಮೊದಲು ಅವರು ಉತ್ತರ ಕೊಡಲಿ.

ಒಬ್ಬರು ಮಾನ್ಯ ಸದಸ್ಯರು : ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಬಿಲ್‌ಗೆ ಅನ್ಸರ್ ಮಾಡಲಿ, ಆಮೇಲೆ ಇದ್ದೇ ಇದೆಯಲ್ಲಾ.

(ಅಡಚಣೆ)

SRI K.R. RAMESHKUMAR : Put it to the vote of the House. Sir, it is binding on you.

ಅಧ್ಯಕ್ಷರು : ಈಗ ನೀವು ಈ ರೀತಿ ಕೇಳುವುದು ಸರಿಯಲ್ಲ. ಚರ್ಚೆಯಾಗುತ್ತಿದೆ ಆದಾದ ಮೇಲೆ ಉತ್ತರ ಕೊಡಬೇಕು. ಉತ್ತರ ಕೊಟ್ಟಾಗ ಮೇಲೆ ಓಟಿಂಗ್ ಆಗಬೇಕು.

(ಅಡಚಣೆ)

ಅಧ್ಯಕ್ಷರು : ಇಲ್ಲ. ಇಲ್ಲ. ಚರ್ಚೆಯಾಗಿದೆ, ಎಲ್ಲಾ ಮಾತನಾಡಿದ್ದೀರಿ, ಬೇರೆ ಬೇರೆ ಪಕ್ಷದ ಮುಖಂಡರುಗಳು, ವಿರೋಧ ಪಕ್ಷದ ನಾಯಕರು ಅವರ ಪಕ್ಷದ ಪರವಾಗಿ ಮಾತನಾಡಿದ್ದಾರೆ. ಅವರು ಉತ್ತರ ಕೊಡಲಿ.

(ಅಡಚಣೆ)

MR. SPEAKER : This is not the time. ಈಗ ನಾನು ಹೇಳುವುದು ಅವರು ಉತ್ತರ ಹೇಳಲಿ. ಅವರು ಉತ್ತರ ಹೇಳುವಾಗ ಬೇಕಾದರೆ ಬೆಲ್ ವಾಪಸ್ಸು ತೆಗೆದುಕೊಳ್ಳಬಹುದು. ಅಮೆಂಡ್‌ಮೆಂಟ್ ಮಾಡಿ ಮೂವ್ ಮಾಡಬಹುದು. ಏನು ಬೇಕಾದರೂ ಮಾಡಬಹುದು. ಆದುದರಿಂದ ಉತ್ತರ ಹೇಳಲಿ. ನಂತರ ತಾವು ಹೇಳಿದ ರೀತಿಯಲ್ಲಿ division ಕೇಳಬಹುದು. That is the right time. ಶಂಕರಮೂರ್ತಿಯವರೇ ಉತ್ತರ ಹೇಳಿ.

(ಅಡಚಣೆ)

ಅಧ್ಯಕ್ಷರು : ದಯಮಾಡಿ ನೀವು ಸಹಕರಿಸಬೇಕು. This is not the time. ಸ್ವಾಮಿ ಏನು ಹೊಡೆಯುತ್ತೀರಾ ನನಗೆ? ವಿರೋಧ ಪಕ್ಷದ ನಾಯಕರು ಬಂದು ಹೊಡೆಯುವ ಹಾಗೆ ಇದ್ದರೆ ಹೊಡೆಯಿರಿ. ನಿಮ್ಮ ಮಾತು ನಿಮ್ಮ ಧಾಟಿ ಯಾವುದೂ ಸರಿಯಿಲ್ಲ. ಇದು ಸಮಯ ಅಲ್ಲ, ಈಗ ಅವರು ಉತ್ತರ ಕೊಡಬೇಕು. ಉತ್ತರ ಕೊಟ್ಟಾಗ ಮೇಲೆ ಕೇಳಿ. ಉತ್ತರ ಕೊಟ್ಟು ಮಂಡನೆ ಮಾಡುವಾಗ ಕೇಳಿ.

(ಅಡಚಣೆ)

ಅಧ್ಯಕ್ಷರು : ಇದು ಸರಿಯಲ್ಲ. ಇದು ಸರಿಯಾದ ಕ್ರಮವಲ್ಲ. ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು. ನಿಯಮಾವಳಿಗಳಲ್ಲಿ ಏನು ಇದೆ ನೋಡಿ. ನಿಯಮ 46ರಲ್ಲಿ "ಒಂದು ಚರ್ಚೆಯು ಮುಕ್ತಾಯವಾದ ಮೇಲೆ ಅಧ್ಯಕ್ಷರು ಚರ್ಚೆಯ ವಿಷಯವನ್ನು ಸಭೆಯ ಮುಂದೆ ಮಂಡಿಸತಕ್ಕುದು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು, "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂದಾಗಿಯೂ ತಿಳಿಸಬೇಕು. ಅಧ್ಯಕ್ಷರು, ಆನಂತರ ತೀರ್ಮಾನವು "ಹೌದು" ಎಂದು ಹೇಳುವವರಿಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎಂದು ಹೇಳುವವರಿಗೆ) ಅನುಕೂಲವಾಗಿದೆಯೆಂದು ನನಗೆ ತೋರುತ್ತದೆ ಎಂದು ತಿಳಿಯತಕ್ಕುದು, ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ

ಅಭಿಪ್ರಾಯವನ್ನು ಪ್ರತಿಭಟಿಸದಿದ್ದಲ್ಲಿ, ಅವರ ತೀರ್ಮಾನವು "ಹೌದು" ಎನ್ನುವವರಿಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎನ್ನುವವರಿಗೆ) ಅನುಕೂಲವಾಗಿದೆ ಎಂದು ಎರಡು ಸಲ ಹೇಳತಕ್ಕದ್ದು ಮತ್ತು ಸದನದ ಮುಂದೆ ತೀರ್ಮಾನಕ್ಕೆ ಬಂದಿರುವ ವಿಚಾರವನ್ನು ಅದಕ್ಕೆ ತಕ್ಕಂತೆ ತೀರ್ಮಾನಿಸತಕ್ಕುದು. ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸಿದ್ದಲ್ಲಿ ಮತದ ಎಣಿಕೆ ಗಂಟೆಯನ್ನು ಎರಡು ನಿಮಿಷಗಳವರೆಗೆ ಬಾರಿಸುವಂತೆ ವ್ಯವಸ್ಥೆ ಮಾಡತಕ್ಕದ್ದು". ಈ ರೀತಿ ನೀವು ಸುಮ್ಮನೆ ಮಾಡುವಂಥಾದ್ದು ಸರಿಯಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುತ್ತಾರೆ. ಅವರು ಉತ್ತರ ಹೇಳಿದ ಮೇಲೆ, ಅವರಿಗೆ ಮೆಜಾರಿಟಿ ಇಲ್ಲದೇ ಹೋದರೆ, ಆ ಓಟಿಂಗ್ ಡಿವಿಷನ್ ಕೇಳಿದಾಗ ಮೆಜಾರಿಟಿ ಇಲ್ಲದೇ ಹೋದರೆ ಬಿದ್ದು ಹೋಗುತ್ತದೆ. ಏನು ಮಾಡುವುದಕ್ಕೆ ಆಗುತ್ತದೆ? ಇರಲಿ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಉತ್ತರ ಬೇಕಾಗಿಲ್ಲ.

ಅಧ್ಯಕ್ಷರು : ನಿಮಗೆ ಉತ್ತರ ಬೇಡವೆಂದು ಹೇಳುವ ಅಧಿಕಾರ ಇಲ್ಲ. ಈಗ ಮಾನ್ಯ ಮಂತ್ರಿಯವರು ನಿಯಮಾನುಸಾರವಾಗಿ ಉತ್ತರವನ್ನು ಹೇಳಬೇಕು. ಆನಂತರ ನಾನು ಪ್ರಸ್ತಾಪವನ್ನು ಮತಕ್ಕೆ ಹಾಕುತ್ತೇನೆ. ಆ ಸಂದರ್ಭದಲ್ಲಿ ನೀವು ಡಿವಿಜನ್ ಕೇಳಬೇಕು. ನಿಯಮಗಳು ಸ್ಪಷ್ಟವಾಗಿ ಇವೆ, ತಾವುಗಳು ಏಕೆ ಹೀಗೆ ಮಾಡುತ್ತೀರಿ?

(ಅಡಚಣೆ)

ಅಧ್ಯಕ್ಷರು : ತಾವೆಲ್ಲರೂ ಹಿರಿಯ ಸದಸ್ಯರುಗಳು ಇದ್ದೀರಿ. ಮಾನ್ಯ ಮಂತ್ರಿಗಳೇ, ಉತ್ತರ ಹೇಳಿ. ಇದು ಸರಿಯಲ್ಲ. ಇಲ್ಲಿ ಅವರಿಗೆ ಮೆಜಾರಿಟಿ ಇದ್ದರೆ ಪಾಸು ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ವಿಧೇಯಕ ಹೋಗುತ್ತದೆ, ನಿಯಮಾನುಸಾರವಾಗಿ ನಡೆಯಬೇಕಾಗುತ್ತದೆ. ತಾವುಗಳು ಇದಕ್ಕೆ ಸಹಕರಿಸಬೇಕಾಗುತ್ತದೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಮಾನ್ಯ ಅಧ್ಯಕ್ಷರೆ, ಇದು ಯಾವುದು ಸ್ವಾಮಿ? ಪ್ರಜಾಪ್ರಭುತ್ವ ಇದೇನಾ? ಇದನ್ನು ನಾವು ಎಲ್ಲೂ ಕೇಳಿರಲಿಲ್ಲ. ಇದು ಯಾವ ರಾಜ್ಯದಲ್ಲಿದೆ?

(ಅಡಚಣೆ)

ಅಧ್ಯಕ್ಷರು : ಈಗ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುತ್ತಾರೆ. ದಯಮಾಡಿ ಕೇಳಿ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಸರ್ಕಾರದ ಪರವಾಗಿ ಮಾತನಾಡುತ್ತಾರೆ. ಅವರು ಏನು ಹೇಳುತ್ತಾರೆಂಬುದನ್ನು ಕೇಳಿ. ನಿಯಮಗಳು ಬಹಳ ಸ್ಪಷ್ಟವಾಗಿ ಇದೆ. ದಯಮಾಡಿ ಕೇಳಿ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, XX

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಅದು ಜನರಿಗೆ ಗೊತ್ತಿದೆ ಬಿಡಿ. ಅದು ಜನರಿಗೂ ಗೊತ್ತಾಗಿದೆ. ಅದು ಏನೂ ಇಲ್ಲ. ಆದರೆ ನಿಯಮಾವಳಿಯ ಪ್ರಕಾರ ನೀವು ಈ ರೀತಿಯಾಗಿ ಮಾಡುವಂಥಾದ್ದು ಸರಿಯಲ್ಲ.

ಮಾನ್ಯ ಸದಸ್ಯರು : ನೀವು ಮೊದಲು ಸಭಾಧ್ಯಕ್ಷರಿಗೆ ಗೌರವವನ್ನು ಕೊಡಿ, ಅದನ್ನು ಮೊದಲು ನೀವು ಕಲಿತುಕೊಳ್ಳಿ. ಸಭಾಧ್ಯಕ್ಷರು ಒಂದು ರೂಲಿಂಗ್ ಅನ್ನು ಕೊಡುತ್ತಿದ್ದಾರೆ. ಇಲ್ಲಿ ಹಿರಿಯರಾಗಿ ನೀವೇ ಇದ್ದೀರಿ. ಅವರ ರೂಲಿಂಗ್‌ಗೆ ಗೌರವವನ್ನು ಕೊಡಿ.

ಅಧ್ಯಕ್ಷರು : ನಾನು ನಿಯಮಗಳನ್ನು ಓದಿ ಹೇಳಿದೆ. ಯಾವ ಸಂದರ್ಭದಲ್ಲಿ ಏನು ಕೇಳಬೇಕೆಂದು ಹೇಳಿದೆ, ಹೀಗೆ ಸುಮ್ಮನೆ ಎದ್ದು ನಿಂತುಕೊಂಡರೆ ಹೇಗೆ?

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾವು ಈಗ ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡುತ್ತಿದ್ದೇವೆ. ಈಗ ಇಲ್ಲಿ ಇರುವಂತಹ ಮಸೂದೆಯ ವಿಚಾರದಲ್ಲಿ ನಿಮ್ಮದೇ ಆದಂತಹ ತಾತ್ವಿಕ ವಿರೋಧವನ್ನು ವ್ಯಕ್ತ ಮಾಡಿದ್ದೀರಿ. ತಾವು ವ್ಯಕ್ತ ಮಾಡುವಂತಹ ಅಭಿಪ್ರಾಯಕ್ಕೆ ತಾವು ಸರ್ವ ಸ್ವಾತಂತ್ರ್ಯರು. ಇದರ ವಿರೋಧವನ್ನು ಮಾಡುವಂಥದ್ದಕ್ಕೂ ಸಹ ಸ್ವಾತಂತ್ರ್ಯರು. ಅದರ ಜೊತೆಗೆ ಯಾರು ಯಾರ ಪರವಾಗಿ ಇದ್ದಾರೆ, ಎಂಬ ಬಗ್ಗೆ ಡಿವಿಷನ್ ಕೇಳುವಂಥಾದ್ದಕ್ಕೂ ನಿಮಗೆ ಹಕ್ಕು ಇದೆ. ಅದನ್ನು ನಾವು ಯಾರೂ ಪ್ರಶ್ನಿಶಿಸುವುದಿಲ್ಲ. ಆದರೆ ಬಂದಿರುವಂತಹ ಪ್ರಶ್ನೆ ಈ ಮಸೂದೆಯನ್ನು ಯಾವ ಉದ್ದೇಶಕ್ಕಾಗಿ ತಂದಿದ್ದೇವೆ, ಈ ಮಸೂದೆಯ ಮೂಲಕವಾಗಿ ಕನ್ನಡ ನಾಡಿನ ಮಕ್ಕಳಿಗೆ ಎಷ್ಟರಮಟ್ಟಿಗೆ ಲಾಭವಾಗುತ್ತದೆ. ಕಳೆದ ಬಾರಿಗೂ ಮತ್ತು ಈ ಬಾರಿಗೂ ಫೀಜ್‌ನ ವಿಷಯದಲ್ಲಿ ಇರತಕ್ಕಂಥ ವ್ಯತ್ಯಾಸಗಳು ಏನು? ಇವುಗಳನ್ನು ಸಂಬಂಧಪಟ್ಟಂತಹ ಸಚಿವರು ಉತ್ತರವನ್ನು ಕೊಡುತ್ತಾರೆ. ಆ ಉತ್ತರವನ್ನು ಕೇಳಿದ ನಂತರ, ಅದು ನಿಮಗೆ ಸಮಾಧಾನವಾಗಲಿಲ್ಲ ವೆಂದರೆ, ಸ್ಪಷ್ಟೀಕರಣವನ್ನು ಕೇಳಬಹುದು.

(ಅಡಚಣೆ)

ಅಧ್ಯಕ್ಷರು : ನಾನು ನಿಯಮಾವಳಿಗಳನ್ನು ಓದಿ ಹೇಳಿದ್ದೇನೆ. ಇಲ್ಲಿ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ.

SRI K.R. RAMESHKUMAR : No. No, Sir, That is not the issue. Sir, I am accusing the Parliamentary Minister of consuming the time of the House to enable your Members to mobilise his stength. That is not fair. ಮಾನ್ಯ ಸಭಾಧ್ಯಕ್ಷರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಒಂದು ಅಧಿಕೃತವಾದಂತಹ ವಿಧೇಯಕ. It is not a non-official Bill.

SRI M.P. PRAKASH : Sir, I take a serious objection to the statement of the former Speaker. Why is he accusing me? I am not

consuming any time. On the contrary. I went there. Some of my own Members were there. I went and consulted the Chief Minister. I consulted the Leader of the Opposition and I was also in touch with them.

SRI K.R. RAMESHKUMAR : Sir, let me have my say.

SRI M.P. PRAKASH : Please for heaven sake. Don't make will allegations against us.

SRI K.R. RAMESHKUMAR : Sir, let me have my say.

SRI M.P. PRAKASH : Kindly listen to me.

SRI K.R. RAMESHKUMAR : Sir, I am submitting to the Chair. Let me have my say.

SRI M.P. PRAKASH : I have not yielded to him, If he has got any objection, let him object. You have also conducted very perfectly.

SRI K.R. RAMESHKUMAR : That is the reason, I am standing now.

SRI M.P. PRAKASH : When I am standing, you are not supposed, to stand, if I have not yielded.

SRI K.R. RAMESHKUMAR : It is alright. I have yielded.

ಶ್ರೀ ಎಂ.ಪಿ. ಪ್ರಕಾಶ್ : ತಾವು ಏನು ಹೇಳಬೇಕೋ ಅದನ್ನು ತಾವು ಹೇಳಿ. ಸನ್ಮಾನ್ಯ ಅಧ್ಯಕ್ಷರೆ, ಅವರು ಏನು ಉತ್ತರವನ್ನು ಕೊಡುತ್ತಾರೆ, ಆ ಉತ್ತರ ಸಮಾಧಾನಕರವಾಗಲಿಲ್ಲವೆಂದರೆ, ಅದಕ್ಕೆ ಸ್ಪಷ್ಟೀಕರಣವನ್ನು ಕೇಳುತ್ತಾರೆ. ಅವರು ಸ್ಪಷ್ಟೀಕರಣವನ್ನು ಕೇಳಿದ ಮೇಲೂ ಸಮಾಧಾನವಾಗಲಿಲ್ಲ ವೆಂದರೆ, ಆಗ ಅವರು ಧ್ವನಿ ಮತಕ್ಕಾದರೂ ಹಾಕಬಹುದು ಅಥವಾ ಸಂಖ್ಯೆಗಳ ಬಲದ ಮೇಲೆ ನಿರ್ಧಾರ ಮಾಡುತ್ತೇವೆಂದು ಬೇಕಾದರೂ ಆಗಬಹುದು. ಇಂತಹ ಸಂದರ್ಭದಲ್ಲಿ ನಾನು ಸತ್ಯವನ್ನೇ ಹೇಳುವಂತಹ ಕೆಲಸವನ್ನು ಮಾಡುತ್ತೇನೆ. ಈಗ ಮಾನ್ಯ ರಮೇಶ್ ಕುಮಾರ್‌ರವರು ಈ ವಿಚಾರದಲ್ಲಿ ನಾವು ಇನ್ನೂ ನಾಲ್ಕಾರು ಜನ ಸದಸ್ಯರು ಮಾತನಾಡುವವರು ಇದ್ದೇವೆ. ಇದಕ್ಕೆ ಏನು ಅಂತಹ ಅವಸರವಿದೆ? ಸೋಮವಾರದ ದಿವಸ ಇದನ್ನು ಏಕೆ ಚರ್ಚೆ ಮಾಡಬಾರದೆಂಬ ಸಲಹೆಯನ್ನು ನೀಡಿದರು. ನಾನು ಅದಕ್ಕೆ 3ನೇ ತಾರೀಖಿನಂದು ಕೌನ್ಸಿಲಿಂಗ್ ಇರುವಂಥಾದ್ದು ಇದೆ. ಆದುದರಿಂದ ಅವರು ಈಗ ಡಿಬೇಟ್ ಅನ್ನು ಕೇಳುತ್ತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿ, ವಿಷಯವನ್ನು ತಿಳಿಸುತ್ತೇನೆಂದು ಹೇಳಿ ನಾನು ಮಾನ್ಯ ಮುಖ್ಯಮಂತ್ರಿಯವರೊಡನೆ

ಸಮಾಲೋಚನೆಯನ್ನು ಮಾಡಿದೆ. ಈ ಮಸೂದೆಯನ್ನು ಬಹಳ ಉತ್ತಮವಾದಂತಹ ರೀತಿಯಲ್ಲಿ ತಂದಿದ್ದೇವೆ. ವಿರೋಧ ಪಕ್ಷದವರಿಗೂ ಮನ ಒಲಿಸಬೇಕಾದಂತಹ ಮಾಹಿತಿ ಇದೆ. ಅದನ್ನೂ ಕೂಡ ಕೊಡಬೇಕಾಗುತ್ತದೆ. 3ನೇ ತಾರೀಖಿನಂದು ಕೌನ್ಸಿಲಿಂಗ್ ಇರುವಂತಹ ಸಂದರ್ಭದಲ್ಲಿ ಮಕ್ಕಳನ್ನು ಬೇರೆ ಕಡೆಗೆ ಮತ್ತೆ ಇನ್ನೊಂದು ತಾರೀಖಿನಂದು ಬನ್ನಿ ಎಂದು ಹೇಳುವಂಥಾದ್ದು ಆಗಬಾರದು. ಇದನ್ನು 17ನೇ ತಾರೀಖಿನೊಳಗಾಗಿ ಮುಗಿಸಬೇಕೆಂದು ಸುಪ್ರೀಂ ಕೋರ್ಟ್‌ನವರ ತೀರ್ಮಾನವಾಗಿರುವ ಕಾರಣಕ್ಕಾಗಿ ಇದನ್ನು ದಯಮಾಡಿ ಮುಗಿಸಿರಿ ಎಂದು ಸಂಬಂಧಪಟ್ಟ ಸಚಿವರಲ್ಲಿ ನಾನು ವಿನಂತಿ ಮಾಡಿಕೊಂಡೆ. ಇದನ್ನು ಮತ್ತೆ ಇಲ್ಲಿಂದ ಮೇಲ್ಮನೆಗೆ ಕಳುಹಿಸಬೇಕಾಗಿದೆ. ಇದು ಮೇಲ್ಮನೆಯಿಂದ ವಾಪಸ್ಸು ಬಂದ ಮೇಲೆ ಮತ್ತೆ ಪಾಸ್ ಆಗಬೇಕು. ಅಲ್ಲಿ ಮೇಲ್ಮನೆಯಲ್ಲಿ ಯಾವ ರೀತಿಯ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೋ, ಗೊತ್ತಿಲ್ಲ. ಈ ಹಿನ್ನೆಲೆಯಲ್ಲಿ ನಾನು ಇಲ್ಲಿ ಇದ್ದಂಥ ಸಂದರ್ಭದಲ್ಲಿ ನನ್ನ ಕೆಲವು ಗೆಳೆಯರು ಬಂದು "ಇನ್ನೂ ನಮ್ಮ ಭಾಗದಲ್ಲಿ ಇರುವಂತಹ ಸದಸ್ಯರುಗಳು ಮಾತನಾಡುಬೇಕೆಂದು ಬಯಸುತ್ತಿದ್ದಾರೆ. ಅವರು ನಿಮ್ಮನ್ನು ಕರೆಯುತ್ತಿದ್ದಾರೆ, ಬನ್ನಿ" ಎಂದು ಕೇಳಿದರು. ನಮ್ ಚೀಫ್ ವಿಪ್‌ನವರೂ ಕೂಡ ಹೇಳಿದರು. ನಾನು ಅವರ ಹತ್ತಿರ ಕುಳಿತುಕೊಂಡು, ಈ ರೀತಿಯ ಸನ್ನಿವೇಶಗಳು ಇದೆ, ಮಾತನಾಡಬೇಕೆಂದು ನಾವು ಮಾತನಾಡುತ್ತಿದ್ದೆವು. ಆಗ ಇಲ್ಲಿ ಗಲಾಟೆಯಾಗುತ್ತಿತ್ತು. ಪ್ರಾಯಶಃ ಇಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇದೆಯೆಂದು, ತಾವು ಡಿವಿಷನ್‌ಗೆ ಪ್ರೆಸ್ ಮಾಡಿರಬಹುದು. ವಿರೋಧಪಕ್ಷದಲ್ಲಿ ನಾವು ಇದ್ದರೂ ಆ ಕೆಲಸವನ್ನು ಮಾಡುತ್ತೇವೆ. ತಮಗೂ ಎಲ್ಲರಿಗೂ ಗೊತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಂಥ ಸಂದರ್ಭದಲ್ಲಿ, ನಮ್ಮ ಆರೋಗ್ಯ ಮಂತ್ರಿಯವರು ಮೂತ್ರಕ್ಕೆ ಎಂದು ಹೊರಗಡೆ ಹೋಗಿದ್ದರು. ಆ ಸಂದರ್ಭದಲ್ಲಿ, ಇವರು ರಾಯಚೂರು ಭಾಗದಿಂದ ಬಂದಿದ್ದಂಥವರು. ಆಗ ಬಿಲ್ ಹಾಕಿ ಸದನದ ಬಾಗಿಲುಗಳನ್ನೆಲ್ಲಾ ಮುಚ್ಚಿ ಬಿಟ್ಟರು. ನಾನು ಹೇಳುತ್ತಿರುವುದನ್ನು ಕೇಳಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಗುತ್ತಿದ್ದಾರೆ. ಆ ಸಂದರ್ಭದಲ್ಲಿ ಅವರು ಬರಬೇಕೆಂದು ಹೇಳಿ, ಅವರು ಇಡೀ ಪ್ಯಾಂಟ್ ಮೇಲೆ ಮೂತ್ರವನ್ನು ಮಾಡಿಕೊಂಡು ಓಡಿಬಂದರು. ಇಲ್ಲಿ ಸದನದ ಬಾಗಿಲನ್ನು ಹಾಕಲಾಗಿತ್ತು. ಆದುದರಿಂದ ನಾವು ಈ ತರಹದ ಎಲ್ಲಾ ಘಟನೆಗಳನ್ನು ನೋಡಿರುವಂಥಾದ್ದು ಇದೆ. ಆ ಕಾರಣಕ್ಕಾಗಿ ಸದಸ್ಯರನ್ನು ಯಾರಾದರೂ ಬನ್ನಿ ಒಳಗಡೆ ಇಲ್ಲಿ ಡಿವಿಷನ್ ಬರುತ್ತಿದೆಯೆಂದು ನಾನು ಒತ್ತಾಯವನ್ನು ಮಾಡಿರುವುದಿಲ್ಲ. ಅವರು ಬಂದದ್ದು ಅಲ್ಲ. ಎಲ್ಲರೂ ಜೊತೆಗೆ ಇದ್ದಾರೆ. ದಯವಿಟ್ಟು ನಮ್ಮ ಬಗ್ಗೆ ತಪ್ಪು ಅಭಿಪ್ರಾಯವನ್ನು ತಾಳಬೇಡಿ. ನಮಗೆ ಬಹು ಸಂಖ್ಯಾಬಲವಿದೆಯೆಂಬುದನ್ನೂ ಸಹ ಈ ಸಂದರ್ಭದಲ್ಲಿ ಹೇಳುತ್ತೇವೆ. ನಮ್ಮ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಅದಕ್ಕೆ ತಾವುಗಳು ಒಪ್ಪಿದರೆ, ಸಂತೋಷ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದನ್ನು ನೀವು ಒಪ್ಪದೇ ಇದ್ದರೆ, ನಿಮ್ಮ ಒಪ್ಪಿಗೆಯ ಪ್ರಕಾರ ಅದನ್ನು ಧ್ವನಿ ಮತಕ್ಕಾದರೂ ಹಾಕಿ, ಅಥವಾ ಅಂಕಿ ಸಂಖ್ಯೆಗಳ ಮೂಲಕ ನಿರ್ಧಾರ ಮಾಡುವುದೆಂದರೂ ಆಗಲಿ. You can press for a division. ಹೊಸ

ಸಂಪ್ರದಾಯವನ್ನು ಮಾಡಬಾರದು. ಒಮ್ಮಿಂದೊಮ್ಮೆಗೆ ಡಿವಿಷನ್ ಮಾಡುತ್ತೇವೆಂದರೆ, ಅದು ಹೊಸ ಸಂಪ್ರದಾಯವಾಗುತ್ತದೆ. ಪ್ರಾಯಶಃ ಇದನ್ನು ಮಾನ್ಯ ರಮೇಶ್‌ಕುಮಾರ್‌ರವರೂ ಕೂಡ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು ಅಧಿಕೃತವಾದಂತಹ ವಿಧೇಯಕ ಆಗಿದೆ. ಸರ್ಕಾರದವರು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ, ಅವರು ಶಾಸಕಾಂಗ ಸಭೆಯಲ್ಲೂ ಚರ್ಚೆ ಮಾಡಿ, ಇದನ್ನು ಪಾಸು ಮಾಡಿಕೊಳ್ಳಬೇಕೆಂದು ಹೇಳಿ ತಂದಿದ್ದಾರೆ. ಅವರ ನಿರ್ಬಂಧದಲ್ಲಿ ನಾವು ಇರುವುದಿಲ್ಲ. ನಮ್ಮ ಅಭಿಪ್ರಾಯಗಳನ್ನು ಹೇಳುವಂತಹ ಸ್ವಾತಂತ್ರ್ಯ ನಮಗೆ ಇರುತ್ತದೆ, ಎನ್ನುವಂಥ ಮಾತನ್ನು ಅವರು ಹೇಳಿದ್ದಾರೆ. ತಾವು ಏನು ರೂಲ್ಸ್ ಅನ್ನು ಓದಿದ್ದೀರಿ. ಅದು ಒಂದು ಬಿಲ್ ಅನ್ನು ಪಾಸ್ ಮಾಡತಕ್ಕಂಥ ಪ್ರೊಸೀಜರ್ ಅಷ್ಟೇ. ಶಂಕರಮೂರ್ತಿಯವರು ಬಹಳ ಉದ್ವೇಗದಲ್ಲಿ ಚರ್ಚೆ ಮಾಡಬೇಕು ಎಂದು ಹೇಳುತ್ತಿದ್ದರು. ನಾನು ಇಷ್ಟೇ ಹೇಳುತ್ತೇನೆ. ಈ ವಿಷಯದಲ್ಲಿ ಆಂತರಿಕವಾಗಿ ನಿಮ್ಮಲ್ಲೇ ಒಮ್ಮತವಿಲ್ಲ. ನಮಗೆ ವಿರೋಧ ಪಕ್ಷವಾಗಿ.......

(ಅಡಚಣೆ)

ಅಧ್ಯಕ್ಷರು : ಅವರು ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು : ನಮ್ಮಲ್ಲಿ ಆಂತರಿಕವಾಗಿ ಒಪ್ಪಿಗೆ ಇಲ್ಲ ಎಂದು ಹೇಳುತ್ತಿದ್ದಾರೆ. ನಮಗೆ ನಿಮ್ಮಿಂದ ಸರ್ಟಿಫಿಕೇಟ್ ಬೇಡ.

(ಅಡಚಣೆ)

ಅಧ್ಯಕ್ಷರು : ಅವರ ಅಭಿಪ್ರಾಯಗಳನ್ನು ಕೇಳಿ. ಏಕೆ ಹಾಗೆ ಮಾಡುತ್ತೀರಿ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸದನದಲ್ಲಿ ಇಂಥ ಒಂದು ಪ್ರಶ್ನೆ ಉದ್ಭವವಾದಾಗ ಆಡಳಿತ ಪಕ್ಷದ ಸದಸ್ಯರ ಸಂಖ್ಯೆ ಹೆಚ್ಚು ಇಲ್ಲದೇ ಇದ್ದಾಗ ವಿರೋಧ ಪಕ್ಷವಾಗಿ ನಾವು ಒಂದು ತೀರ್ಮಾನಕ್ಕೆ ಬರುತ್ತೇವೆ. ಇದನ್ನು ಪಾಸ್ ಮಾಡಿಕೊಂಡು ಹೋಗಬೇಕಾದಂಥ ನೈತಿಕ ಜವಾಬ್ದಾರಿ ಉಳ್ಳವರು ಯಾರಿದ್ದಾರೆ, ಅವರೇ ಇಲ್ಲಿ ಇಲ್ಲದಿದ್ದಾಗ ಅದಕ್ಕೆ ಚರ್ಚೆಯ ಅಗತ್ಯ ಏನಿದೆ? ಅದಕ್ಕೆ ಉತ್ತರ ಏಕೆ ಬೇಕು ನಮಗೆ? ಓಟಿಗೆ ಹಾಕಿ ಎಂದು ಕೇಳುತ್ತೇವೆ ನಾವು, ಅದು ನಮ್ಮ ಹಕ್ಕು. ಕೇಳಬಾರದು ಎಂದು ಎಲ್ಲಾದರೂ ರೂಲ್ಸ್‌ನಲ್ಲಿದ್ದರೆ, ಅದು ಯಾವ ರೂಲ್ಸ್‌ನಲ್ಲಿದೆ ಎಂದು ದಯಮಾಡಿ ಓದಿ.

ಅಧ್ಯಕ್ಷರು : ತಾವು ಈ ಸ್ಥಾನದಲ್ಲಿದ್ದವರು. ತಾವು ಈ ರೀತಿ ಹೇಳಬಾರದು. ನಿಯಮಾವಳಿಗಳ ಪ್ರಕಾರ ಏನಾಗಬೇಕು? ಅದು ನಮ್ಮ ನಿಯಮಾವಳಿಗಳಲ್ಲೂ ಇದೆ. ಸಂಪ್ರದಾಯವಾಗಿಯೂ ಬಂದಿದೆ. ಸಚಿವರು ಉತ್ತರ ಕೊಟ್ಟಾದ ಮೇಲೆ, ಮತಕ್ಕೆ ಹಾಕುವಾಗ ನೀವು ಡಿವಿಷನ್ ಕೇಳಬೇಕು. ಏಕೆ ಹೀಗೆಂದು ಹೇಳುತ್ತೀರಿ ಎಂಬುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನೀವು ನಮ್ಮ ಜೊತೆಗೆ ವಾದಕ್ಕೆ ಇಳಿದರೆ ನಾನು ಅಸಹಾಯಕನಾಗುತ್ತೇನೆ. ನಾನು ಅದೇ ಸ್ಥಾನದಲ್ಲಿ ಕುಳಿತಿದ್ದಾಗ, ಅವಿಶ್ವಾಸ ನಿರ್ಣಯ ಚರ್ಚೆಯಾಗುವಾಗ, ಇದಕ್ಕಿದ್ದಂತೆ ಎದ್ದು ಡಿವಿಷನ್ ಪ್ರೆಸ್ ಮಾಡಿದರು. ದಯಮಾಡಿ ಪ್ರೊಸೀಡಿಂಗ್ಸ್ ತರಿಸಿನೋಡಿ ಡಿವಿಷನ್ ಪ್ರೆಸ್ ಮಾಡಿದ ಮೇಲೆ ಎರಡು ನಿಮಿಷ ಟೈಂ ಕೊಟ್ಟು ತಕ್ಷಣ ಎಲ್ಲಾ ಡೋರ್ಸ್ ಕ್ಲೋಸ್ ಮಾಡಿಸಿದ್ದೇನೆ ನಾನು. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ನಾವು ಡಿವಿಷನ್‌ಗೆ ಪ್ರೆಸ್ ಮಾಡತಕ್ಕಂಥಾದ್ದನ್ನು ಇಂತಹ ಹಂತದಲ್ಲೇ ಕೇಳಬೇಕು ಎಂದು ನಮಗೆ ನಿರ್ಬಂಧ ಹಾಕಲಿಕ್ಕೆ ಬರುವುದಿಲ್ಲ. Where it is specified in the rules? The procedure is to get the Bill passed. ನೀವು ಓದಿದಂಥ ರೂಲ್ಸ್ ಪ್ರೊಸೀಜರ್ ಮಾತ್ರ. ಆದರೆ ನಾವು ಹೇಳುತ್ತೇವೆ, ಯಾರು ಅದರ ಹೊಣೆ ಹೊತ್ತಿದ್ದಾರೋ, ಅವರೇ ಇಲ್ಲಿ ಇಲ್ಲದಿದ್ದಾಗ as an Opposition Party, we want to exploit the situation. What is wrong in it? Is it immoral? Is it a sin?: Is it prohibited under rules?

ಅಧ್ಯಕ್ಷರು : ನೋಡಿ ರಮೇಶ್‌ಕುಮಾರ್‌ರವರೇ, ನಾನು ಯಾವಾಗ ಧ್ವನಿಮತಕ್ಕೆ ಹಾಕುತ್ತೇನೆ. ಓಟಿಗೆ ಹಾಕುತ್ತೇನೆ. ಆ ಸಂದರ್ಭದಲ್ಲಿ ನೀವು ಡಿವಿಷನ್ ಪ್ರೆಸ್ ಮಾಡಬಹುದು. ಇದು ನಡೆದುಕೊಂಡು ಬಂದಿರುವ ಸಂಪ್ರದಾಯ. ನಿಯಮಾವಳಿಗಳಲ್ಲಿ ಕೂಡ ಇದೆ. ಅದನ್ನು ಯಾವಾಗ ಬೇಕಾದರೂ ಹಾಕಬಹುದೇ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅಧ್ಯಕ್ಷರೇ, ದಯಮಾಡಿ ಕೇಳಿ ನೀವು. ಈಗ ಏನಾಯಿತು? ನಾವು ಗದ್ದಲ ಪ್ರಾರಂಭ ಮಾಡಿದೆವು. ಮಾಡಿದ ತಕ್ಷಣ ......

ಅಧ್ಯಕ್ಷರು : ನಿಯಮಾವಳಿಗಳು ಕರೆಕ್ಟ್ ಆಗಿವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಿಮಯಾವಳಿಗಳಿಗೆ ವಿರುದ್ಧವಾಗಿರತಕ್ಕಂಥಾದ್ದನ್ನು ಮಾಡಿ ಎಂದು ನಿಮಗೆ ನಾವೆಂದೂ ಹೇಳುವುದಿಲ್ಲ. ನಿಯಮಾವಳಿಗಳ ಚೌಕಟ್ಟಿನಲ್ಲಿ ನೀವು ಮಾಡಬೇಕಾದ ಕೆಲಸವನ್ನು ಮಾಡಿದರೆ ನಮ್ಮ ಕೆಲಸವೆಲ್ಲಾ ಆಗುತ್ತದೆ. ಅದು ಆಗಲಿಲ್ಲ.

ಅಧ್ಯಕ್ಷರು : ನಿಯಮಾವಳಿಗಳು ಕರೆಕ್ಟ್ ಆಗಿವೆ. ಯಾವ ಸಂದರ್ಭದಲ್ಲಿ ಡಿವಿಷನ್‌ಗೆ ಪ್ರೆಸ್ ಮಾಡಬೇಕು ಎನ್ನುವುದಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅದು ಆಗಲಿಲ್ಲ. ಈ ಪ್ರೋಸೆಸ್ ನಡೆಯುವ ಮಧ್ಯದಲ್ಲಿ 15–20 ಜನ ಸದಸ್ಯರು ಹೊರಗಿನಿಂದ ಬಂದರು. ನಾನು ಒಂದು ಮಾತನ್ನು ಕೇಳುತ್ತೇನೆ. ಮುಖ್ಯ ಸಚೇತಕರನ್ನು ಏಕೆ ಇಟ್ಟಿದ್ದೀರಿ? ಅವರಿಗೆ ಒಂದು ಮಂತ್ರಿಗಿರಿಯ ಜವಾಬ್ದಾರಿಯನ್ನು ಏಕೆ ಕೊಡುತ್ತೀರಿ? The Chief whip is having a status of a Minister of State. Why do you have your Chief Whip? A 3 line whip could have been

issued. ಏಕೆ ನೀವು ವಿಪ್ ಕೊಟ್ಟಿಲ್ಲ? Why did you not mobilise your members? ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಆ ಕೆಲಸವನ್ನು ನಾವು ಮಾಡಬೇಕೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಾಡಿ ಎಂದು ನಾವು ಹೇಳಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅದಕ್ಕೇ ನಾವು ಡಿವಿಷನ್‌ಗೆ ಪ್ರೆಸ್ ಮಾಡಿದ್ದು.

(ಅಡಚಣೆ)

ಅಧ್ಯಕ್ಷರು : ನಾನು ರಮೇಶ್ ಕುಮಾರ್‌ರವರಿಗೆ ಹೇಳುವುದೇನೆಂದರೆ, About whip, it is none of my concern. ಇರುವಂಥ ಪದ್ಧತಿಯೇನೆಂದರೆ, ಒಂದು ಬಿಲ್ ಇಂಟ್ರೊಡ್ಯೂಸ್ ಆದ ಮೇಲೆ, ಅದರ ಮೇಲೆ ಚರ್ಚೆಯಾದ ಮೇಲೆ, ಆ ಚರ್ಚೆಗೆ ಸರ್ಕಾರದವರು ಉತ್ತರ ಕೊಡಬೇಕು. ನಂತರ ಅದನ್ನು ಪಾಸ್ ಮಾಡಬೇಕು ಎಂದಾಗ ನೀವು ಡಿವಿಷನ್ ಕೇಳಬಹುದು. ನಿಮ್ಮವರು ವಿಪ್ ಕೊಟ್ಟಿದ್ದಾರೋ, ಏನು ಮಾಡಿದ್ದಾರೋ ಎನ್ನುವುದೆಲ್ಲಾ, it is none of my concern.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಆ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿದವರು. ಚೀಫ್ ವಿಪ್‌ನ ಜವಾಬ್ದಾರಿ ಏನು ಎನ್ನುವುದು ಆಡಳಿತ ಪಕ್ಷದವರಾದ ನಮಗೆ ಗೊತ್ತಿದೆ, ನಮಗೆ ಅದರ ಅರಿವಿದೆ. ರಿಪ್ಲೈ ಮಾಡದೇ, ಏನು ಕಾರ್ಯ ಕಲಾಪಗಳನ್ನು ಬೇಕಾದರೂ ಮಾಡಬಹುದು ಎಂದು ಇಷ್ಟೊಂದು ಅನುಭವವಿರುವಂಥ ನಿಮ್ಮಂಥವರು ಹೇಳಬಾರದು. ಹಿಂದೆ ಯಾವಾಗ ನಾವು, ರಿಪ್ಲೈ ಕೊಡುವುದಕ್ಕೆ ಮುಂಚೆಯೇ ಡಿವಿಸನ್‌ಗೆ ಕೇಳಿದ್ದೇವೆ, ಉದಾಹರಣೆ ಕೊಡಿ ನೋಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ರಿಪ್ಲೈ ಬೇಡ ಎಂದು ಹೇಳಿ, ನೀವೇ ಇಲ್ಲಿ ಡಿವಿಷನ್ ಪ್ರೆಸ್ ಮಾಡಿರತಕ್ಕಂಥಾದ್ದು ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಿಪ್ಲೈ ಕೊಡುವುದಕ್ಕೆ ಮುಂಚೆ ನಾವು ಯಾವತ್ತೂ ಡಿವಿಷನ್‌ಗೆ ಕೇಳಲಿಲ್ಲ. ಉದಾಹರಣೆ ಕೊಡಿ ನೋಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಕೇಳಲಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ರೀತಿ ಕೇಳಿದ್ದರೆ ರಾಜೀನಾಮೆ ಕೊಟ್ಟು ಹೋಗುತ್ತೇವೆ. ರೆಕಾರ್ಡ್ ತೆಗೆದು ತೋರಿಸಿ. ನಾನೇನಾದರೂ ರಿಪ್ಲೈ ಕೊಡುವುದಕ್ಕೆ ಮುಂಚೆ ಡಿವಿಷನ್ ಕೇಳಿದ್ದೇನೆಯೇ ಎಂಬುದನ್ನು ನೋಡಿ. ಸುಮ್ಮನೆ ನೀವು ಏನು ಬೇಕಾದರೂ ಮಾತನಾಡಿದರೆ ಆಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಉದ್ವೇಗದಲ್ಲಿ ಮಾತನಾಡಬೇಡಿ. ಯಡಿಯೂರಪ್ಪನವರೇ, ಉದ್ವೇಗದಲ್ಲಿ ಮಾತನಾಡಿದರೆ ಪ್ರಯೋಜನವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆಗಳು ಇವೆಯಲ್ಲಾ, ರೆಕಾರ್ಡ್ ತೆಗೆದು ತೋರಿಸಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಯಡಿಯೂರಪ್ಪನವರೇ, ಉದ್ವೇಗದಲ್ಲಿ ಮಾತನಾಡಿದರೆ ಪ್ರಯೋಜನವಿಲ್ಲ. ಸ್ವಲ್ಪ ನಿಗ್ರಹ ಇಟ್ಟುಕೊಳ್ಳಿ. ದಯಮಾಡಿ ಕೇಳಿ. ಇಲ್ಲಿರುವಾಗ ಉದ್ವೇಗ ಕೆಲಸ ಮಾಡುತ್ತದೆ. ಅಲ್ಲಿ ತಾಳ್ಮೆ ಇರಬೇಕಾಗುತ್ತದೆ. ಅಲ್ಲಿ ಉದ್ವೇಗ ಸಹಾಯ ಮಾಡುವುದಿಲ್ಲ.

SRI M.P. PRAKASH : There line ವಿಪ್ ಅನ್ನು ಯಾವಾಗ ಕೊಡಬೇಕು ಅನ್ನತಕ್ಕಂಥಾದ್ದು ಅವರಿಗೆ ಚೆನ್ನಾಗಿ ಗೊತ್ತಿದೆ. It is a weapon to be used sparingly. ಅದನ್ನು ನಾವು ಬಹಳ ಒತ್ತಾಯದ, ಸಂದಿಗ್ಧದ ಸನ್ನಿವೇಶಗಳು ಬಂಧಂಥ ಸಂದರ್ಭದಲ್ಲಿ ನೀವು ನಿಖರವಾಗಿ ಹಾಜರಾಗಿ, ಇಂಥಾದ್ದರ ಪರವಾಗಿ ಮತ ಕೊಡಬೇಕು ಎನ್ನತಕ್ಕಂಥಾದ್ದಕ್ಕೆ ವಿಪ್ ಅನ್ನು ಜಾರಿ ಮಾಡುತ್ತಾರೆ. ನಮ್ಮಲ್ಲಿ ಭಿನ್ನಾಭಿಪ್ರಾಯ ಎನ್ನುವ ಪ್ರಶ್ನೆ ಉದ್ಭವವಾಗದೇ ಇದ್ದಾಗ, ಸದುದ್ದೇಶದಿಂದ ತಂದಿರತಕ್ಕಂಥ ಒಂದು ವಿಚಾರದಲ್ಲಿ 3 line ವಿಪ್ ಏಕೆ ಕೊಡಲಿಲ್ಲ ಎಂದು ನೀವು ಕೇಳುವುದಾದರೆ, ನೀವೇಕೆ ನಿಮ್ಮವರಿಗೆ ವಿಪ್ ಕೊಡಲಿಲ್ಲ? ನೀವೂ ಕೊಡಬಹುದಾಗಿತ್ತಲ್ಲಾ. ಆತ್ಮಘಾತುಕವಾಗಿರತಕ್ಕಂಥ ಒಂದು ಕಾನೂನು ಬರುತ್ತಿದೆ, ನೀವ್ಯಾರೂ ಅಬ್ಸೆಂಟ್ ಆಗಬಾರದು ಎಂದು ನಿಮ್ಮ ಚೀಫ್ ವಿಪ್‌ನವರು ವಿಪ್ ಕೊಡಬಹುದಾಗಿತ್ತಲ್ಲಾ. ನಿಮ್ಮಲ್ಲೂ ಕೂಡ ವಿಪ್ ಇದ್ದಾರಲ್ಲವೇ? It is the discretion of the Leader of the Legislature Party.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಬಿಲ್ ಪಾಸ್ ಮಾಡತಕ್ಕಂಥ ಜವಾಬ್ದಾರಿ ನಿಮ್ಮ ಮೇಲಿದೆ.

ಶ್ರೀ ಎಂ.ಪಿ. ಪ್ರಕಾಶ್ : ಅದನ್ನು ವಿರೋಧ ಮಾಡತಕ್ಕಂಥ ಜವಾಬ್ದಾರಿ ನಿಮ್ಮ ಮೇಲೂ ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಮ್ಮ ಅರೇಂಜ್‌ಮೆಂಟ್ ನಾವು ಮಾಡಿಕೊಂಡಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ನೀವು ಮಾಡಿಲ್ಲ. ಅದನ್ನು ನೀವು ಮಾಡಿಲ್ಲ. I know that. ಬೇರೆಯವರಿಗೆ ಹೇಳತಕ್ಕಂಥಾದ್ದು ಸುಲಭ. It is very sparingly used weapon. ಅಂಥ ಸಂದರ್ಭ ಬಂದಾಗ ಮಾತ್ರ ನಾವು ಅದನ್ನು ಉಪಯೋಗಿಸುತ್ತೇವೆ. ನಿಮಗೂ ಕೂಡ ಪ್ರೊಸೀಜರ್ ಗೊತ್ತಿದೆ. ಡಿವಿಷನ್ ಅನ್ನು ಪ್ರೆಸ್ ಮಾಡಿದಾಗ ಬೆಲ್ ಹಾಕಬೇಕಲ್ಲವೇ? ಬೆಲ್ ಹಾಕಿದ ಮೇಲೆ ಅವಕಾಶಗಳನ್ನು ಕೊಟ್ಟ ಮೇಲೆಯೇ ಬಾಗಿಲುಗಳನ್ನು ಹಾಕುವುದು. ಬೆಲ್ ಆಗ ಹಾಕಿರಲಿಲ್ಲ. ದಯವಿಟ್ಟು ಶಾಂತರಾಗಿ ಕೇಳಿ. ಉದ್ವೇಗದಲ್ಲಿ ಮಾತನಾಡುವುದು ಬೇಡ ಎಂದು ಯಡಿಯೂರಪ್ಪನವರಿಗೆ ನೀವು ಹೇಳಿದ್ದೀರಿ. ನಾವ್ಯಾರೂ ಉದ್ವೇಗಕ್ಕೆ ಒಳಗಾಗತಕ್ಕಂಥಾದ್ದು ಇಲ್ಲ. ಯಾವುದೋ ಒಂದು ವಿಷಯದಲ್ಲಿ ಈ ಮಸೂದೆ ನಿಮ್ಮ ದೃಷ್ಟಿಕೋನದಿಂದ, ಇದು ನಮ್ಮ ಕನ್ನಡದ ಮಕ್ಕಳಿಗೆ ಮತ್ತು ಕನ್ನಡಿಗರಿಗೆ ಅನ್ಯಾಯವಾಗುತ್ತದೆ ಎಂದು ತಾವು ಹೇಳಿದ್ದೀರಿ.

ಶ್ರೀ ಎನ್. ಧರಂಸಿಂಗ್ : ಇವತ್ತು ಫ್ರೈಡೇ. ಎಲ್ಲಾ ಶಾಸಕರೂ ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಬೇಕಾಗಿದೆ. ಕನ್ನಡ ಮಕ್ಕಳಿಗೆ ಲಾಭವಾಗತಕ್ಕಂಥ ಬಿಲ್ ತಂದಿದ್ದೇವೆ ಎಂದು ನೀವು ಹೇಳಿದಿರಿ. ಆದರೆ ಅದನ್ನು ತರಾತುರಿಯಲ್ಲಿ ತರತಕ್ಕಂಥಾದ್ದೇ? ಶಿಕ್ಷಣ ಮಂತ್ರಿಗಳಿಗೆ ಕೇಳುತ್ತಿದ್ದೇನೆ, ತಾವು ಸರ್ಕಾರ ನಡೆಸುತ್ತಿದ್ದೀರಿ. ಏಕೆ ಇದನ್ನು ತಾವು ನಿನ್ನೆ ಮೊನ್ನೆ ತರಲಿಲ್ಲ? ಅಧಿವೇಶನ ಪ್ರಾರಂಭವಾಗಿದ್ದು ಯಾವಾಗ? ಈಗಾಗಲೇ ಎರಡೂವರೆ ಗಂಟೆಯಾಗಿದೆ. ಇದರ ಮೇಲೆ ಇನ್ನೂ ಬಹಳಷ್ಟು

ಸದಸ್ಯರು ಮಾತನಾಡುವವರಿದ್ದಾರೆ. ಈಗ ಇದು ಕೌನ್ಸಿಲ್‌ಗೆ ಹೋಗಬೇಕು. ಅಲ್ಲಿಂದ ಅದು ಮತ್ತೆ ಬರುವವರೆಗೆ ಕೂಡಬೇಕು. ಇದು ಸರ್ಕಾರ ನಡೆಸತಕ್ಕಂಥ ರೀತಿಯೇ? ಶಿಕ್ಷಣ ಸಚಿವರು ಏನು ಮಾಡುತ್ತಿದ್ದರು? ಇದು ಪಾಸ್ ಆಗದಿದ್ದರೆ, ಈ ರಾಜ್ಯದ ಕನ್ನಡದ ಮಕ್ಕಳಿಗೆ ಅನ್ಯಾಯವಾಗುತ್ತದೆ ಎಂದು ಹೇಳುತ್ತಾರೆ. ಇವತ್ತೇ ಪಾಸ್ ಆಗಬೇಕೇ? ಇವತ್ತೇ ಕೌನ್ಸಿಲ್‌ಗೆ ಹೋಗಬೇಕೇ? Is it the way?

ಶ್ರೀ ಆರ್. ದಿನೇಶ್ ಗುಂಡೂರಾವ್ : ನಾವೂ ಕೂಡ ಇದರ ಬಗ್ಗೆ ಮಾತನಾಡಬೇಕಾಗಿದೆ. ಇನ್ನೂ ಹಲವಾರು ಶಾಸಕರು ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ನಮಗೂ ಕೂಡ ಸಮಯ ಕೊಡಿ; ನಾವೂ ಮಾತನಾಡುತ್ತೇವೆ. ಏಕೆಂದರೆ, ಶಾಸನ ರಚನೆ ಮಾಡುವುದೇ ಈ ಮನೆಯ ಮುಖ್ಯ ಕರ್ತವ್ಯ.

ಶ್ರೀ ಎನ್. ಧರಂಸಿಂಗ್ : ಈಗಾಗಲೇ ಎರಡೂವರೆ ಗಂಟೆಯಾಗಿದೆ. ಕಡ್ಡಾಯವಾಗಿ ಈ ರೀತಿಯೇ ಅಧಿವೇಶನ ನಡೆಯಬೇಕೆಂದರೆ ಅದಕ್ಕೆ ನಮ್ಮ ಸಹಕಾರವಿಲ್ಲ.

ಅಧ್ಯಕ್ಷರು : ತಾವು ಹಿರಿಯ ಸದಸ್ಯರು, ಮುಖ್ಯಮಂತ್ರಿಯಾಗಿದ್ದವರು. ಸರ್ಕಾರ ಒಂದು ಬಿಲ್ ಅನ್ನು ಇಂಟ್ರೊಡ್ಯೂಸ್ ಮಾಡುತ್ತದೆ. ಅದನ್ನು ಪಾಸ್ ಮಾಡತಕ್ಕಂಥಾದ್ದು ಆಗಬೇಕು. ಅದು ಪಾಸ್ ಆಗಲಿ, ಬಿಡಲಿ. ಆ ಪ್ರಶ್ನೆ ಬೇರೆ. ನೀವೆಲ್ಲಾ ಮಾತನಾಡಿದ್ದೀರಿ. ಅವರು ಹತ್ತು ನಿಮಿಷ ಉತ್ತರ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆ ಈ ಪ್ರಶ್ನೆ ಉದ್ಭವಿಸಿತು ಎಂದರೆ, ಈಗಾಗಲೇ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ, ಸದನದಲ್ಲಿ ಇದರ ಬಗ್ಗೆ ಆಸಕ್ತಿ ವಹಿಸಿ, ಇದನ್ನು ಪಾಸ್ ಮಾಡಿಕೊಳ್ಳಬೇಕು ಎನ್ನತಕ್ಕಂಥ ಒಲವು ಕಾಣಲಿಲ್ಲ. ಮಾನ್ಯ ಎಂ.ಪಿ. ಪ್ರಕಾಶ್‌ರವರು ನಮ್ಮ ಮೇಲೇ ಜವಾಬ್ದಾರಿ ಇದೆ ಎಂದು ಹೇಳಿದರು. ನೀವೇನು ಮಾಡಿದಿರಿ ಎಂದು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್ : ನೀವು ಏಕೆ ವಿಪ್ ಕೊಟ್ಟಿಲ್ಲ ಎಂದಾಗ, ಅದನ್ನು ನೀವೂ ಕೊಟ್ಟಿಲ್ಲ ಎಂದು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಕೊಟ್ಟರೆ ನಾನೂ ಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಪ್ರಶ್ನೆ ಅದಲ್ಲ. ನಾನು ಹೇಳಿದುದು ಒಂದು ಪ್ರಶ್ನೆಗೆ ಒಂದು ಉತ್ತರ ಅಷ್ಟೇ. ನೀವು ಕೊಡಿ ಎಂದು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರಶ್ನೆಗೆ ಉತ್ತರವಲ್ಲ. ನಿಮ್ಮ ರೆಸ್ಪಾನ್ಸಿಬಿಲಿಟಿಯೇ ಬೇರೆ. ನಮ್ಮದೇ ಬೇರೆ. ನೀವು ಆಡಳಿತ ನಡೆಸುವವರು, ಕಾನೂನು ಪಾಸ್ ಮಾಡಿಕೊಳ್ಳಬೇಕು ಅನ್ನತಕ್ಕಂಥವರು. ಅದು ಆ ಮನೆಗೆ ಹೋದರೆ ಡಿಫೀಟ್ ಆದರೂ ಆಗಬಹುದು.

ಶ್ರೀ ಎಂ.ಪಿ. ಪ್ರಕಾಶ್ : ಬಿಲ್‌ನ್ನು ಸೋಲಿಸಬೇಕು ಎನ್ನುವ ಕಾರಣಕ್ಕಾಗಿಯೇ ಡಿವಿಷನ್‌ಗೆ ಪ್ರೆಸ್ ಮಾಡುತ್ತಿದ್ದೀರಿ. ಹೊಸ ಸಂಪ್ರದಾಯ ಹಾಕುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೌದೌದು. ಆದರೆ ಹೊಸ ಸಂಪ್ರದಾಯವಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನೀವು ಹೇಳಿದ ವಿಚಾರಗಳೆಲ್ಲಾ ಪತ್ರಿಕೆಯಲ್ಲಿ ಬರಬೇಕು. ಅದಕ್ಕೆ ನಾವು ಉತ್ತರ ಕೊಡಬಾರದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಲ್ಪ ಕೇಳಿ. ನಾನು ಒಂದು ಮಾತನ್ನು ಹೇಳುತ್ತೇನೆ. ನಿಮಗೆ ಇದರ ಬಗ್ಗೆ ಅಷ್ಟು ಆಸಕ್ತಿ ಇದ್ದರೆ, ತರಾತುರಿಯಲ್ಲಿ ಏಕೆ ಬಿಲ್ ಅನ್ನು ತರುತ್ತಿದ್ದೀರಿ? ಹೋದ ಸಲವೂ ನೀವು ಹಾಗೇ ಮಾಡಿದಿರಿ. ಹೋದ ಸಲ ನೀವು ಏನು ಹೇಳಿದಿರಿ, ನೀವು ಇದನ್ನು ಪಾಸ್ ಮಾಡದಿದ್ದರೆ ರಿಸರ್ವೇಷನ್ ಮಕ್ಕಳಿಗೆ ತೊಂದರೆಯಾಗುತ್ತದೆ, ಅವರಿಗೆ ಅನ್ಯಾಯವಾಗುತ್ತದೆ ಎಂದು ಇಡೀ ರಾಜ್ಯದ ತುಂಬ ಶಿಕ್ಷಣ ಸಚಿವರು ಡಂಗೂರ ಸಾರಿದರು. ಅದು ಏನಾಯಿತು ಈಗ? ಈಗ ಅದನ್ನು ಅಬೇಯೆನ್ಸ್‌ನಲ್ಲಿಟ್ಟಿದ್ದಾರೆ. ಈಗ ಪುನಃ 3ನೇ ತಾರೀಖು ಕೌನ್ಸಲಿಂಗ್ ಇದೆ ಎಂದು ಹೇಳುತ್ತಾ ಬಿಲ್ ಅನ್ನು ಇವತ್ತು ತಂದಿದ್ದೀರಿ. ಸದನ 18ನೇ ತಾರೀಖಿನಂದೇ ಪ್ರಾರಂಭವಾಯಿತು. ಇದುವರೆಗೆ ತಮಗೆ 8 ದಿವಸ ಟೈಂ ಇತ್ತಲ್ಲಾ. ಆಗ ಏಕೆ ತರಲಿಲ್ಲ? ನಿಮಗೆ ಇದರ ಬಗ್ಗೆ ಕಾಳಜಿ ಇದ್ದಿದ್ದರೆ, ಇದು ಕಾಂಟ್ರೋವರ್ಷಿಯಲ್ ಬಿಲ್, ಇದಕ್ಕೆ ವಿರೋಧ ಮಾಡುತ್ತಾರೆ ಎಂದು ಹೇಳಿ, ಸಮಯಕ್ಕೆ ಸರಿಯಾಗಿ ಇದನ್ನು ತಂದು ಪಾಸ್ ಮಾಡಿಕೊಳ್ಳಬೇಕು ಎಂದು ಏಕೆ ಮಾಡಲಿಲ್ಲ. ನಮಗೆ ನೀವು ನೂರು ಪ್ರಶ್ನೆ ಕೇಳುತ್ತೀರಿ. ಆದರೆ ನೀವೇಕೆ ಮಾಡಲಿಲ್ಲ? ಅಂದರೆ, ನಿಮಗೆ ಬೇಕಾದಾಗ ಬಿಲ್ ತರುವುದು, ತರಾತುರಿಯಲ್ಲಿ ತಂದು, ವಿದ್ಯಾರ್ಥಿಗಳ ಇಂಟರೆಸ್ಟ್‌ನಲ್ಲಿ ನಾವು ತರುತ್ತಿದ್ದೇವೆ. ನೋಡಿ ವಿರೋಧ ಪಕ್ಷದವರು ಇದಕ್ಕೆ ಅಪೋಸ್ ಮಾಡುತ್ತಿದ್ದಾರೆ ಎಂದು ಹೇಳಿಬಿಡುವುದು ಆಗುತ್ತಿದೆ. "ನಾವೆಲ್ಲರೂ ಕೂಡ ಬಡ ವಿದ್ಯಾರ್ಥಿಗಳ ಪರವಾಗಿದ್ದೇವೆ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಪರವಾಗಿದ್ದೇವೆ", ಅವರು ಮಾತ್ರ ವಿರೋಧಿಗಳು ಎನ್ನತಕ್ಕಂಥದ್ದು ಕೊನೇ ಗಳಿಗೆಯಲ್ಲಿ ಬಿಲ್ ತಂದು ತೋರಿಸುತ್ತಿದ್ದೀರಿ. ಅದೂ ಕೂಡ ಯಾವಾಗ ತಂದಿದ್ದೀರಿ? ಯಾವಾಗಲೂ ಮೊದಲಿನಿಂದ ಕೂಡ ಶುಕ್ರವಾರ ದಿವಸ Assembly 10 ಗಂಟೆಗೆ ಸೇರಿ ಮಧ್ಯಾಹ್ನ 2–00 ಗಂಟೆಗೆ adjourn ಆಗುತ್ತದೆ. ಬೇಕಾದರೆ ಕಡತ ತೆಗೆದು ನೋಡಿ. ಇತ್ತೀಚೆಗೆ ಅದನ್ನು ಮನಸ್ಸಿಗೆ ಬಂದ ಹಾಗೆ ನಡೆಸಲಾಗಿದೆ. ಈ ಹಿಂದಿನ ಎಲ್ಲಾ precedent ಗಳನ್ನು ನೀವು ತೆಗೆದುಕೊಂಡರೆ ಸದಸ್ಯರಾದವರು ನಾವು ಸೇರುವುದು ಬೆಳಗ್ಗೆ 10–00 ಗಂಟೆಗೆ adjourn ಆಗುವುದು ಮಧ್ಯಾಹ್ನ 2–00 ಗಂಟೆಗೆ. ಇದು ಗೊತ್ತಿದ್ದರೂ ಕೂಡ ತಾವು ಈ ಬಿಲ್ ಅನ್ನು ಇವತ್ತೇ ಏಕೆ ತೆಗೆದುಕೊಂಡಿರಿ? ಮತ್ತು ಇವತ್ತು ಮೇಲ್ಮನೆಗೆ ಹೋಗಿ ಪುನಃ ಇಲ್ಲಿಗೆ ಬರುವವರೆಗೆ ನಿಮಗೋಸ್ಕರ ಕಾಯಬೇಕು. ಇದರ ಬಗ್ಗೆ ಏನಾದರೂ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅನೇಕ ಸಾರಿ ಇಲ್ಲಿ ಹೇಗೆ ಆಗುತ್ತದೆ ಎಂಬುದು ತಮಗೂ ಗೊತ್ತಿದೆ. ಇಲ್ಲಿ ಬಜೆಟ್ ಮೇಲೆ ಚರ್ಚೆಯಾಗುತ್ತಿರುತ್ತದೆ. ಅನೇಕ ಸಲ ಯಾವುದೋ ಬಿಲ್ ಬರುತ್ತದೆ. ನಾವೆಲ್ಲರೂ ಇಲ್ಲಿ ಧರಣಿ ಕುಳಿತಿರುತ್ತೇವೆ ನೀವು voice vote ನಿಂದ pass ಮಾಡುತ್ತೀರಿ. ಈ ರೀತಿಯ ಎಷ್ಟೋ ಉದಾಹರಣೆಗಳಿವೆ. ಆದರೆ, ಇವತ್ತು

ನಾವು press ಮಾಡಿದ ಉದ್ದೇಶವೇನೆಂದರೆ, ಅವರ reply ಏನೆಂಬುದು ನಮಗೆ ಗೊತ್ತಿದೆ. ಏಕೆಂದರೆ, ಮಾನ್ಯ ಶಂಕರಮೂರ್ತಿಯವರು ಅವರ ಹೇಳಿಕೆಯಲ್ಲಿ ಬದಲಾವಣೆ ಮಾಡುವುದಿಲ್ಲ. Fee structure ನಲ್ಲಿ ಬದಲಾವಣೆ ಮಾಡುವುದಿಲ್ಲ. ನಾವು ಹೇಳಿದಂಥ quota system ನಲ್ಲಿ ಬದಲಾವಣೆ ಮಾಡುವುದಿಲ್ಲ. Management ಗೆ ಕೊಡತಕ್ಕಂಥದ್ದು ಮಾಡುವುದಿಲ್ಲ, P.U.C. and C.E.T. marks ಅನ್ನು combine ಮಾಡಿ ಯಾವ ರೀತಿಯಾಗಿ ತಮಿಳುನಾಡಿನಲ್ಲಿ ಮಾಡಿದ್ದಾರೋ ಅದೇ ರೀತಿಯಾಗಿ ನೀವು ಮಾಡುವುದಿಲ್ಲ. ಇದೆಲ್ಲವೂ ನಮಗೆ ಗೊತ್ತಿದೆ ಮತ್ತು ನಾವು ಹೇಳಿದ್ದೇ ಅದು, ಅವರು ಹೇಳಿದ್ದೇ ಅದು. ಇದು ಹೇಗಿದೆ ಎಂದರೆ, ನೀವು ಏನು ಹೇಳುವುದಿದೆಯೋ ಹೇಳಿ, ನಾನು ಹೇಳುವುದನ್ನು ಹೇಳುತ್ತೇನೆ, ಕೊನೆಗೆ ನಮ್ಮಲ್ಲಿ ಸಂಖ್ಯಾ ಬಲವಿದೆ pass ಮಾಡಿಕೊಂಡು ಹೋಗುತ್ತೇವೆ, ನೀವು ಏನು ಮಾಡುತ್ತೀರೋ ಮಾಡಿ ಎಂದು ಆ ಸಂಖ್ಯಾ ಬಲದ ಮೇಲೆ ಅವರು ಎದ್ದು ನಿಂತು ಹೇಳುತ್ತಿದ್ದಾರೆಯೇ ಹೊರತಾಗಿ, ಇದರಲ್ಲಿ "ಕಾನೂನು ಸರಿಪಡಿಸಿಕೊಳ್ಳೋಣ, ನೀವು ನಾವು ಕುಳಿತು ಚರ್ಚೆ ಮಾಡೋಣ" ಎಂದು ಆ ದಿವಸವೂ ಒಪ್ಪಲಿಲ್ಲ. ಇವತ್ತೂ ಕೂಡ ನೀವು ಒಪ್ಪುತ್ತಿಲ್ಲ. ಅಂದರೆ ಇದು ಅವರ ಹಠಮಾರಿತನ, ಮೊಂಡು ಧೋರಣೆ ಆಗಿದೆ ಮತ್ತು ಯಾವುದೇ ರೀತಿಯಿಂದ ಸಮಸ್ಯೆಗೆ ಪರಿಹಾರ ಸಿಗಲಿ ಎನ್ನತಕ್ಕಂಥ ಉದ್ದೇಶ ಅವರಿಗಿಲ್ಲ. ಹೊರತಾಗಿ ಇದು ಗೊಂದಲ ಇರಲಿ. ಇದೇ ರೀತಿಯಾಗಿ ನಡೆಯಲಿ ಎನ್ನತಕ್ಕಂಥ ಸ್ವಭಾವದವರು. ಅದಕ್ಕೋಸ್ಕರ ನಾವು division ಗೆ press ಮಾಡಿದ್ದು. ಅಧ್ಯಕ್ಷರಾದ ತಾವು ಯಾವಾಗ ಹಾಕಬೇಕು, ಯಾವಾಗ ಇಲ್ಲ ಎನ್ನುವುದನ್ನು ನಮಗೆಲ್ಲ precedure ಹೇಳಿದಿರಿ, ಅದನ್ನು ನಾವು ಇಲ್ಲ ಎಂದು ಹೇಳುವುದಿಲ್ಲ. ಆದರೆ ನಮಗೆ ಅವರು ಉತ್ತರ ಏನೆಂದು ಗೊತ್ತಾದ ಮೇಲೆ ಇನ್ನೂ ಕೇಳಿಕೊಂಡು ಒಂದು ತಾಸು ಕುಳಿತುಕೊಳ್ಳಬೇಕೇ?

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ನೀವೇನು ಹೇಳುತ್ತೀರಿ ಎನ್ನುವುದು ನಮಗೆ ಗೊತ್ತಿತ್ತು. ಆದರೂ ನಾವು ಕೇಳಿದ್ದೇವಲ್ಲಾ. ಇದನ್ನು ವಿರೋಧ ಮಾಡುತ್ತೀರಿ, ಇದೆಲ್ಲ ಗೊತ್ತಿದ್ದರೂ ಕೂಡ ನೀವು ಹೇಳುವುದನ್ನು ಕೇಳುತ್ತಿದ್ದೆವು.

(ಅಡಚಣೆ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಹೇಳುವುದೂ ಗೊತ್ತಿತ್ತು ಎಂದರೆ ಇದು ವಿತಂಡ ವಾದ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ಇದು ವಿತಂಡ ವಾದ ಅಲ್ಲ. ಇದು ಅನಿವಾರ್ಯವಾದದ್ದು. ನೀವು ಹೇಳುವುದನ್ನು ನಾವು ಕೇಳಬೇಕು. ನಾವು ಹೇಳುವುದನ್ನು ನೀವು ಕೇಳಬೇಕು. You are the seniormost member of this House.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : .... ಅದೊಂದು ಪದ್ಧತಿಯೇ ಇದೆ. ನೀವು ಏನು ಹೇಳಬೇಕೋ ಹೇಳಿ ಎಂದು ಹೇಳಿದಿರಿ. ಈಗಾಗಲೇ ಡಾ: ಆಚಾರ್ಯರವರು ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರ ಬಿಟ್ಟು ಬೇರೆ ಉತ್ತರವಂತೂ ಅಲ್ಲಿ ಬರಲಿಕ್ಕೆ ಸಾಧ್ಯವಿಲ್ಲ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರೇ, ಈಗ ನಾವು division ಅನ್ನು press ಮಾಡುವುದಿಲ್ಲ. ಅದು ಸ್ಪಷ್ಟ. ಏಕೆಂದರೆ ಎಷ್ಟು ತರಾತುರಿಯಿಂದ ಎಷ್ಟು ಸಮರೋಪಾದಿಯಲ್ಲಿ ನೀವು ಒಳಗಡೆಗೆ ನುಗ್ಗಿದ್ದೀರಿ ಎಂದು ನೋಡಿದಾಗ ನಮಗೆ ಗೊತ್ತಾಯಿತು. ಈಗ ನಾವೇನೂ ಮಾಡವುದಕ್ಕೆ ಹೋಗುವುದಿಲ್ಲ. ಆದರೆ ಈಗ ತಮ್ಮನ್ನು ನಾನು ಏನು ಕೇಳುತ್ತಿದ್ದೇನೆಂದರೆ, ದಯವಿಟ್ಟು ಸದನವನ್ನು ಊಟದ ಸಲುವಾಗಿ ಮುಂದಕ್ಕೆ ಹಾಕಿ. ಈಗ ಮಧ್ಯಾಹ್ನ ಎರಡೂವರೆ ಗಂಟೆಯಾಗಿದೆ. ಇದು ಸರಿಯಿಲ್ಲ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅವರ ಉತ್ತರವನ್ನು ಕೇಳಬೇಕೆಂದರೆ ಇನ್ನೂ ಕೂಡ ಮೂರ್‍ನಾಲ್ಕು ಜನ ಮಾತನಾಡುವವರಿದ್ದಾರೆ. ನಮ್ಮ ಕಡೆಯಿಂದ ಶ್ರೀ ದಿನೇಶ್ ಗುಂಡೂರಾವ್‌ರವರು, ರಾಜಾಜಿನಗರದ ಶಾಸಕರು ಮಾತನಾಡುವವರಿದ್ದಾರೆ. ಅವರಿಗೆಲ್ಲಾ ಅವಕಾಶ ಕೊಟ್ಟ ಮೇಲೆ ಉತ್ತರ ಕೊಡಿ.

(ಅಡಚಣೆ)

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಪ್ರಾರಂಭ ಮಾಡಿ.

(ಅಡಚಣೆ)

ಶ್ರೀ ಆರ್. ದಿನೇಶ್ ಗುಂಡೂರಾವ್ : ಈಗ ಬಹಳ ಜನ ಮಾತನಾಡುವವರಿದ್ದಾರೆ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ಈಗ ಆಗುವುದಿಲ್ಲ. ಈಗ ಊಟದ ಸಲುವಾಗಿ ಸದನವನ್ನು ಮುಂದೂಡಿ.

(ಅಡಚಣೆ)

ಅಧ್ಯಕ್ಷರು : ಈ ಬಿಲ್ ಬಗ್ಗೆ ಸಾಕಷ್ಟು ಜನ ಮಾತನಾಡಿದ್ದೀರಿ. ಸಾಕಷ್ಟು ಚರ್ಚೆಯಾಗಿದೆ. ಅವರು ಉತ್ತರ ಕೊಡುತ್ತಾರೆ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ನಮ್ಮ ಕಡೆಯಿಂದ ನಾಲ್ಕೈದು ಶಾಸಕರು ಮಾತನಾಡುತ್ತಾರೆ.

(ಅಡಚಣೆ)

ಅಧ್ಯಕ್ಷರು : ಸಾಕಷ್ಟು ಚರ್ಚೆಯಾಗಿದೆ. ಎಲ್ಲರೂ ಹೀಗೆ ಮಾತನಾಡಿದರೆ ಹೇಗೆ? ಈಗ ಅವರು ಉತ್ತರ ಕೊಡಲಿ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ನಾವು ಕೇಳಿದಕ್ಕೆ ಅವಕಾಶ ಕೊಡುತ್ತಿಲ್ಲ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ಯಾವಾಗಲೂ ಬಹಳ ತರಾತುರಿಯಲ್ಲಿ bill ತರುತ್ತೀರಿ. ಮೇನೇಜ್‌ಮೆಂಟ್ ಜೊತೆ ಒಪ್ಪಂದ ಮಾಡಿಕೊಂಡು ಈ ಸರ್ಕಾರ ರಾಜ್ಯದ ವಿದ್ಯಾರ್ಥಿಗಳಿಗೆ ದ್ರೋಹ ಮಾಡುತ್ತಿದ್ದಾರೆ. ನಾವು ಪ್ರತಿಭಟಿಸಿ ಹೊರಗಡೆ ಹೋಗುತ್ತೇವೆ.

(ಅಡಚಣೆ)

(ವಿರೋಧ ಪಕ್ಷದ ಸದಸ್ಯರಿಂದ ಸಭಾತ್ಯಾಗ)

ಅಧ್ಯಕ್ಷರು : ಸಂಬಂಧಪಟ್ಟ ಸಚಿವರು ಉತ್ತರ ಹೇಳಬೇಕು.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಬಡಮಕ್ಕಳಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳ ಪರವಾಗಿ ಇರತಕ್ಕಂಥ, ಬಡವರ ಪರವಾಗಿರತಕ್ಕಂಥ, ಹಿಂದುಳಿದ ವರ್ಗದ ಮಕ್ಕಳ ಪರವಾಗಿ ತಂದಿರುವ ಈ ವಿಧೇಯಕವನ್ನು ಸಭೆಯು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 8ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 8ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಸಭೆಯನ್ನು ಭೋಜನ ಸಲುವಾಗಿ ಪುನಃ ಮಧ್ಯಾಹ್ನ 3–30 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5.55 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು).

4. ವಿತ್ತೀಯ ಕಾರ್ಯಕಲಾಪಗಳು

2006–07ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು : ಈಗ ಬೇಡಿಕೆಗಳನ್ನು ತೆಗೆದುಕೊಳ್ಳೋಣ. ರಾಮಸ್ವಾಮಿಯವರೇ ನಿಯಮ 69ರ ಮೇಲೆ ಮಾತನಾಡಿ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದಲ್ಲಿ ಮಾನ್ಯ ಸದಸ್ಯರೊಬ್ಬರೂ ಕೂಡ ಬಂದಿಲ್ಲ. ಹಾಗಾಗಿ ಸೋಮವಾರ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಈ ಒಂದು ಸದನಕ್ಕೆ ಏನೊಂದು ಗೌರವವನ್ನು ಕೊಡಬೇಕಾಗಿದೆಯೋ ಅದನ್ನು ಕೊಡುವಂಥ ಜವಾಬ್ದಾರಿಯನ್ನು